ಕರ್ನಾಟಕ ಸರ್ಕಾರ

**ಜಿಲ್ಲಾಡಳಿತ, ಜಿಲ್ಲಾ ಪಂಚಾಯತ ಧಾರವಾಡ,**

# ಉಪನಿರ್ದೇಶಕರ ಕಚೇರಿ, ಶಾಲಾ ಶಿಕ್ಷಣ ಇಲಾಖೆ, ಧಾರವಾಡ







ವಿಷಯ : ದ್ವಿತೀಯ ಭಾಷೆ
ಕನ್ನಡ




## ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಯಶಸ್ವಿಯಾಗಲು ವಿದ್ಯಾರ್ಥಿಸ್ನೇಹಿ ಅಧ್ಯಯನ ಸಂಪನ್ಮೂಲ





**ಸಹಕಾರ**

ಉಪನಿರ್ದೇಶಕರು (ಆಡಳಿತ) ಹಾಗೂ (ಅಭಿವೃದ್ಧಿ)

ಶಿಕ್ಷಣಾಧಿಕಾರಿಗಳು, ಜಿಲ್ಲಾ ಯೋಜನಾ ಉಪಸಮನ್ವಯಾಧಿಕಾರಿಗಳು, ಕ್ಷೇತ್ರಶಿಕ್ಷಣಾಧಿಕಾರಿಗಳು, ವಿಷಯ ಪರಿವೀಕ್ಷಕರು ಮತ್ತು ಕನ್ನಡ ಭಾಷಾ ಪರಿವಾರ

ಕರ್ನಾಟಕ ಸರ್ಕಾರ

ಜಿಲ್ಲಾ ಆಡಳಿತ, ಧಾರವಾಡ

ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಧಾರವಾಡ

ದ್ವಿತೀಯ ಭಾಷಾ ಕನ್ನಡ ಭಾಷಾ ಕನ್ನಡ ಕೈದೀವಿಗೆ

# ಎಸ್.ಎಸ್.ಎಲ್.ಸಿ ವಿದ್ಯಾರ್ಥಿಗಳ ಉತ್ತೀರ್ಣತೆಯತ್ತ ಕೈದೀವಿಗೆಯ ಚಿತ್ತ

ಕಲ್ಪನೆ : ಶ್ರೀಮತಿ ದಿವ್ಯಪ್ರಭು ಜಿ.ಆರ್.ಜೆ.

ಮಾನ್ಯ ಜಿಲ್ಲಾಧಿಕಾರಿಗಳು ಧಾರವಾಡ

ಮಾರ್ಗದರ್ಶನ : ಶ್ರೀ ಎಸ್. ಎಸ್. ಕೆಳದಿಮಠ

ಉಪನಿರ್ದೇಶಕರು (ಆಡಳಿತ) ಶಾ.ಶಿ.ಇಲಾಖೆ

ಸಲಹೆಗಾರರು : ಶ್ರೀ ಉಮೇಶ ಬಮ್ಮಕ್ಕನವರ

ಕ್ಷೇತ್ರ ಶಿಕ್ಷಣಾಧಿಕಾರಿಗಳು ಹುಬ್ಬಳ್ಳಿ ಗ್ರಾಮೀಣ

ಪ್ರೋತ್ಸಾಹ : ಶ್ರೀಮತಿ ಡಾ|| ರೇಣುಕಾ ಅಮಲ್ಝರಿ

ಸ.ಯೋ.ಸಂ.ಅ. ಶಾ.ಶಿ.ಇ. ಧಾರವಾಡ

ಶ್ರೀಮತಿ ರೇಣುಕಾ ಇಂಗಳಕಿ

ಕನ್ನಡ ವಿಷಯ ಪರಿವೀಕ್ಷಕರು ಶಾ.ಶಿ.ಇ. ಧಾರವಾಡ

## ಸಂಪನ್ಮೂಲ ರಚನಾ ತಂಡ

ಶ್ರೀ.ವೆಂಕಟೇಶ ಭೋವಿ
ಬಿ.ಆರ್.ಪಿ. ಪ್ರೌಢ ಶಾಲಾ ವಿಭಾಗ,
ನವಲಗುಂದ

ಶ್ರೀ.ಎಸ್.ಎಸ್.ಹೊನ್ನಾಪೂರ
ಸಹಶಿಕ್ಷಕರು,
ಸ.ಶಿ.ಪ.ಉ.ಪ್ರೌ.ಶಾಲೆ ಅಣ್ಣಿಗೇರಿ

ಶ್ರೀಮತಿ ಮಂಜುಳಾ ಧೂಳೆಹೊಳಿ
ಸಹಶಿಕ್ಷಕಿ
ಸರ್ಕಾರಿ ಆದರ್ಶ ವಿದ್ಯಾಲಯ ಧಾರವಾಡ

ಕರ್ನಾಟಕ ಸರಕಾರ

# ಜಿಲ್ಲಾಡಳಿತ ಧಾರವಾಡ



ಮಾನ್ಯ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ದಂಡಾಧಿಕಾರಿಗಳು,
ಧಾರವಾಡ ಜಿಲ್ಲೆ, ಧಾರವಾಡ.

**ಶ್ರೀಮತಿ ದಿವ್ಯಪ್ರಭು ಜಿ.ಆರ್.ಜೆ. ಭಾ.ಆ.ಸೇ**

# ಆಶಯ

ಪ್ರಿಯ ವಿದ್ಯಾರ್ಥಿಗಳೇ,

ಈ ಸಂದೇಶವು ನಿಮ್ಮಲ್ಲಿ ಶ್ರದ್ಧೆಯಿಂದ ಓದುವ ಮತ್ತು ಆತ್ಮವಿಶ್ವಾಸದಿಂದ ಎಸ್.ಎಸ್.ಎಲ್.ಸಿ ಪರೀಕ್ಷೆಯನ್ನು ಎದುರಿಸಿ ಉತ್ತಮ ಫಲಿತಾಂಶವನ್ನು ಪಡೆಯುವ ಶಕ್ತಿಯನ್ನು ತುಂಬುತ್ತದೆ ಎಂದು ನಾನು ಭಾವಿಸುತ್ತೇನೆ.

ಧಾರವಾಡ ಜಿಲ್ಲೆಯ ಶಿಕ್ಷಣ ತಜ್ಞರೆಲ್ಲ ಸೇರಿಕೊಂಡು, "ಮಿಷನ್ ವಿದ್ಯಾಕಾಶಿ" ಎಂಬ ಪರೀಕ್ಷಾ ಫಲಿತಾಂಶ ಸುಧಾರಣಾ ಯಶಸ್ಸಿನ ಓಟಕ್ಕೆ ಎಸ್.ಎಸ್.ಎಲ್.ಸಿ. ವಿದ್ಯಾರ್ಥಿಗಳಾದ ತಮ್ಮನ್ನೆಲ್ಲ ಸಿದ್ಧಗೊಳಿಸಲು ಸನ್ನದ್ಧರಾಗಿದ್ದಾರೆ. ನಿಮ್ಮಲ್ಲಿ ಪ್ರತಿಯೊಬ್ಬರೂ ಪ್ರತಿಭೆ, ಸಾಮರ್ಥ್ಯ ಮತ್ತು ಕನಸುಗಳನ್ನು ಹೊಂದಿದ್ದೀರಿ, ಅದು ಸಾಕಾರಗೊಳ್ಳಲು ಕಾಯುತ್ತಿದೆ. ನಿಮ್ಮ ಉತ್ತಮ ಭವಿಷ್ಯಕ್ಕೆ ಮತ್ತು ಮಹೋನ್ನತ ಗುರಿಯ ಸಾಧನೆಗೆ ಎಸ್.ಎಸ್.ಎಲ್.ಸಿ. ಪರೀಕ್ಷೆಯು ಮಹತ್ವದ ಘಟ್ಟವಾಗಿದೆ. ಈ ಪರೀಕ್ಷೆಯಲ್ಲಿ ಉತ್ತಮ ಅಂಕ ಗಳಿಸಲು ನಿರಂತರ ಅಧ್ಯಯನದ ಅವಶ್ಯಕತೆ ಇದೆ. ಹಾಗಾದರೆ ದಿನನಿತ್ಯದ ನಮ್ಮ ಅಧ್ಯಯನ ಹೇಗಿರಬೇಕು? ಎಂಬ ಪ್ರಶ್ನೆಯು ಪ್ರತಿಯೊಬ್ಬರನ್ನೂ ಕಾಡಿರುತ್ತದೆ. ಈ ಕುರಿತಂತೆ ಮಹಾತ್ಮಾ ಗಾಂಧೀಜಿಯವರು 'ನಾವು ಏನನ್ನು ಓದುತ್ತೇವೆಯೋ ಅದರ ಬಗ್ಗೆ ಚಿಂತಿಸಬೇಕು, ಅದನ್ನು ಜೀರ್ಣಿಸಿಕೊಳ್ಳಬೇಕು ಹಾಗೂ ಅದು ನಮ್ಮ ದಿನನಿತ್ಯ ಜೀವನದ ಒಂದು ಅವಿಭಾಜ್ಯ ಅಂಗವಾಗಿರಬೇಕು' ಎಂದು ಹೇಳಿದ್ದನ್ನು ಮೆಲುಕು ಹಾಕುತ್ತಾ ಪ್ರತಿ ದಿನ ತರಗತಿಯಲ್ಲಿ ಶಿಕ್ಷಕರು ತಿಳಿಸುವ ವಿಷಯಗಳನ್ನು ಸರಿಯಾಗಿ ಮನನ ಮಾಡಿಕೊಂಡು ಪುನಃ ಪುನಃ ದೃಢೀಕರಿಸಿಕೊಳ್ಳಲು ಪ್ರಾಮಾಣಿಕ ಪ್ರಯತ್ನ ಮಾಡಬೇಕು.

ಪ್ರಸ್ತುತ ಶೈಕ್ಷಣಿಕ ವರ್ಷದಲ್ಲಿ ಎಸ್.ಎಸ್.ಎಲ್.ಸಿ. ಪರೀಕ್ಷೆಗೆ ಹಾಜರಾಗುತ್ತಿರುವ ಎಲ್ಲ ವಿದ್ಯಾರ್ಥಿಗಳೂ ಪರೀಕ್ಷೆಯಲ್ಲಿ ಉತ್ತಮ ಅಂಕ ಗಳಿಸಲು ಸರಳವಾಗಿ ಮತ್ತು ಸುಲಭವಾಗಿ ತಿಳಿಯುವಂತೆ ಪೂರಕ ಸಾಹಿತ್ಯವನ್ನು ಸಂಪನ್ಮೂಲ ಶಿಕ್ಷಕರ ಸಹಕಾರದೊಂದಿಗೆ ಸಿದ್ಧಪಡಿಸಲಾಗಿರುತ್ತದೆ. ವಿದ್ಯಾರ್ಥಿಗಳು ಈ ಕಲಿಕಾ ಸಂಪನ್ಮೂಲವನ್ನು ಸದುಪಯೋಗಪಡಿಸಿಕೊಂಡು ಉತ್ತಮವಾದ ಫಲಿತಾಂಶವನ್ನು ಪಡೆಯಲಿ ಮತ್ತು ರಾಜ್ಯದಲ್ಲಿ ಧಾರವಾಡ ಜಿಲ್ಲೆಯ ಪ್ರತಿಶತ ಫಲಿತಾಂಶವೂ ಕೂಡ ಹೆಚ್ಚಾಗಲಿ ಎಂದು ಶುಭ ಹಾರೈಸುತ್ತೇನೆ.

**ಶ್ರೀಮತಿ ದಿವ್ಯಪ್ರಭು ಜಿ.ಆರ್.ಜೆ. ಭಾ.ಆ.ಸೇ**
ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ದಂಡಾಧಿಕಾರಿಗಳು,
ಧಾರವಾಡ ಜಿಲ್ಲೆ, ಧಾರವಾಡ.

ಕರ್ನಾಟಕ ಸರಕಾರ

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಶಾಲಾಶಿಕ್ಷಣ ಇಲಾಖೆ

ಧಾರವಾಡ



# ಮುನ್ನುಡಿ

ಪ್ರತಿಯೊಂದು ಮಗು ಗುಣಾತ್ಮಕ ಶಿಕ್ಷಣವನ್ನು ಪಡೆದು ಭವಿಷ್ಯವನ್ನು ಉತ್ತಮವಾಗಿ ಕಟ್ಟಿಕೊಳ್ಳಲು ಶಾಲಾ ಶಿಕ್ಷಣ ಇಲಾಖೆಯು ಹಲವಾರು ಪ್ರಯತ್ನಗಳನ್ನು ಮಾಡುತ್ತಲೇ ಇರುತ್ತದೆ. ಪ್ರತಿಯೊಂದು ಮಗು ವೈಯಕ್ತಿಕ ಭಿನ್ನತೆಯನ್ನು ಹೊಂದಿದ್ದು ಅದಕ್ಕೆ ಅನುಗುಣವಾಗಿ ಶಿಕ್ಷಕರು ವಿವಿಧ ಕಲಿಕಾ ಬೋಧನಾ ವಿಧಾನಗಳನ್ನು ಅನುಸರಿಸಿ ಉತ್ತಮ ಕಲಿಕೆಗಾಗಿ ಶ್ರಮಿಸುತ್ತಾರೆ. ವಿದ್ಯಾರ್ಥಿಗಳ ಕಲಿಕಾ ಗುಣಮಟ್ಟವನ್ನು ಪರೀಕ್ಷೆಗಳ ಮೂಲಕ ಮೌಲ್ಯಮಾಪನ ಮಾಡಲಾಗುತ್ತದೆ..

ವಿದ್ಯಾರ್ಥಿ ಜೀವನದಲ್ಲಿ ಎಸ್.ಎಸ್.ಎಲ್.ಸಿ. ಪರೀಕ್ಷೆಯು ಒಂದು ಮಹತ್ವದ ಮೈಲುಗಲ್ಲಾಗಿದೆ. ಪ್ರತಿಯೊಬ್ಬ ವಿದ್ಯಾರ್ಥಿಯು ಇದರಲ್ಲಿ ಯಶಸ್ಸನ್ನು ಪಡೆಯುವುದು ಅನಿವಾರ್ಯವಾಗಿದೆ. ಈ ಹಿನ್ನಲೆಯಲ್ಲಿ ಎಲ್ಲ ವಿದ್ಯಾರ್ಥಿಗಳು ಉತ್ತಮ ಅಂಕಗಳನ್ನು ಪಡೆಯುವ ಮೂಲಕ ಉತ್ತೀರ್ಣರಾಗಿ ಮುಂದಿನ ಶಿಕ್ಷಣಕ್ಕೆ ಅರ್ಹತೆ ಸಾಧಿಸಬೇಕು ಎಂಬ ಉದ್ದೇಶದಿಂದ ಎಲ್ಲ ವಿಷಯಗಳಲ್ಲಿ ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ಪೂರಕ ಸಾಹಿತ್ಯವಾಗಿ ಕಿರುಹೊತ್ತಿಗೆಯನ್ನು ಸಂಪನ್ಮೂಲ ಶಿಕ್ಷಕರು ಸಿದ್ದಪಡಿಸಿರುತ್ತಾರೆ. ಇವು ಮುಂಬರುವ ಪರೀಕ್ಷೆಯನ್ನು ಎದುರಿಸಲು ಹೆಚ್ಚು ಸಹಕಾರಿಯಾಗುತ್ತವೆ ಎಂಬ ವಿಶ್ವಾಸವಿದೆ. ವಿದ್ಯಾರ್ಥಿಗಳ ವೈಯಕ್ತಿಕ ಭಿನ್ನತೆಯ ಕಲಿಕೆಯ ವೇಗಗಳ ಹಿನ್ನಲೆಯಲ್ಲಿ ಶಿಕ್ಷಕರು ಈ ಪೂರಕ ಸಾಹಿತ್ಯವನ್ನು ಮಾದರಿಯಾಗಿಸಿಕೊಂಡು ಉತ್ತಮ ಫಲಿತಾಂಶವನ್ನು ಪಡೆಯಲು ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ಮಾಡಲಿ ಹಾಗೂ ವಿದ್ಯಾರ್ಥಿಗಳು ಈ ಕಲಿಕಾ ಸಂಪನ್ಮೂಲವನ್ನು ಸದುಪಯೋಗಪಡಿಸಿಕೊಂಡು ಪರೀಕ್ಷೆಯನ್ನು ಆತ್ಮವಿಶ್ವಾಸದಿಂದ ಎದುರಿಸಿ ಯಶಸ್ಸನ್ನು ಗಳಿಸಲಿ ಎಂದು ಹಾರೈಸುತ್ತೇನೆ.

ಎಸ್.ಎಸ್.ಕೆಳದಿಮಠ

ಉಪನಿರ್ದೇಶಕರು(ಆಡಳಿತ) ಶಾಲಾ ಶಿಕ್ಷಣ ಇಲಾಖೆ ಧಾರವಾಡ

# ಪರಿವಿಡಿ

| ಅ.ಸಂ | ವಿಷಯ | ಪುಟ ಸಂಖ್ಯೆ | ನಿರೀಕ್ಷಿತ ಅಂಕಗಳು |
|---|---|---|---|
| 01 | ಒಂದು ಅಂಕದ ಪ್ರಶ್ನೆಗಳು | 3 - 7 | 12 |
| 02 | ಮೂರ್ನಾಲ್ಕು ವಾಕ್ಯದ ಪ್ರಶ್ನೆಗಳು | 8 -10 | 16 |
| 03 | ಪದ್ಯ ಕಂಠಪಾಠ | 11 | 04 |
| 04 | ಲೇಖಕರ/ಕವಿಗಳ ಪರಿಚಯ | 12 - 14 | 03 |
| 05 | ಗಾದೆಮಾತುಗಳ ವಿವರಣೆ | 15 - 17 | 03 |
| 06 | ಪದ್ಯದ ಸಾರಾಂಶ | 17 - 24 | 03 |
| 07 | ಸಂದರ್ಭದೊಡನೆ ವಿವರಣಾ ಪ್ರಶ್ನೆಗಳು | 24 - 36 | 15 |
| 08 | ಪ್ರಬಂಧ ರಚನೆ | 37 - 39 | 04 |
| 09 | ಪತ್ರ ಲೇಖನ | 40 - 41 | 05 |
| 10 | ಅಲಂಕಾರದ ಪ್ರಶ್ನೆಗಳು | 42 - 45 | 03 |
| | | ಒಟ್ಟು | 68 |

**ಒಂದು ಅಂಕದ ಪ್ರಶ್ನೆಗಳು – 12(12x1=12)**

**ಎರಡು ಅಂಕದ ಪ್ರಶ್ನೆಗಳು – 8(8x2=16)**

**ಪದ್ಯ ಕಂಠಪಾಠ – 1(1x4=04)**

**ಸಂದರ್ಭದೊಡನೆ ವಿವರಿಸಿ - 5(5x3 =15)**

**ಲೇಖಕರ ಪರಿಚಯ – 1(1x3=03)**

**ಗಾದೆಮಾತುಗಳ ವಿವರಣೆ – 1 (1x3=03)**

**ಪತ್ರಲೇಖನ -1 (1x5=05)**

**ಪ್ರಬಂಧ ರಚನೆ – 1 (1x4=04)**

**ಅಲಂಕಾರ – 1(1x3=03)**

**ಪದ್ಯದ ಭಾವಾರ್ಥ – 1(1x3=03)**

## ಒಂದು ಅಂಕದ ಪ್ರಶ್ನೋತ್ತರಗಳು

## ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ

### ಒಣ ಮರದ ಗಿಳಿ

1.ಬೇಡನು ಪ್ರಾಣಿಗಳನ್ನು ಕೊಲ್ಲಲು ಮಾಡುತ್ತಿದ್ದ ಉಪಾಯವೇನು?
ಉತ್ತರ: ಬೇಡನು ಪ್ರಾಣಿಗಳನ್ನು ಕೊಲ್ಲಲು ವಿಷ ಸವರಿದ ಬಾಣಗಳನ್ನು ಸಿದ್ಧಮಾಡಿಕೊಂಡಿರುತ್ತದ್ದ.
2.ವಿಷದ ಬಾಣವು ಮರಕ್ಕೆ ಏಕೆ ತಗುಲಿತು?
ಉತ್ತರ: ಜಿಂಕೆಯು ಬೇಡನ ಬಾಣದಿಂದ ಹಾರಿ ತಪ್ಪಿಸಿಕೊಂಡಿದ್ದರಿಂದ ವಿಷದ ಬಾಣವು ಮರಕ್ಕೆ ತಗುಲಿತು.
3.ವಿಷದ ಬಾಣವು ಮರಕ್ಕೆ ತಗುಲಿದ್ದರಿಂದಾದ ಪರಿಣಾಮವೇನು?
ಉತ್ತರ: ವಿಷದ ಬಾಣವು ಮರಕ್ಕೆ ತಗುಲಿದ್ದರಿಂದ ಮರವು ಒಣಗಿ ನಿಂತಿತು.
4.ಇಂದ್ರನಿಗೆ ಗಿಳಿಯನ್ನು ಕಂಡು ಆಶ್ಚರ್ಯವಾದದ್ದು ಏಕೆ?
ಉತ್ತರ: ಮರವು ಒಣಗಿ ನಿಂತರೂ ಗಿಳಿಯು ಅದರಲ್ಲಿ ವಾಸವಾಗಿರುವುದನ್ನು ಕಂಡು ಇಂದ್ರನಿಗೆ ಆಶ್ಚರ್ಯವಾಯಿತು.
5.ಗಿಳಿಯ ಯಾವ ಗುಣವನ್ನು ಇಂದ್ರನು ಮೆಚ್ಚಿಕೊಂಡನು?
ಉತ್ತರ: ಗಿಳಿಯ ತತ್ವನಿಷ್ಠೆಯ ಗುಣವನ್ನು ಇಂದ್ರನು ಮೆಚ್ಚಿಕೊಂಡನು.
6.ಇಂದ್ರನು ತನಗಾದ ಸಂತೋಷವನ್ನು ಯಾವ ರೀತಿ ಪ್ರಕಟಿಸಿದನು?
ಉತ್ತರ: ಗಿಳಿಗೆ ವರವನ್ನು ಕೊಡುವುದರ ಮೂಲಕ ಇಂದ್ರನು ತನಗಾದ ಸಂತೋಷವನ್ನು ಪ್ರಕಟಿಸಿದನು.

### ಅಸಿ ಮಸಿ ಕೃಷಿ

7.ದೇಶದ ಉದ್ಧಾರ ಯಾರು ಯಾರನ್ನು ಅವಲಂಬಿಸಿದೆ ಎಂದು ಲೇಖಕರು ಹೇಳಿದ್ದಾರೆ?
ಉತ್ತರ: ದೇಶದ ಉದ್ಧಾರ ಅಸಿ ಮಸಿ ಕೃಷಿಯನ್ನು ಅವಲಂಬಿಸಿದೆ ಎಂದು ಲೇಖಕರು ಹೇಳಿದ್ದಾರೆ.
8.ಅಸಿ–ಮಸಿ ಎಂದರೇನು?
ಉತ್ತರ: ಅಸಿ ಎಂದರೆ ಯುದ್ಧ ಅಥವಾ ಸೈನಿಕ ಮಸಿ ಎಂದರೆ ಸಾಹಿತ್ಯ ರಚನೆ.
9.ಈ ನಾಡಿನ ಬೆನ್ನೆಲುಬು ಯಾರು?
ಉತ್ತರ: ಈ ನಾಡಿನ ಬೆನ್ನೆಲುಬು ರೈತ/ಕೃಷಿಕ.
10.ಶ್ರೀ ಪಂಡಿತಾರಾಧ್ಯ ಶಿವಚಾರ್ಯರು ಏನೆಂದು ಪ್ರಸಿದ್ಧರಾಗಿದ್ದಾರೆ?
ಉತ್ತರ: ಶ್ರೀ ಪಂಡಿತಾರಾಧ್ಯ ಶಿವಾಚಾರ್ಯರು ರಂಗಜಂಗಮ ಎಂದು ಪ್ರಸಿದ್ಧರಾಗಿದ್ದಾರೆ.
11.ಶ್ರೀ ಪಂಡಿತಾರಾಧ್ಯ ಶಿವಾಚಾರ್ಯರಿಗೆ ರೋಟರಿ ಸಂಸ್ಥೆ ಯಾವ ಪ್ರಶಸ್ತಿ ನೀಡಿದೆ?
ಉತ್ತರ: ಶ್ರೀ ಪಂಡಿತರಾಧ್ಯ ಶಿವಾಚಾರ್ಯರಿಗೆ ರೋಟರಿ ಸಂಸ್ಥೆ ಪಾಲ್ ಹ್ಯಾರಿಸ್ ಪ್ರಶಸ್ತಿ ನೀಡಿದೆ.

### ಗಾನಯೋಗಿ ಪಂಡಿತ ಪುಟ್ಟರಾಜ ಗವಾಯಿ

12.ಪುಟ್ಟರಾಜರ ತಂದೆ ತಾಯಿಗಳ ಹೆಸರೇನು?
ಉತ್ತರ: ಪುಟ್ಟರಾಜರ ತಂದೆ ರೇವಣ್ಣಯ್ಯಾ ತಾಯಿ ಸಿದ್ಧಮ್ಮ.
13.ಶ್ರೇಷ್ಠ ಗುರುವಿನಲ್ಲಿ ಎಂತಹ ಶಕ್ತಿ ಇರುತ್ತದೆ?
ಉತ್ತರ: ಶ್ರೇಷ್ಠ ಗುರುವಿನಲ್ಲಿ ವಿದ್ಯಾರ್ಥಿಗಳ ಮನಸ್ಸನ್ನು ಓದುವ ಶಕ್ತಿ ಇರುತ್ತದೆ.
14.ತಾಯಿ ಸಿದ್ಧಮ್ಮ ಪಂಚಾಕ್ಷರಿ ಗವಾಯಿಗಳಲ್ಲಿ ಏನೆಂದು ಬೇಡಿಕೊಂಡಳು?
ಉತ್ತರ: ತಾಯಿ ಸಿದ್ಧಮ್ಮ ಪಂಚಾಕ್ಷರಿ ಗವಾಯಿಗಳಲ್ಲಿ ಮಗನನ್ನು ಮನೆಗೆ ಕಳುಹಿಸಿಕೊಡಿ ಎಂದು ಬೇಡಿಕೊಂಡಳು.
15.ಪುಟ್ಟರಾಜರು ಯಾವ ಯಾವ ಭಾಷೆಗಳಲ್ಲಿ ಪಾಂಡಿತ್ಯ ಗಳಿಸಿದ್ದರು?
ಉತ್ತರ: ಪುಟ್ಟರಾಜರು ಕನ್ನಡ ಸಂಸ್ಕೃತ ಮತ್ತು ಹಿಂದಿ ಭಾಷೆಗಳಲ್ಲಿ ಪಾಂಡಿತ್ಯ ಗಳಿಸಿದ್ದರು.
16.ಪುಟ್ಟರಾಜರು ಖಾದಿ ಬಟ್ಟೆ ತೊಡಲು ನಿರ್ಧರಿಸಿದ್ದು ಏಕೆ?
ಉತ್ತರ: ಸ್ವದೇಶಿ ಆಂದೋಲನಕ್ಕೆ ಕೈ ಜೋಡಿಸಲು ಪುಟ್ಟರಾಜರು ಖಾದಿ ಬಟ್ಟೆ ತೊಡಲು ನಿರ್ಧರಿಸಿದರು.

## ಹಕ್ಕಿಗೂಡುಗಳ ನಿಗೂಢ ಜಗತ್ತು

17.ಸಸ್ತನಿಗಳ ಆಶ್ರಯದಾಣಗಳು ಯಾವುವು?

ಉತ್ತರ: ಸಸ್ತನಿಗಳ ಆಶ್ರಯದಾಣಗಳು ಗುಹೆ,ಪೊಟರೆ,ಗೂಡು ಮತ್ತು ಬಿಲ.

18.ಅಸ್ಪೃಶ್ಯತೆ ಆಚರಿಸುವ ಮನುಷ್ಯನಿಗೆ ಹಕ್ಕಿಗಳು ಯಾವ ಪಾಠ ಹೇಳುತ್ತವೆ?

ಉತ್ತರ: ಅಸ್ಪಶ್ಯತೆ ಆಚರಿಸುವ ಮನುಷ್ಯನಿಗೆ ಹಕ್ಕಿಗಳು ಸ್ಪರ್ಶ ಸಂಜೀವಿನಿಯ ಪಾಠ ಹೇಳುತ್ತವೆ.

19.ಹಕ್ಕಿಗೂಡಿನಲ್ಲಿ ಯಾವುದರ ಸಮನ್ವಯತೆ ಇದೆ?

ಉತ್ತರ: ಹಕ್ಕಿ ಗೂಡಿನಲ್ಲಿ ಕಲಾವಿದನ ಸ್ವೋಪಜ್ಞತೆ,ವಿಜ್ಞಾನಿಯ ತಂತ್ರಜ್ಞಾನ ಮತ್ತು ಹಲವು ವಸ್ತುಗಳ ಸಮನ್ವಯತೆ ಇದೆ.

20.ಹಕ್ಕಿಗಳು ಗೂಡು ಕಟ್ಟುವ ಸಾಮರ್ಥ್ಯಕ್ಕೆ ಮಿತಿಯೊಡ್ಡುವ ಅಂಶಗಳಾವುವು?

ಉತ್ತರ: ಹಕ್ಕಿಯ ದೇಹ ಸ್ವರೂಪ,ಪರಿಸರದ ವೈಲಕ್ಷಣ, ಬಲಿಬೇಟೆ ಇವು ಹಕ್ಕಿಗಳು ಗೂಡು ಕಟ್ಟುವ ಸಾಮರ್ಥ್ಯಕ್ಕೆ ಮಿತಿಯೊಡ್ಡುವ ಅಂಶಗಳು.

21.ಅಮೇರಿಕಾದಲ್ಲಿ ಗ್ಯಾನೆಟ್ ಕಡಲಹಕ್ಕಿ ಗೂಡನ್ನು ಯಾವ ವಸ್ತುಗಳಿಂದ ಅಲಂಕರಿಸಿತ್ತು?

ಉತ್ತರ: ಅಮೇರಿಕದಲ್ಲಿ ಗ್ಯಾನೆಟ್ ಕಡಲ ಹಕ್ಕಿ ತನ್ನ ಗೂಡನ್ನು ಗಾಲ್ಫ್ ಚೆಂಡು ನೀಲಿ ಸೀಶೆಯ ಚೂರು ಈರುಳ್ಳಿ ಸಿಪ್ಪೆ ಮತ್ತು ಬಣ್ಣದ ಗೊಂಬೆಯಿಂದ ಅಲಂಕರಿಸಿತ್ತು.

### ಕಾಫೀ–ಕಪ್ಪು

22.ಹೆಡ್ ಮಾಸ್ತರರು ಸಂತೋಷಗೊಂಡಿದ್ದು ಯಾಕೆ?

ಉತ್ತರ: ಹೆಡ್ ಮಸ್ತಾರರು ಮನೆಗೆ ಬಂದ ಹಳೆಯ ವಿದ್ಯಾರ್ಥಿಗಳನ್ನು ಕಂಡು ಸಂತೋಷಗೊಂಡರು.

23.ವಿದ್ಯಾರ್ಥಿಗಳು ಕಾಫೀ ಕುಡಿಯಲು ಎಂತಹ ಕಪ್ಪುಗಳನ್ನು ಆರಿಸಿಕೊಂಡರು?

ಉತ್ತರ: ವಿದ್ಯರ್ಥಿಗಳು ಕಾಫೀ ಕುಡಿಯಲು ಬೆಲೆ ಬಾಳುವ ಕಪ್ಪುಗಳನ್ನು ಆರಿಸಿಕೊಂಡರು.

24.ಗುರುಗಳು ಹೇಳಿದಂತೆ ಜೀವನದ ತೊಂದರೆಗಳಿಗೆ ನಿಜವಾದ ಕಾರಣ ಯಾವುದು?

ಉತ್ತರ: ಗುರುಗಳು ಹೇಳಿದಂತೆ ಜೀವನದ ತೊಂದರೆಗಳಿಗೆ ನಿಜವಾದ ಕಾರಣವೆಂದರೆ ಉತ್ತಮವಾದುದನ್ನು ಪಡೆಯಬೇಕು ಎನ್ನುವ ಆಸೆಯಾಗಿದೆ.

25.ಗುರುಗಳು ಹೇಳಿದಂತೆ ಕಾಫೀ ಮತ್ತು ಕಾಫಿಯ ಕಪ್ಪು ಯಾವುದರ ಪ್ರತೀಕಗಳಾಗಿವೆ?

ಉತ್ತರ: ಕಾಫೀ ಎಂದರೆ ಜೀವನ ಇದ್ದಂತೆ ಮತ್ತು ಕಪ್ಪು ಎಂದರೆ ಹಣ ಅಂತಸ್ತು ಅಧಿಕಾರದ ಪ್ರತೀಕವಾಗಿದೆ.

26.ಗುರುಗಳು ಯಾವುದನ್ನು ದುರ್ದೈವ್ಯದ ಸಂಗತಿ ಎಂದು ಬಣ್ಣಿಸಿದರು?

ಉತ್ತರ: ಕಾಫಿಗಿಂತ ಕಾಫಿಯ ಕಪ್ಪಿಗೆ ಹೆಚ್ಚು ಮಹತ್ವ ನೀಡುತ್ತಿರುವುದು ದುರ್ದೈವ್ಯದ ಸಂಗತಿ ಎಂದು ಗುರುಗಳು ಹೇಳಿದ್ಧಾರೆ.

27.ಗುರುರಾಜ ಕರ್ಜಗಿ ಅವರ ಅಂಕಣ ಬರಹದ ಶೀರ್ಷಿಕೆ ಯಾವುದು?

ಉತ್ತರ: ಗುರುರಾಜ ಕರ್ಜಗಿ ಅವರ ಅಂಕಣ ಬರಹದ ಶಿರ್ಷಿಕೆ ಕರುಣಾಳು ಬಾ ಬೆಳಕೆ.

## ಗಂಗೆಯಲ್ಲಿ ದೀಪಮಾಲೆ

28.ಹರಿದ್ವಾರದಲ್ಲಿ ಏನನ್ನು ನೋಡಬೇಕೆಂಬುದು ಲೇಖಕರ ಗುರಿಯಾಗಿತ್ತು?

ಉತ್ತರ: ಹರಿದ್ವಾರದಲ್ಲಿ ಗಂಗಾನದಿಯ ಬ್ರಹ್ಮಕುಂಡದಲ್ಲಿ ನಡೆಯುವ ಆರತಿಯನ್ನು ನೋಡಬೇಕೆಂಬುದು ಲೇಖಕರ ಗುರಿಯಾಗಿತ್ತು.

29.ಹ್ಯೂಯೆನ್‌ತ್ಸಾಂಗ್ ಹರಿದ್ವಾರವನ್ನು ಏನೆಂದು ಕರೆದಿದ್ದಾನೆ?

ಉತ್ತರ: . ಹ್ಯೂಯೆನ್‌ತ್ಸಾಂಗ್ ಹರಿದ್ವಾರವನ್ನು 'ಮೊಯುಲೊ' ಅಥವಾ 'ಮಯೂರ' ಎಂದು ಕರೆದಿದ್ದಾನೆ.

30.ಗಂಗೆಯಲ್ಲಿ ತೇಲುತ್ತಿದ್ದ ನೂರಾರು ದೀಪಗಳು ಹೇಗೆ ಕಾಣುತ್ತಿದ್ದವು?

ಉತ್ತರ: ಗಂಗೆಯಲ್ಲಿ ತೇಲುತ್ತಿದ್ದ ನೂರಾರು ದೀಪಗಳು ಬಟ್ಟೆಗೆ ಬೆಳಕಿನ ಕಸೂತಿ ಹಾಕಿದಂತೆ ಕಾಣುತ್ತಿದ್ದವು.

31.ಯಾವುದು ಗಂಗೆಯ ದಡದ ಆವರಣವನ್ನು ತರಂಗಿತವಾಗಿಸಿತು?

ಉತ್ತರ: ಗಂಟೆ–ಜಾಗಟೆ–ಶಂಖಗಳ ಸದ್ದು ಗಂಗೆಯ ದಡದ ಆವರಣವನ್ನು ತರಂಗಿತವಾಗಿಸಿತು.

## ನನ್ನ ಗೋಪಾಲ

32.ಗೋಪಾಲನ ಬೆಳಗಿನ ಮುಖ್ಯ ಕೆಲಸ ಯಾವುದಾಗಿತ್ತು?

ಉತ್ತರ: ಬೆಳಗ್ಗೆ ಎದ್ದು ಸ್ನಾನ ಮಾಡಿ ಪೂಜೆಗೆ ಬೇಕಾಗುವ ಹೂಗಳನ್ನು ಕಾಡಿನಿಂದ ಕಿತ್ತು ತರುವುದು ಗೋಪಾಲನ ಕೆಲಸವಾಗಿತ್ತು.

33.ಗೋಪಾಲನಿಗೆ ಬಣ್ಣ ಬಣ್ಣದ ಹೂಗಳು ಹೇಗೆ ಕಾಣಿಸುತ್ತಿದ್ದವು?

ಉತ್ತರ: ಬಣ್ಣ ಬಣ್ಣದ ಹೂಗಳು ಸಾವಿರಾರು ಮಳೆ ಬಿಲ್ಲುಗಳು ಸೇರಿ ಕುಣಿದಂತೆ ಗೋಪಾಲನಿಗೆ ಕಾಣಿಸುತ್ತಿದ್ದವು.
34.ಗೋಪಾಲನ ಗೆಳೆಯರ ಹೆಸರೇನು?
ಉತ್ತರ: ರಾಮು ಕಿಟ್ಟಿ ನಾಣಿ ಮಾಧು ಇವರೆಲ್ಲರೂ ಗೋಪಾಲನ ಗೆಳೆಯರಾಗಿದ್ದರು.
35.ಗೋಪಾಲನು ಶಾಲೆಯಿಂದ ಮನಗೆ ಮರಳುವಾಗ ಏಕೆ ಭಯಪಡುತ್ತಿದ್ದನು?
ಉತ್ತರ: ಸಂಜೆ ಮನೆಗೆ ಮರಳುವಾಗ ಕಾಡನ್ನು ದಾಟಿ ಮನೆಗೆ ಬರಬೇಕು ಆದುದರಿಂದ ಗೋಪಾಲನು ಭಯ ಪಡುತ್ತಿದ್ದನು.
36.ಗೋಪಾಲನು ಹೊಸ ಪಂಚೆಯನ್ನು ಬಯಸಿದುದೇಕೆ?
ಉತ್ತರ: ಗೋಪಾಲನ ಗೆಳೆಯರೆಲ್ಲರೂ ಬೆಲೆ ಬಾಳುವ ಬಟ್ಟೆಗಳನ್ನು ಹಾಕಿಕೊಂಡು ಬಂದು ಗೋಪಾಲನನ್ನು ಅಪಹಾಸ್ಯ ಮಾಡುತ್ತಿದ್ದರು ಆದುದರಿಂದ ಗೋಪಾಲನು ಹೊಸ ಪಂಚೆ ಬಯಸಿದನು.
37.ಬನದ ಗೋಪಾಲ ಯಾರು? ಕಾಡಿನಲ್ಲಿ ಅವನ ಕೆಲಸವೇನು?
ಉತ್ತರ: ಬನದ ಗೋಪಾಲ ಶ್ರೀ ಕೃಷ್ಣ.ಕಾಡಿನಲ್ಲಿ ದನ ಕಾಯುವುದು ಅವನ ಕೆಲಸವಾಗಿತ್ತು.

## ಸೌಜನ್ಯ (ಗದ್ಯ)

38.ನಮ್ಮ ದೈನಂದಿನ ಬದುಕಿನಲ್ಲಿ ಅಪರೂಪವಾಗಿರುವುದು ಯಾವುದು?
ಉತ್ತರ: .ನಮ್ಮ ದೈನಂದಿನ ಬದುಕಿನಲ್ಲಿ ಅಪರೂಪವಾಗಿರುವುದು ಸೌಜನ್ಯ
39.ರೋಗಿಗಳು ಯಾರ ಬಳಿ ಹೋಗುತ್ತಾರೆ?
ಉತ್ತರ: ರೋಗಿಗಳು ವೈದ್ಯರ ಬಳಿ ಹೋಗುತ್ತಾರೆ
40.ಸೌಜನ್ಯವು ಹೇಗೆ ಅರಳಿತು?
ಉತ್ತರ: ಸೌಜನ್ಯವು ಹೂವು ಅರಳಿದಂತೆ ಅರಳಬೇಕು.
41.ಸೌಜನ್ಯದಿಂದ ಬೇರೆಯವರಿಗೆ ಏನಾಗುತ್ತದೆ?
ಉತ್ತರ: .ಸೌಜನ್ಯದಿಂದ ಬೇರೆಯವರಿಗೆ ಲಾಭವಾಗುತ್ತದೆ.
42. ನಮ್ಮ ಹಿರಿಯರು ನಮಗೆ ಏನು ಕಾಣಿಸಿದ್ದಾರೆ?
ಉತ್ತರ: ನಮ್ಮ ಹಿರಿಯರು ನಮಗೆ ಸೌಜನ್ಯದ ಗೆರೆಯನ್ನು ಕಾಣಿಸಿದ್ದಾರೆ.

## ಬೋಧಿವೃಕ್ಷದ ಹಾಡು

43.ಸಿದ್ಧಾರ್ಥ ಬುದ್ಧನದ ಪರಿಯನ್ನು ಕವಿ ಎಂತಹ ಕಥೆಯೆಂದು ಬಣ್ಣಿಸಿದ್ದಾರೆ?
ಉತ್ತರ: ಸಿದ್ಧಾರ್ಥ ಬುದ್ಧನಾದ ಪರಿಯನ್ನು ಕವಿ ಇದು ಯುದ್ಧ ಬಿಟ್ಟು ಪ್ರೀತಿ ಕೊಟ್ಟ ಕಥೆಯೆಂದು ಬಣ್ಣಿಸಿದ್ದಾರೆ.
44.ಸಿದ್ಧಾರ್ಥ ಯಾರ ಹಾಗೂ ಯಾವುದರ ಮೋಹವನ್ನು ತೊರೆದನು?
ಉತ್ತರ: ಸಿದ್ಧಾರ್ಥ ಮಡದಿ ಮಗು ಅರಮನೆಯ ಮೋಹವನ್ನು ತೊರೆದನು.
45.ಕಾಡನ್ನು ಅಲೆದ ಸಿದ್ಧಾರ್ಥನಿಗೆ ಹೊಳೆದಿದ್ದೇನು?
ಉತ್ತರ: ಕಾಡನ್ನು ಅಲೆದ ಸಿದ್ಧಾರ್ಥನಿಗೆ ನಾಡಿನರ್ಥ ಹೊಳೆಯಿತು.
46.ಸಿದ್ಧಾರ್ಥನು ಕಾಡಿನಿಂದ ನಾಡಿನತ್ತ ಏಕೆ ಹೊರಟನು?
ಉತ್ತರ: ಸಿದ್ಧಾರ್ಥನು ಕಾಡಿನಿಂದ ನಾಡಿನತ್ತ ಜನರ ಪ್ರೀತಿಯನ್ನು ಹುಡಿಕಿಕೊಂಡು ಹೊರಟನು.
47.ಸಿದ್ಧಾರ್ಥನು ಕಂಡುಕೊಂಡ ಬದುಕಿನ ಗೂಡಾರ್ಥವೇನು?
ಉತ್ತರ: ತಪಸ್ಸಿಗಿಂತ ಜೀವ ಪ್ರೀತಿ ದೊಡ್ಡದು ಎಂಬ ಬದುಕಿನ ಗೂಡಾರ್ಥವನ್ನು ಕಂಡುಕೊಂಡನು.
48.ಬೋಧಿವೃಕ್ಷದ ಹಾಡು ಯಾರ ಜೀವನವನ್ನು ಕುರಿತು ತಿಳಿಸುತ್ತದೆ?
ಉತ್ತರ: ಬೋಧಿವೃಕ್ಷದ ಹಾಡು ಸಿದ್ಧಾರ್ಥ/ಬುದ್ಧನ ಜೀವನವನ್ನು ಕುರಿತು ತಿಳಿಸುತ್ತದೆ
49.ಬುದ್ಧನು ಅರಿತುಕೊಂಡ ಬದುಕಿನ ಸತ್ಯವೇನು?
ಉತ್ತರ: ತಪಸ್ಸಿಗಿಂತ ಜೀವ ಪ್ರೀತಿ ದೊಡ್ಡದು ಎಂಬ ಬದುಕಿನ ಗೂಡಾರ್ಥವನ್ನು ಕಂಡುಕೊಂಡನು.

## ಸವಿಚೈತ್ರ

50.ನೆಲದಮ್ಮ ನವವಧುವಿನಂತೆ ಸಿಂಗಾರಗೊಳ್ಳುವುದು ಯಾವಾಗ?
ಉತ್ತರ: ಸುಗ್ಗಿ ಬಂದಾಗ ನೆಲದಮ್ಮ ನವವಧುವಿನಂತೆ ಸಿಂಗಾರಗೊಳ್ಳುತ್ತಾಳೆ.
51.ಯುಗಾದಿಯ ಸಂದರ್ಭದಲ್ಲಿ ನೆಲದಮ್ಮ ಹೇಗೆ ಸಿಂಗಾರಗೊಳ್ಳುತ್ತಾಳೆ?
ಉತ್ತರ: ಯುಗಾದಿಯ ಸಂದರ್ಭದಲ್ಲಿ ನೆಲದಮ್ಮ ನವವಧುವಿನಂತೆ ಸಿಂಗಾರಗೊಳ್ಳುತ್ತಾಳೆ.
52.ಚೈತ್ರದಲ್ಲಿ ಯಾವುದರ ವಾಲಗ ನಡೆದಿರುತ್ತದೆ?
ಉತ್ತರ: ಚೈತ್ರದಲ್ಲಿ ನೆಲ ಮುಗಿಲುಗಳ ವಾಲಗ ನಡೆದಿರುತ್ತದೆ.
53.ಸವಿಚೈತ್ರದ ಸೊಬಗು ಏನು?
ಉತ್ತರ: ಕಹಿ ಕಳೆದು ಸಿಹಿ ಹಂಚುವ ಫಲ ಪುಷ್ಪ ಸಮೃದ್ಧವಾಗಿರುವುದು ಸವಿಚೈತ್ರದ ಸೊಬಗಾಗಿದೆ.
54.ಯುಗಾದಿಯಲ್ಲಿ ಯಾವ ತಿನಿಸನ್ನು ಹಂಚುವ ಸಂಪ್ರದಾಯವಿದೆ?
ಉತ್ತರ: ಯುಗಾದಿಯಲ್ಲಿ ಬೇವು ಬೆಲ್ಲ ಹಂಚುವ ಸಂಪ್ರದಾಯವಿದೆ.

## ಸದ್ದು ಮಾಡದಿರು

55.ತಿಮಿರಕ್ಕೆ ವೈರಿ ಯಾವುದು?
ಉತ್ತರ: ತಿಮಿರಕ್ಕೆ ವೈರಿ ಬೆಳಕು/ದೀಪ.
56.ಕವಿ ಮಾನವನ ಬದುಕನ್ನು ಇಬ್ಬನಿಯಂತೆ ಇರಬೇಕು ಎಂದು ಏಕೆ ಬಯಸುತ್ತಾರೆ?
ಉತ್ತರ: ರವಿಯ ಕಿರಣಕ್ಕೆ ಇಬ್ಬನಿ ಕರಗುವಂತೆ ಸಿಡುಕು ಮಿಡುಕನು ತೊರೆದು ಮೌನದಿಂದ ನಮ್ಮ ಕರ್ತವ್ಯಗಳನ್ನು ಮಾಡುತ್ತಾ ಜೀವನವನ್ನು ನಡೆಸಬೆಕು ಎಂಬುವುದಕ್ಕಾಗಿ ಕವಿ ಮಾನವನ ಬದುಕನ್ನು ಇಬ್ಬನಿಗೆ ಹೋಲಿಸಿದ್ದಾನೆ.
57.ನಮ್ಮ ಕರ್ತವ್ಯಗಳನ್ನು ಹೇಗೆ ಮುಗಿಸಬೇಕೆಂದು ಕವಿ ಹೇಳಿದ್ದಾರೆ?
ಉತ್ತರ; ನಮ್ಮ ಕರ್ತವ್ಯಗಳನ್ನು ಶಾಂತ ರೀತಿಯಿಂದ ಮುಗಿಸಬೇಕೆಂದು ಕವಿ ಹೇಳಿದ್ದಾರೆ.

## ಗುರಿ

58.ಮನಸ್ಸು ಅಳಿಯಾಸೆಗಳ ಸುಳಿಗೆ ಸಿಲುಕಬಾರದು ಏಕೆ?
ಉತ್ತರ: ಮನಸ್ಸು ಅಳಿಯಾಸೆಗಳ ಸುಳಿಗೆ ಸಿಲುಕಿದರೆ ನೆಲೆಯಿರದೆ ಮನಸ್ಸು ತೊಳಲುವುದು.
59.ನಮ್ಮ ದುಡಿಮೆಯ ಹೂವು ಫಲಿಸುವುದು ಯಾವಾಗ?
ಉತ್ತರ: ನರನ ಬಾಳಿನಲ್ಲಿ ನನೆ ಕೊನೆ ಇದ್ದಾಗ ನಮ್ಮ ದುಡಿಮೆಯ ಹೂವು ಫಲಿಸುವುದು.
60.ಅಡಿಗರ ಪ್ರಕಾರ ಪೌರುಷದ ಬಾಳ್ವೆ ಯಾವುದು?
ಉತ್ತರ: ಹಿಡಿದ ಒಳ್ಳೆಯ ದಾರಿಯೊಳು ಕೊನೆಯವರಗೆ ನಡೆಯುವುದೇ ಅಡಿಗರ ಪ್ರಕಾರ ಪೌರುಷದ ಬಾಳ್ವೆಯಾಗಿದೆ.
61.ಅಡಿಗರು ಹಗಲಿರುಳು ಯಾವುದಕ್ಕೆ ಹೋರಾಡಬೇಕೆಂದು ಹೇಳುತ್ತಾರೆ?
ಉತ್ತರ: ಅಡಿಗರು ಹಗಲಿರುಳು ಒಂದೇ ಹೆಗ್ಗುರಿಗೆ ಹೋರಾಡಬೇಕೆಂದು ಹೇಳುತ್ತಾರೆ.

## ಮೂಡಲ್ ಕುಣಿಗಲ್ ಕೆರೆ

62.ಕುಣಿಗಲ್ ಕೆರೆಯು ಯಾವ ದಿಕ್ಕಿನಲ್ಲಿದೆ?
ಉತ್ತರ: ಕುಣಿಗಲ್ ಕೆರೆಯು ಮೂಡಣ/ಪೂರ್ವ ದಿಕ್ಕಿನಲ್ಲಿದೆ.
63.ಕುಣಿಗಲ್ ಕೆರೆ ಹೇಗೆ ಬಾಗಿದೆ?
ಉತ್ತರ: ಕುಣಿಗಲ್ ಕೆರೆ ಬಾಳೆಯ ಹಣ್ಣಿನಂತೆ ಬಾಗಿದೆ.
64.ತುಂಬಿದ ಕುಣಿಗಲ್ ಕೆರೆಯನ್ನು ಯಾವುದಕ್ಕೆ ಹೋಲಿಸಲಾಗಿದೆ?
ಉತ್ತರ: ತುಂಬಿದ ಕುಣಿಗಲ್ ಕೆರೆಯನ್ನು ನಿಂಬೆ ಹಣ್ಣಿಗೆ ಹೋಲಿಸಲಾಗಿದೆ.
65.ಕುಣಿಗಲ್ ಕೆರೆಯ ಅಂದವನ್ನು ನೋಡಲು ಯಾರು ಬಂದರೆಂದು ಉತ್ಪ್ರೇಕ್ಷಿಸಲಾಗಿದೆ?
ಉತ್ತರ :ಕುಣಿಗಲ್ ಕೆರೆಯ ಅಂದವನ್ನು ನೋಡಲು ಶಿವನು ಬಂದನು ಎಂದು ಉತ್ಪ್ರೇಕ್ಷಿಸಲಾಗಿದೆ

66.ಕೆರೆಯಲ್ಲಿ ಯಾವ ಮೀನುಗಳಿದ್ದವು?
ಉತ್ತರ: ಕೆರೆಯಲ್ಲಿ ಬಾಳೆಯ ಮೀನುಗಳಿದ್ದವು.

## ವಚನಗಳು

67.ಬಸವಣ್ಣನವರ ಪ್ರಕಾರ ನಶಿಸುವುದು ಯಾವುದು?
ಉತ್ತರ: ಬಸವಣ್ಣನವರ ಪ್ರಕಾರ ಸ್ಥಾವರವು ನಶಿಸುವುದು
68.ವೇಷ ಮತ್ತು ಆಚರಣೆಗಳ ನಡುವಿನ ಸಂಬಂಧ ಹೇಗಿರಬೇಕೆಂದು ಸಿದ್ಧರಾಮ ಹೇಳುತ್ತಾನೆ?
ಉತ್ತರ: ವೇಷ ಮತ್ತು ಆಚರಣೆಗಳ ನಡುವಿನ ಸಂಬಂಧ ಒಂದೇ ಆಗಿರಬೇಕೆಂದು ಸಿದ್ಧರಾಮ ಹೇಳುತ್ತಾನೆ.
69.ಸಂತೆಯೊಳಗೊಂದು ಮನೆಯನ್ನು ಮಾಡಿದರೆ ಯಾವುದಕ್ಕೆ ಅಂಜಬಾರದು?
ಉತ್ತರ: .ಸಂತೆಯೊಳಗೊಂದು ಮನೆಯನ್ನು ಮಾಡಿದರೆ ಶಬ್ಧಕ್ಕೆ ಅಂಜಬಾರದು.
70.ಕೆರೆಗಳು ನಿಷ್ಪ್ರಯೋಜಕ ಆಗುವುದು ಯಾವಾಗ?
ಉತ್ತರ: ಪುಣ್ಯ ತೀರ್ಥಗಳು ಬರದೇ ಇದ್ದಾಗ ಕೆರೆಗಳು ನಿಷ್ಪ್ರಯೋಜಕ ಆಗುವುದು.
71.ಧನವಿದ್ದವರಲ್ಲಿ ಇರಬೇಕಾದ ಗುಣ ಯಾವುದು?
ಉತ್ತರ: ಧನವಿದ್ದವರಲ್ಲಿ ಇರಬೇಕಾದ ಗುಣ ದಯೆ.
72.ಅಕ್ಕಮಹಾದೇವಿಯು ತನ್ನ ಬದುಕು ಯಾವಾಗ ಫಲದಾಯಕ ಆಗುತ್ತದೆಂದು ಹೇಳುತ್ತಾಳೆ?
ಉತ್ತರ: ಚೆನ್ನ ಮಲ್ಲಿಕಾರ್ಜುನನ ಜ್ಞಾನವಿದ್ದರೆ  ತನ್ನ ಬದುಕು ಫಲದಾಯಕ ಆಗುತ್ತದೆ ಎಂದು ಅಕ್ಕಮಹಾದೇವಿಯು ಹೇಳುತ್ತಾಳೆ.

## ನಿಟ್ಟೋಟದಲಿ ಹಾಯ್ದನು ಬಿಟ್ಟಮಂಡೆಯಲಿ

73.ಕೌರವನ ಸೇನೆಯು ಉತ್ತರನಿಗೆ ಹೇಗೆ ಕಾಣಿಸಿತು?
ಉತ್ತರ: ಕೌರವನ ಸೇನೆಯು ಉತ್ತರನಿಗೆ ವಿಶಾಲವಾದ ಸಮುದ್ರದಂತೆ ಕಾಣಿಸಿತು?
74.ಉತ್ತರನು ನಿಟ್ಟೋಟದಲಿ ಓಡಿದ್ದು ಏಕೆ?
ಉತ್ತರ: ಉತ್ತರನು ಕೌರವನ ಸೇನೆಯನ್ನು ಕಂಡು ನಿಟ್ಟೋಟದಲಿ ಓಡಿದನು.
75.ಧುರಕ್ಕೆ ಬೆನ್ನುಹಾಕಿದರೆ ಏನು ಪ್ರಾಪ್ತಿಯಾಗುತ್ತದೆ?
ಉತ್ತರ: ಧುರಕ್ಕೆ ಬೆನ್ನುಹಾಕಿದರೆ ಪಾಪ ಪ್ರಾಪ್ತಿಯಾಗುತ್ತದೆ.
76.ಅರ್ಜುನನು ಯಾರನ್ನು ನಾಡನರಿ ಎಂದು ಕರೆದಿದ್ದಾನೆ?
ಉತ್ತರ: ಅರ್ಜುನನು ಉತ್ತರಕುಮಾರನನ್ನು ನಾಡನರಿ ಎಂದು ಕರೆದಿದ್ದಾನೆ.
77.ಉತ್ತರನಿಗೆ ಇಂದ್ರಪದವಿಯು ಏಕೆ ಬೇಕಿಲ್ಲ?
ಉತ್ತರ: ಉತ್ತರನಿಗೆ ತನ್ನ ಅರಸುತನವೇ ಸಾಕಾಗಿದ್ದರಿಂದ ಇಂದ್ರಪದವಿಯು ಬೇಕಿಲ್ಲ.
78.ಸುರರ ಸತಿಯರ ಸ್ಥಾನವನ್ನು ಯಾರು ತುಂಬುತ್ತಾರೆ?
ಉತ್ತರ:.ಸುರರ ಸತಿಯರ ಸ್ಥಾನವನ್ನು ಅರಮನೆಯ ನಾರಿಯರು ತುಂಬುತ್ತಾರೆ.

## ಕೆಳಗಿನ ಪ್ರಶ್ನೆಗಳಿಗೆ ಮೂರು–ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿರಿ

## ಒಣ ಮರದ ಗಿಳಿ

**1. ಸಾಮಾನ್ಯವಾದ ಲೋಕವರ್ತನೆ ಯಾವುದು?**

ಉತ್ತರ: ಸುಖ ಸಂಪತ್ತಿನ ಕಾಲದಲ್ಲಿ ಜೊತೆಗಿದ್ದು ದುರ್ಭರ ಗಳಿಗೆ ಬಂದಾಗ ಮಾಡಿದ ಉಪಕಾರವನ್ನು ಮರೆತು ಬಿಟ್ಟು ಹೋಗುವುದು ಮತ್ತು ಉಪಕಾರ ಮಾಡಿದವರ ಬೆನ್ನಿಗೆ ಚೂರಿ ಹಾಕಿ ಮೋಸ ಮಾಡುವುದು ಸಾಮಾನ್ಯವಾದ ಲೋಕವರ್ತನೆಯಾಗಿದೆ.

**2. ಗಿಳಿಯು ಇಂದ್ರನನ್ನು ಯಾವ ವರ ಕೇಳಿತು?**

ಉತ್ತರ: ದೇವರಾಜನ ಮಾತನ್ನು ಕೇಳಿದ ಗಿಳಿಯು "ದೇವರಾಜ ವರವನ್ನು ಕೊಡುವ ಇಚ್ಛೆ ನಿನಗೆ ಇದ್ದರೆ ಈ ಮರಕ್ಕೆ ಮೊದಲಿನಂತೆ ಹಸಿರು ಬಣ್ಣದಿಂದ ನಳನಳಿಸುವಂತಾಗಬೇಕು.ಫಲಪುಷ್ಪ ಭಾರದಿಂದ ಬೀಗುವ ಮತ್ತು ದನಿದವರಿಗೆ ನೆರಳು ಕೊಡುವ ವರವನ್ನು ದಯಪಾಲಿಸು ಎಂದು ವರವನ್ನು ಕೇಳಿತು.

**3. ನಮ್ಮ ದೇಶದ ರಕ್ಷಣಾಪಡೆ ಏಕೆ ಪ್ರಬಲವಾಗಿರಬೇಕು?**

ಉತ್ತರ: ಸೈನಿಕರು ಪ್ರಬಲರಾಗಿದ್ದಾಗ ಮಾತ್ರ ದೇಶವನ್ನು ರಕ್ಷಣೆ ಮಾಡಲು ಸಾಧ್ಯ.ಇಲ್ಲದಿದ್ದರೆ ಬೇರೆ ದೇಶದವರು ಸುಲಭವಾಗಿ ನಮ್ಮ ದೇಶದ ಮೇಲೆ ದುರಾಕ್ರಮಣ ಮಾಡಿ ಯುದ್ಧವನ್ನು ಸಾರಿ ನಮ್ಮನ್ನು ತಮ್ಮ ಗುಲಾಮರನ್ನಾಗಿ ಮಾಡಿಕೊಳ್ಳುವರು.ಬಲಿಷ್ಠ ದೇಶ ಎಲ್ಲರನ್ನೂ ಹೊಡೆದು ಹಾಕಿ ತಾನೇ ಸೂರ್ಯ ಮುಳುಗದ ಸಾಮ್ರಾಜ್ಯವನ್ನು ಸ್ಥಾಪಿಸಿ ಸರ್ವಾಧಿಕಾರಿಯಂತೆ ಮೆರೆಯಬಹುದು.ಆದುದರಿಂದ ನಮ್ಮ ರಕ್ಷಣಾಪಡೆ ತುಂಬಾ ಪ್ರಬಲವಾಗಿರಬೇಕು.

**4. ರೈತರು ಎದುರಿಸುತ್ತಿರುವ ಸಮಸ್ಯೆಗಳಾವುವು?**

ಉತ್ತರ: ರೈತರು ಎದುರಿಸುತ್ತಿರುವ ಸಮಸ್ಯೆಗಳೆಂದರೆ ಒಂದು ಕಡೆ ನಿಸರ್ಗದ ಜೊತೆ ಹೋರಾಟ ಮಾಡಬೇಕು.ಸಕಾಲಕ್ಕೆ ಸರಿಯಾಗಿ ಮಳೆಯಾಗುತ್ತಿಲ್ಲ ಉತ್ತಮ ಬೀಜ ಸಿಗುವುದಿಲ್ಲ ಭೂಮಿ ಬರುಡಾಗುತ್ತಿದೆ.ಕ್ರಿಮಿಕೀಟಗಳ ಹಾವಳಿಯಿಂದ ಬೆಳೆಗೆ ವಿವಿಧ ರೀತಿಯ ರೋಗಗಳು ತಗುಲಿ ಬೇಸಾಯವೇ ಬೇಡ ಎನ್ನುವ ಪರಿಸ್ಥಿತಿ ನಿರ್ಮಾಣವಾಗುತ್ತಿದೆ.ತಾನು ಬೆಳೆದ ಬೆಳೆಗೆ ಸರಿಯಾದ ಬೆಲೆ ಸಿಗದೆ ವ್ಯವಸ್ಥೆಯ ವಿರುದ್ಧವೂ ಹೋರಾಟ ನಡೆಸಬೇಕಾಗಿದೆ.ಅತಿವೃಷ್ಟಿ ಅನಾವೃಷ್ಟಿಯಿಂದ ರೈತ ಕಂಗಾಲಾಗಿದ್ದಾನೆ.

**5. ಬಾಲಕ ಪುಟ್ಟಯ್ಯ ಕಣ್ಣುಗಳನ್ನು ಕಳೆದುಕೊಂಡಿದ್ದು ಹೇಗೆ?**

ಉತ್ತರ: ಪುಟ್ಟರಾಜರು ಆರು ತಿಂಗಳಿನವರಿದ್ದಾಗ ಕಣ್ಣು ಬೇನೆ ಬಂದಿತ್ತು ಕಣ್ಣಿಗೆ ಪೊರೆ ಬಂದಿತು ನಾಟಿ ವೈದ್ಯರ ಸಲಹೆಯಂತೆ ನಾಯಿಯ ಮೈಮೇಲಿರುವ ಹುಳು ಅಂದರೆ ತೊನಸಿಯನ್ನು ಕಣ್ಣು ಗುಡ್ಡೆಗೆ ಮುಟ್ಟಿಸುವಾಗಅಚಾತುರ್ಯವಾಯಿತು ಕೈ ಜಾರಿ ಕಣ್ಣಿನ ಪೊರೆ ಹರಿಯುವ ಬದಲು ಕಣ್ಣಿನ ಗುಡ್ಡೆಯನ್ನೆ ಹರಿದು ತಂದಿತು ಇದರಿಂದ ಪುಟ್ಟರಾಜರು ತಮ್ಮ ಎರಡೂ ಕಣ್ಣುಗಳನ್ನು ಕಳೆದುಕೊಂಡರು

**6. ಪುಟ್ಟರಾಜರ ವೇಷಭೂಷಣಗಳು ಹೇಗಿದ್ದವು?**

ಉತ್ತರ: ಪುಟ್ಟರಾಜರು ಶುಭ್ರವಾದ ಬಿಳಿಯ ಉದ್ದನೆಯ ಅಂಗಿ,ಪಂಚೆ (ದೋತುರ),ತಲೆಗೆ ಕೆಂಪು ಪೇಠ (ಪಟಗ), ನೊಸಲಿನಲ್ಲಿ ತ್ರಿಪುಂಡ್ರಭಸ್ಮ,ಕೊರಳಲ್ಲಿ ರುದ್ರಾಕ್ಷಿ ಮಾಲೆ,ಪಾದಗಳಿಗೆ ಅರಿವೆಯ ಪಟ್ಟಿಕೆಯನ್ನು ಜೋಡಿಸಿದ ಕಟ್ಟಿಗೆಯ ಹಾವುಗಳು,ಕೈಯಲ್ಲಿ ಉದ್ದನೆಯ ಬೆತ್ತ ಇವು ಪುಟ್ಟರಾಜರ ವೇಷಭೂಷಣಗಳಾಗಿದ್ದವು.

**7. ಪುಟ್ಟರಾಜರಿಗೆ ದೊರೆತ ಗೌರವ ಪ್ರಶಸ್ತಿಗಳಾವುವು?**

ಉತ್ತರ: ಪುಟ್ಟರಾಜರು ಕನ್ನಡ ಹಿಂದಿ ಸಂಸ್ಕೃತ ಭಾಷೆಗಳಲ್ಲಿ 75 ಕ್ಕೂ ಹೆಚ್ಚು ಕೃತಿಗಳನ್ನು ರಚಿಸಿ ತ್ರಿಭಾಷಾ ಕವಿಯಾದರು.ಇವರಸಾಧನೆಗೆ ನಾಡೋಜ,ಬಸವಶ್ರೀ,ಪದ್ಮಭೂಷಣ,ಗೌರವ ಡಾಕ್ಟರೇಟ್ ಪ್ರಶಸ್ತಿಗಳು ಸಾಲುಗಟ್ಟಿ ಬಂದವು.

**8. ವಿಶೇಷ ಚೇತನರಿಗೆ ನೀವು ಯಾವ ಯಾವ ಮಾತುಗಳಿಂದ ಧೈರ್ಯ ತುಂಬುವಿರಿ?**

ಉತ್ತರ: ಮನುಷ್ಯ ತನ್ನ ಸಾಧನೆ ಮಾಡುವಾಗ ದೈಹಿಕ ನ್ಯೂನ್ಯತೆಗಳು ಎಂದಿಗೂ ಅಡ್ಡಿಯಾಗಲಾರವು,ಅದರೊಂದಿಗೆ ಅಸಾಧ್ಯವಾದುದನ್ನು ಸಾಧಿಸಬೇಕು ಎಂಬ ಛಲವು ಅದರೊಂದಿಗೆ ಸೇರಿಕೊಂಡರೆ ಗುರಿಯು ಹತ್ತಿರವಾಗುತ್ತದೆ.ದೇಹದಲ್ಲಿ ಯಾವುದೇ ಅಂಗವೈಕಲ್ಯವಿದ್ದರೂ ಸಕರಾತ್ಮಕ ಚಿಂತನೆ ಮಾಡುವುದರ ಮೂಲಕ ಗುರಿಯನ್ನು ಸಾಧಿಸಬೇಕು.

**9. ಹಕ್ಕಿಗಳು ಗೂಡನ್ನು ನಿರ್ಮಿಸುವ ಉದ್ದೇಶವೇನು?**

ಉತ್ತರ: ಹಕ್ಕಿಗಳು ಗೂಡನ್ನು ನಿರ್ಮಿಸುವುದು ಮುಖ್ಯವಾಗಿ ರಕ್ಷಣೆಗಾಗಿ,ಶೀತಗಾಳಿ,ಬಿರುಗಾಳಿ,ಮಳೆ,ಪ್ರವಾಹಗಳ ವಿರುದ್ಧ ಬದುಕಲು ಅವುಗಳಿಗೆ ಗೂಡು ಬೇಕು.ಮರುಭೂಮಿಯಂಥ ಪ್ರದೇಶಗಳಲ್ಲಿ ಮರುಳಿನ ಹೊಡೆತ,ಪ್ರಖರ ಸೂರ್ಯರಶ್ಮಿ ಮುಂತಾದ ಹವಮಾನ ವೈಪರೀತ್ಯಗಳನ್ನು ಪ್ರತಿರೋಧಿಸಲು ಗೂಡು ಬೇಕು.ಮೊಟ್ಟೆ,ಮರಿಗಳನ್ನು ರಕ್ಷಿಸಿಕೊಳ್ಳಲು ತಮ್ಮನ್ನು ಬೇಟೆಯಾಡುವ ಪ್ರಾಣಿಗಳಿಂದ ತಪ್ಪಿಸಿಕೊಳ್ಳಲು ಎತ್ತರದ ಮರದ ತುದಿ,ಕಣಿವೆ,ದ್ವೀಪ,ಅಥವಾ ನೀರಿನ ಮೇಲೆ ಗೂಡನ್ನು ಕಟ್ಟಿಕೊಳ್ಳುತ್ತವೆ.

**10. ಹಕ್ಕಿಗಳು ಗೂಡನ್ನು ಎಲ್ಲೆಲ್ಲಿ ಕಟ್ಟಬಲ್ಲವು?**

ಉತ್ತರ: ಹಕ್ಕಿಗಳು ಗೂಡು ಕಟ್ಟುವಷ್ಟೇ ಅದನ್ನು ಕಟ್ಟುವ ಸ್ಥಳದ ಆಯ್ಕೆ ಹಕ್ಕಿಯ ಬದುಕಿನಲ್ಲಿ ಮಹತ್ವದ ಪಾತ್ರ ವಹಿಸುತ್ತದೆ.ಸಾಗರದ ದ್ವೀಪ,ಗಿರಿ ಶಿಖರದ ನೆತ್ತಿ,ಮನುಷ್ಯ ನುಸುಳಲಾರದ ನಿಬಿಡ ವನಶ್ರೇಣಿ,ಸೂರ್ಯನ ಬೆಳಕಿಗೂ ಪ್ರವೇಶ ನಿರಾಕರಿಸುವ ಕಗ್ಗತ್ತಲ ಕಣಿವೆ,ರಕ್ತ ಹೆಪ್ಪುಗಟ್ಟುವ ಶೀತಲ ಧ್ರುವಪ್ರದೇಶ–ಹೀಗೆ ಹಕ್ಕಿಗಳು ಗೂಡನ್ನು ಕಟ್ಟುತ್ತವೆ.

**11. ಹಿರಿಯ ವಿದ್ಯಾರ್ಥಿಗಳು ಹೆಡ್ ಮಾಸ್ತರರ ಬಳಿ ಯಾವ ವಿಚಾರಗಳನ್ನು ಹೇಳಿಕೊಳ್ಳುತ್ತಿದ್ದರು?**

ಉತ್ತರ: ಹಿರಿಯ ವಿದ್ಯಾರ್ಥಿಗಳು ತಮ್ಮ ತಮ್ಮ ಜೀವನದ ಬಗ್ಗೆ ಹೇಳಿಕೊಳ್ಳುತ್ತಿದ್ದರು.ಒಂದಲ್ಲ ಒಂದು ತಕರಾರು.ಎಲ್ಲ ಕಡೆಗೆ ವ್ಯಾಪಾರ ಕಡಿಮೆಯಾಗುತ್ತಿದೆ.ರೂಪಾಯಿ ಬೆಲೆ ಕುಸಿಯುತಿದೆ.ಹಣಕ್ಕೆ ಬೆಲೆಯೇ ಇಲ್ಲ,ಮಕ್ಕಳು ಬೆಳೆಯುತ್ತಿದ್ದಾರೆ.ಅವರನ್ನು ಅರ್ಥಮಾಡಿಕೊಳ್ಳುವುದೇ ಕಷ್ಟ.ಹೀಗೆಲ್ಲಾ ತೊಂದರೆಗಳ ಸರಮಾಲೆ ಬೆಳೆಯುತ್ತದೆ ಎಂದು ವಿದ್ಯಾರ್ಥಿಗಳು ಹೆಡ್ ಮಾಸ್ತರರ ಬಳಿ ಹೇಳಿಕೊಳ್ಳುತ್ತಿದ್ದರು.

**12. ಹೆಡ್ ಮಾಸ್ತರರು ತಂದಿಟ್ಟ ಟ್ರೇನಲ್ಲಿ ಯಾವ ಯಾವ ತರಹದ ಕಪ್ಪುಗಳಿದ್ದವು?**

ಉತ್ತರ: ಹೆಡ್ ಮಾಸ್ತರರು ತಂದಿಟ್ಟ ಟ್ರೇನಲ್ಲಿ ಕೆಲವು ಅತ್ಯಂತ ಬೆಲೆಬಾಳುವಂತಹವು,ಚೈನಾ ಪಿಂಗಾಣಿಗಳು,ಕೆಲವು ಸ್ಟೀಲಿನ ಲೋಟಗಳು, ಪ್ಲಾಸ್ಟಿಕ್ ಕಪ್ಪುಗಳು ಕೆಲವು ಸುಂದರ ಗಾಜಿನ ಕಪ್ಪುಗಳು ಇನ್ನೂ ಕೆಲವು ಏನೂ ಬೆಲೆಬಾಳದ ಗಾಜಿನವು ಮತ್ತು ಕೆಲವು ಸ್ಟೀಲಿನ ಲೋಟಗಳು ಇದ್ದವು

**13. ಮಹಾಭಾರತದಲ್ಲಿ ಗಂಗಾದ್ವಾರದ ಬಗ್ಗೆ ಉಲ್ಲೇಖಗೊಂಡಿರುವ ಪ್ರಸಂಗಗಳನ್ನು ತಿಳಿಸಿ.**

ಉತ್ತರ: ಮಹಾಭಾರತದಲ್ಲಿಯೇ ಗಂಗಾದ್ವಾರದ ಉಲ್ಲೇಖ ಸಾಕಷ್ಟು ಸಲ ಕಾಣಿಸಿಕೊಂಡಿದೆ.ಶಂತುವಿನ ತಂದೆಪ್ರದೀಪನು ಗಂಗಾದ್ವಾರದಲ್ಲಿ ತಪಸ್ಸನ್ನಾಚರಿಸಿದನು.ಅರ್ಜುನನು ತನ್ನ ತೀರ್ಥಯಾತ್ರೆಯ ಸಂದರ್ಭದಲ್ಲಿ ಕೆಲವು ಕಾಲ ಗಂಗಾದ್ವಾರದಲ್ಲಿ ತಂಗಿದ್ದನು.ಹೀಗೆ ಹಲವು ಪ್ರಸಂಗಗಳು ಮಹಾಭಾರತದಲ್ಲಿ ಗಂಗಾದ್ವಾರದ ಬಗೆಗೆ ಹಲವು ಪ್ರಸಂಗಗಳು ಉಲ್ಲೇಖಗೊಂಡಿವೆ.

**14. ನಿಸರ್ಗದ ಆರಾಧನೆಯನ್ನು ಕವಿ ಹೇಗೆ ಸಮರ್ಥಿಸಿಕೊಳ್ಳುತ್ತಾರೆ?**

ಉತ್ತರ: ದೇವಸ್ಥಾನದ ಆವರಣದೊಳಗೆ ನಡೆಯುವ ಪೂಜೆಯ ಸಾಂಪ್ರದಾಯಕ ಕಟ್ಟನ್ನು ಕಳಚಿಕೊಂಡು, ಹರಿಯುವ ನದಿಯನ್ನೇ ದೇವರೆಂದು ಪೂಜೆ ಸಲ್ಲಿಸುವುದರ ಮೂಲಕ ಮತ್ತೆ ಮನುಷ್ಯತ್ವ ತನ್ನ ಪ್ರಾಚೀನತೆಯನ್ನು ಒಂದೇ ನೆಗತಕ್ಕೆ ತಲುಪಿದ ಭಾವನೆ ಮಾನವನು ನಿಸರ್ಗದೊಂದಿಗೆ ಒಂದು ಕಾಲಕ್ಕೆ ಸ್ಥಾಪಿಸಿಕೊಂಡ ಸಹಜ ಸಂಬಂಧವಾಗಿತ್ತು. ಹೀಗೆ ಕವಿ ನಿಸರ್ಗದ ಆರಾಧನೆಯನ್ನು ಕವಿ ಸಮರ್ಥಿಸುತ್ತಾರೆ

**15. ಮಲಗಿದ್ದ ಗೋಪಾಲನನ್ನು ತಾಯಿಯು ಯಾವ ಮಾತುಗಳಿಂದ ಎಳಿಸಿದಳು?**

ಉತ್ತರ: ಮಲಗಿದ್ದ ಗೋಪಲನನ್ನು ತಾಯಿಯು "ಗೋಪಾಲ ಬೆಳಗಾಯ್ತು ಮೇಲೇಳು; ನೋಡಲ್ಲಿ,ಸೂರ್ಯನಾರಾಯಣನು ತನ್ನ ಚಿನ್ನದ ಕಿರಣಗಳಿಂದ ಬಾವಿಯ ಬಳಿಯ ತೆಂಗಿನ ಮರದ ತುದಿಯಲ್ಲಿ ತೊಳಗುತ್ತಿದ್ದಾನೆ.ಕೇಳಲ್ಲಿ,ಹಕ್ಕಿಗಳು ಹಾಡುತ್ತಾ,ಹಾರಾಡಿ ಕೆಯುತ್ತಿವೆ ನಿನ್ನ.ಹೂಗಳು ಅರಳಿ ಬನದಲ್ಲಿ ನಿನಗಾಗಿ ಕಾದುಕೊಂಡಿವೆ.ಎದ್ದೇಳು ಗೋಪಾಲ.ಶಾಲೆಗೆ ಹೊತ್ತಾಗುತ್ತದೆ.ಗುರುಗಳು ಏನಂದಾರು? ಎನ್ನುವ ಮಾತುಗಳಿಂದ ಎಳಿಸಿದಳು.

**16. ಗೋಪಾಲನು ಹೂಬನದ ಸೊಗಸನ್ನು ಯಾವ ರೀತಿ ಪ್ರಕಟಿಸಿದನು?**

ಉತ್ತರ: "ಬನದಲ್ಲಿ ಏನಮ್ಮಾ ಸೊಗಸು" ಏನು ಆನಂದ ಮಲ್ಲಿಗೆಯ ಹೂವು ಕೇದಿಗೆಯ ಹೂವು ಸಂಪಿಗೆಯ ಹೂವು ಪರ್ವತ ಬಾಳೆಯ ಹೂವು ಗೋರಂಟೆಯ ಹೂವಿನಿಂದ ಕೂಡಿತ್ತು.ಅಲ್ಲಿದ್ದ ಹೂಗಳು ಸಾವಿರಾರು ಮಳೆಬಿಲ್ಲುಗಳು ಸೇರಿ ಕುಣಿದಂತೆ ತೋರುತ್ತಿತ್ತು.ಹಕ್ಕಿಗಳ ಇಂಪಾದ ಗಾನ,ತಂಗಾಳಿ,ಸೂರ್ಯದೇವನ ಹೊಂಬೆಳಕು ಹಸಿರಾದ ಚಿಗುರು ಹುಲ್ಲಿನ ಮೇಲೆಕೋಟ್ಯಂತರ ಹಿಮಮಣಿಗಳು ಮಿರುಗುವ ಲೀಲೆ ಮನೆಗಿಂತ ಬನವೇ ಸೊಗಸಮ್ಮ ಎಂದು ಗೋಪಾಲನು ಹೂಬನದ ಸೊಗಸನ್ನು ವರ್ಣಿಸಿದನು.

**17 .ಸಮಾಜ ಜೀವನದ ಪ್ರಧಾನ ಲಕ್ಷಣ ಯಾವುದು?**

ಉತ್ತರ: ಒಬ್ಬರು ಇನ್ನೊಬ್ಬರ ಬಳಿಗೆ ಹೋಗಬೇಕಾಗಿ ಬರುವುದು ಸಮಾಜ ಜೀವನದ ಪ್ರಧಾನ ಲಕ್ಷಣ. ದೊಡ್ಡ ಬೇಡಿಕೆಯೊಂದಿಗೆ ಹೋಗಬಹುದು. ಚಿಕ್ಕ ಕೋರಿಕೆಯೊಂದಿಗೆ ಹೋಗಬಹುದು.ಸ್ವಾರ್ಥಕ್ಕಾಗಿ ಹೊಗಬಹುದು,ಕರ್ತವ್ಯ ನಿರ್ವಹಣೆಗಾಗಿ ಹೋಗಬಹುದು,ಅಂಗಡಿಗೆ ಗ್ರಾಹಕರು ಹೋಗುತ್ತಾರೆ.ರೋಗಿಗಳು ವೈದ್ಯರ ಬಳಿ ಹೋಗುತ್ತಾರೆಜನರು ಅಧಿಕಾರಿಗಳ ಬಳಿ ಹೋಗುತ್ತಾರೆ,ದೂರು ಕೊಡಲು ಪೋಲಿಸರ ಬಳಿ ಹೋಗುತ್ತಾರೆ.

**18. ಸೌಜನ್ಯಶೀಲರ ಲಕ್ಷಣಗಳಾವುವು?**

ಉತ್ತರ:ಸಹಾನುಭೂತಿ ಸಹೃದಯತೆ ಸಮಾಧಾನ ಸೌಜನ್ಯಶೀಲರ ಲಕ್ಷಣ. ಇವರ ಒಂದು ಮಾತು. ಒಂದು ನಗು ಬಳಿಗೆ ಬಂದವರಿಗೆ ತೃಪ್ತಿ ನೀಡುತ್ತವೆ.ಇವರು ಸತ್ಯವನ್ನು ಹೇಳುತ್ತಾರೆ.ಅದರಲ್ಲೂ ಹೇಳುವ ಸತ್ಯವನ್ನು ಪ್ರೀಯವಾಗಿ ಹೇಳುವುದು ಸೌಜನ್ಯಶೀಲರ ಲಕ್ಷಣಗಳಾಗಿವೆ.

**19. ಸಿದ್ಧಾರ್ಥ ಬುದ್ಧನಾದ ಸಂದರ್ಭದಲ್ಲಿ ಕಾಡಿನ ತುಂಬ ಪ್ರೀತಿ ಹೇಗೆ ತುಂಬಿಕೊಂಡಿತು?**

ಉತ್ತರ: ಸಿದ್ಧಾರ್ಥ ಬುದ್ಧನಾದ ಸಂದರ್ಭದಲ್ಲಿ ಮರದ ಬಳ್ಳಿಯು ಹೂವನ್ನು ಮುಡಿದು ಅಪ್ಪಿಕೊಂಡಂತೆ ನಕ್ಕಿತು,ಹಕ್ಕಿಯು ಖುಷಿಯಿಂದ ನಗುತ್ತಾ ಹಾರಾಡಿ ತನ್ನ ಮರಿಗೆ ಗುಟುಕು ಕೊಡುತ್ತದೆ.ಇರುವೆಗಳು ಹುತ್ತದಿಂದ ಹೊರಗೆ ಬರುವಾಗ ಗುಂಪುಕಟ್ಟಿ ಸಾಲುಸಾಲಾಗಿ ನಡೆಯುತ್ತಿದ್ದವು.ಬೆಳ್ಳಿಚುಕ್ಕಿಯು ಗುಂಪಾಗಿ ಆಕಾಶಕ್ಕೆ ಏಣಿ ಹಾಕುತ್ತವೆ.ಕಾಡಿನ ತುಂಬ ಪ್ರಿತಿಯ ಹೊಳೆಯು ಕೆರೆಯಂತೆ

ಹರಿಯುತ್ತಿತ್ತು.ದುಂಬಿಯು ಮಕರಂದ ಸವಿಯಲು ಹೂವನ್ನು ಹುಡಿಕಿಕೊಂಡು ಸಾಗುತ್ತಿತ್ತು.ಗಿಡಗಳು ಒಂದಕ್ಕೊಂದು ಅಪ್ಪಿಕೊಂಡು ಕುಣಿಯುವಂತೆ ಕಂಡಿತು..

**20. ಚೈತ್ರದಲ್ಲಿ ಹಕ್ಕಿಗಳ ಕಲರವ ಹೇಗಿರುತ್ತದೆಂದು ಕವಿ ವರ್ಣಿಸಿದ್ದಾರೆ?**

ಉತ್ತರ: ಯುಗಾದಿಯ ದಿನದಂದು ಹಕ್ಕಿಗಳು ಪ್ರಕೃತಿಯಲ್ಲಿ ಕಾಣುವ ಹಸುರಾದ ಮರಗಳನ್ನು ಕಂಡು ಖುಷಿಪಡುತ್ತವೆ,ಅಲ್ಲದೇ ಮರಗಳ ಸೌಂದರ್ಯ ಕಂಡು ಪಕ್ಷಿಗಳು ಮುಗಿಲು ಮುಟ್ಟುವಂತೆ ತಮ್ಮ ಮಧುರ ಸ್ವರದಲ್ಲಿ ಇಂಪಾಗಿ ಹಾಡುತ್ತವೆ.ಆಗ ಆಕಾಶದಲ್ಲಿ ಪ್ರತಿಧ್ವನಿಯಂತೆ ಕೇಳುಸುತ್ತದೆ,ಇದನ್ನು ಕಂಡು ಹಕ್ಕಿಗಳು ಚಿಲಿಪಿಲಿಯಂತೆ ಗುಟುರು ಹಾಕುತ್ತಾ ಶಬ್ಧ ಮಾಡುತ್ತವೆ.

**21 .ಸದ್ದು ಮಾಡದೆ ಬಾಳಬೇಕು ಎಂಬುದಕ್ಕೆ ಕವಿ ನೀಡುವ ಹೋಲಿಕೆಗಳಾವುವು?**

ಉತ್ತರ: ತಟ್ಟೆಯಲ್ಲಿ ಕರ್ಪೂರ ಮೌನವಾಗಿ ಕರಗುತ್ತದೆ.ದೀಪದ ಎದುರಿಗೆ ಕತ್ತಲು ನಿಶ್ಯಬ್ಧವಾಗಿ ಸರಿಯುತ್ತದೆ,ರವಿಕಿರಣಗಳಿಗೆ ಇಬ್ಬನಿಕರಗಿ ನೀರಾಗುತ್ತದೆ,ಯಾವುದೇ ಶಬ್ಧ ಮಡದೇ ಹಡಗು ಬಂದರನ್ನು ಸೇರುತ್ತದೆ.ಹಾಗೆಯೇ ಮಾನವನು ಸದ್ದುಗದ್ಧಲವಿಲ್ಲದೇಬಾಳಬೇಕು ಎಂದು ಕವಿಯು ಹೋಲಿಕೆಗಳನ್ನು ನೀಡುತ್ತಾರೆ.

**22. ಮಾನವನ ಬದುಕು ಕರ್ಪೂರದಂತೆ ಇರಬೇಕು ಏಕೆ?**

ಉತ್ತರ: ತಟ್ಟೆಯಲ್ಲಿರುವ ಕರ್ಪೂರವು ಮೌನವಾಗಿ ಕರಗಿಕೊಂಡು ತನ್ನ ದೇಹವನ್ನು ಸುಟ್ಟುಕೊಂಡು ನಮಗೆ ಬೇಳಕನ್ನು ಕೊಡುತ್ತದೆ.ತಾನು ಕರಗಿದರೂ ಯಾವುದೇ ಗದ್ಧಲ ಮಾಡಲಾರದೇ ಬೆಳಕನ್ನು ನೀಡಿ ತನ್ನ ಕೆಲಸವನ್ನು ಮೌನವಾಗಿ ಪೂರೈಸುತ್ತದೆ.ಹಾಗೆಯೇ ಮಾನವನು ಯಾವುದೇ ಸದ್ದು ಗದ್ಧಲವಿಲ್ಲದೆ ಶಾಂತ ರೀತಿಯಿಂದ ತನ್ನ ಕರ್ತವ್ಯಗಳನ್ನು ಮುಗಿಸಬೇಕು ಎಂದು ಕವಿಯು ಹೇಳುತ್ತಾರೆ.

**23. ಜೀವನದಲ್ಲಿ ಒಂದೇ ಹೆಗ್ಗುರಿ ಇರಬೇಕು ಏಕೆ?**

ಉತ್ತರ: ಒಂದು ಬಾಣಕೆ ಒಂದೇ ಗುರಿಯಿರುತ್ತದೆ,ಒಂದು ದೇಹದೊಳಗೆ ಒಂದೇ ಆತ್ಮ ಇರುತ್ತದೆ,ಒಂದು ಜೀವನಕ್ಕೆ ಹಲವು ಸಾಧ್ಯತೆಗಳು ಇರಲು ಸಾಧ್ಯವಿಲ್ಲ.ಆದ್ದರಿಂದ ಜೀವನದಲ್ಲಿ ಒಂದೇ ಹೆಗ್ಗುರಿ ಇರಬೇಕು.ಹಗಲಿರುಳು ಒಂದೇ ಹೆಗ್ಗುರಿಗೆ ಹೋರಾಡಬೆಕು ಎಂದು ಹೇಳಿದ್ದಾರೆ.

**24. ಕುಣಿಗಲ್ ಕೆರೆ ನೋಡುವವರಿಗೆ ಹೇಗೆ ಕಾಣುತ್ತಿತ್ತು?**

ಉತ್ತರ: ಕುಣಿಗಲ್ ಕೆರೆ ನೋಡುವವರಿಗೆ ಒಂದು ವೈಭೋಗದಂತೆ ಇದೆ.ಅದು ಮನಸ್ಸಿಗೆ ಆನಂದವನ್ನು ನೀಡುವಂತೆ ಕಾಣುತ್ತಿತ್ತು.ಇದು
ಸಂತೆಯ ಹಾದಿಯಲ್ಲಿದ್ದು ಕಲ್ಲುಕಟ್ಟೆಯಿಂದ ಸುಂದರವಾಗಿ ನಿರ್ಮಾಣಗೊಂಡಿದೆ.ಕೆರೆಯು ಬಾಳೆಯ ಹಣ್ಣಿನಂತೆ ಬಾಗಿಕೊಂಡು ನಿಂಬೆಯ ಹಣ್ಣಿನಂತೆ ತುಂಬಿಕೊಂಡಂತೆ ಕಾಣಿಸುತ್ತಿತ್ತು.ಇದು ತನ್ನ ಸೌಂದರ್ಯದಿಂದ ಎಂಥವರನ್ನೂ ಬೆರಗುಗೊಳಿಸುವಂತೆ ಕಾಣಿಸುತ್ತಿತ್ತು.

**25. ಬಸವಣ್ಣನವರು 'ದೇಹವೇ ದೇಗುಲ'ವೆಂಬ ಕಲ್ಪನೆಯನ್ನು ಹೇಗೆ ವರ್ಣಿಸಿದ್ದಾರೆ?**

ಉತರ: ಹಣವಿರುವವರು ಶಿವಮಂದಿರ ಕಟ್ಟಿಸುವರು,ಬಡವನಾದ ನಾನು ಹೇಗೆ ಕಟ್ಟಿಸಲಿ ನನ್ನ ಕಾಲೇ ಕಂಬಗಳು,ದೇಹವೇ ಗುಡಿ,ತಲೆಯೇ ಬಂಗಾರದ ಕಳಸವೆಂದು ಭಾವಿಸು,ನನ್ನ ದೇಹಕ್ಕೆ ಅಳಿವಿಲ್ಲ ಎಂದು ಬಣ್ಣಿಸಿದ್ದಾರೆ.

**26. ಒಡಲು ಒಡೆವಂತೆ ಅರ್ಜುನನು ಮನದಲಿ ನಗಲು ಕಾರಣವೇನು?**

ಉತ್ತರ: ಅರ್ಜುನನು ರಥವನ್ನು ನಾಲ್ಕೆಂಟು ಅಡಿಗಳಷ್ಟು ಮುಂದಕ್ಕೆ ನೂಕಿದನು.ಉತ್ತರನು ಈ ಸಾರಥಿ ನನ್ನನ್ನು ಕೊಂದು ಬಿಟ್ಟನು ಎಂದು ಮೈ ಮೇಲಿನ ಸೆರಗನ್ನು ಒಟ್ಟುಗೂಡಿಸಿ ರಥದ ಹಿಂದಕ್ಕೆ ಬಂದು ನಿಂತು ಕೆಳಗೆ ಧುಮಿಕಿದನು.'ಬದುಕಿದೆ'ಎಂದು ತಲೆಗೂದಲು ಕೆದರಿ ಹಾರಾಡುತ್ತಿತ್ತು ನಂತರ ವೇಗದಿಂದ ಓಡಲು ತೊಡಗಿದ್ದುದನ್ನು ಕಂಡು ಅರ್ಜುನನು ಒಡಲ ಒಡೆಯುವಂತೆ ಮನದಲ್ಲಿ ನಕ್ಕನು.

**27.'ಕಾದುನಡೆ'ಎಂದು ಅರ್ಜುನನು ಉತ್ತರನನ್ನು ಏಕೆ ಒತ್ತಾಯಿಸಿದನು?**

ಉತ್ತರ: ಉತ್ತರನು ಹೆಂಗಳೆಯರ ಮುಂದೆ ಕೌರವನ ಸೇನೆಯನ್ನು ಸುಲಭವಾಗಿ ಎದುರಿಸಬಹುದೆಂದು ಬಾಯ್ಗೆ ಬಂದಂತೆ ಮಾತನಾಡಿದನು.ಆದರೆ ಯುದ್ಧದಲ್ಲಿ ಕೌರವನ ಸೇನೆಯನ್ನು ಕಂಡು ಹೆದರಿ ಓಡಲು ಪ್ರಾರಂಭಿಸಿದನು.ಆಗ ಅರ್ಜುನನು ಸೈನ್ಯವನ್ನು ಸರಿಯಾಗಿ ಅರಿಯದೆ ಹಲ್ಲು ಕಿರಿದು ಮಾತನಾಡಿದೆ,ಈಗ ಅಂಜುಬುರುಕ ನರಿಯಂತೆ ಓಡುವುದು ಸರಿಯಲ್ಲ ಕಾದುನಡೆ ಎಂದು ಅರ್ಜುನನು ಉತ್ತರನಿಗೆ ಹೇಳಿದನು.

# ಕಂಠಪಾಠ ಪದ್ಯಗಳು

## ಬೋಧಿವೃಕ್ಷದ ಹಾಡು

ಏಕಾಂಗಿ ವೀರನಂತೆ ಮಧ್ಯರಾತ್ರಿ ಎದ್ದನು
ಮಡದಿ ಮಗುವ ತೊರೆದನವನು ಅಡವಿ ದಾರಿ ಹಿಡಿದನು
ಅರಮನೆಯ ಮೋಹವನ್ನು ಹರಿದು ಹಾಕಿ ಹೋದನು
ಗೊತ್ತು ಗುರಿಯು ಇಲ್ಲದಂತೆ ಕತ್ತಲಲ್ಲಿ ನಡೆದನು

## ಸವಿ ಚೈತ್ರ

ಕೊರಡ ಕೊನರಿಸಿ ತುದಿಗೆ ಮುಗುಳ ನಗೆ ಮುತ್ತಿಟ್ಟು
ಬರಡು ಜೀವಕೆ ಹೊಸತು ಚೈತನ್ಯವು
ಕುಕಿಲ ಕೋಗಿಲೆ ಕಂಠ ಮುಕ್ತ ತಾರಕಕೇರಿ
ಚಿಲಿಪಿಲಿಯ ಕಲರವಕೆ ಮತ್ತೇರಿದೆ.

## ಗುರಿ

ಒಂದು ಬಾಣಕೆ ಗುರಿಯು ಹಲವಿರುವುದುಂಟೆ?
ಒಂದು ದೇಹದೊಳಾತ್ಮವೆರಡಿರುವುದುಂಟೆ?
ಒಂದು ಜೀವನಕೇಕೆ ಹಲವು ಸಾಧ್ಯಗಳು
ಒಂದೆ ಹೆಗ್ಗುರಿಗೆ ಹೋರಾಡು ಹಗಲಿರುಳು.

## ವಚನಗಳು

ಉಳ್ಳವರು ಶಿವಾಲಯವ ಮಾಡುವರು!
ನಾನೇನ ಮಾಡುವೆ? ಬಡವನಯ್ಯ!
ಎನ್ನ ಕಾಲೇ ಕಂಬ,ದೇಹವೇ ದೇಗುಲ,
ಶಿರವೇ ಹೊನ್ನ ಕಳಶವಯ್ಯ!
ಕೂಡಲಸಂಗಮದೇವ ಕೇಳಯ್ಯ,
ಸ್ಥಾವರಕ್ಕಳಿವುಂಟು,ಜಂಗಮಕ್ಕಳಿವಿಲ್ಲ.

## ನಿಟ್ಟೊಟದಲ್ಲಿ ಹಾಯ್ದನು ಬಿಟ್ಟ ಮಂಡೆಯಲಿ

ಕಡೆಗೆ ಹಾಯವು ಕಂಗಳೀ ಬಲ
ಗಡಲ ಮನವೀಸಾಡಲಾರದು
ವೊಡಲುವಿಡಿದಿರಲೇನ ಕಾಣಲು ಬಾರದದ್ಭುತವ
ಪೊಡವಿಯೀದುದೊ ಮೋಹರವನಿದ
ರೊಡನೆ ಕಾದುವನಾವನಾತನೆ
ಮೃಡನು ಶಿವ ಶಿವ ಕಾದಿಗೆಲಿದೆವು ಬಲಕೆ ನಮೊಯೆಂದ.

| ಪಾಠ/ಪದ್ಯದ ಹೆಸರು | ಕವಿಯ ಹೆಸರು | ಆಕರ ಕೃತಿ |
|---|---|---|
| ಒಣ ಮರದ ಗಿಳಿ | ಅ.ರಾ.ಮಿತ್ರ | ಮಹಾಭಾರತ ಪಾತ್ರ–ಸಂಗತಿಗಳು |
| ಅಸಿ–ಮಸಿ–ಕೃಷಿ | ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ | ವ್ಯಕ್ತಿತ್ವ |
| ಗಾನಯೋಗಿ ಪಂಡಿತ ಪುಟ್ಟರಾಜ ಗವಾಯಿ | ರಮೇಶಗೌಡ ಎಂ.ಕೆ | ಗಾನಯೋಗಿ ಡಾ.ಪಂ.ಪುಟ್ಟರಾಜ ಕವಿ ಗವಾಯಿಗಳು |
| ಹಕ್ಕಿಗೂಡುಗಳ ನಿಗೂಢ ಜಗತ್ತು | ಕೆ.ಪುಟ್ಟಸ್ವಮಿ,ಕೃಪಾಕರ ಮತ್ತು ಸೇನಾನಿ | ಜೀವಜಾಲ |
| ಕಾಫೀ–ಕಪ್ಪು | ಗುರುರಾಜ ಕರ್ಜಗಿ | ಕರುಣಾಳು ಬಾ ಬೆಳಕೆ |
| ಗಂಗೆಯಲ್ಲಿ ದೀಪಮಾಲೆ | ಡಾ.ಜಿ.ಎಸ್.ಶಿವರುದ್ರಪ್ಪ | ಗಂಗೆಯ ಶಿಖರಗಳಲ್ಲಿ |
| ನನ್ನ ಗೋಪಾಲ | ಕುವೆಂಪು | ನನ್ನ ಗೋಪಾಲ |
| ಸೌಜನ್ಯ | ಹಾ.ಮಾ.ನಾಯಕ | ಸೂಲಂಗಿ |
| ಬೋಧಿವೃಕ್ಷದ ಹಾಡು | ಬಸವರಾಜ ಸಬರದ | ಪದಕಟ್ಟಿ ಹಾಡೇನ |
| ಸವಿಚೈತ್ರ | ಬಸವರಾಜ ಸಾದರ | ಸಿಸಿಫಸರ ಸುತ್ತು |
| ಸದ್ದು ಮಾಡದಿರು | ಸಿ.ಪಿ.ಕೃಷ್ಣಕುಮಾರ | ಬೊಗಸೆ |
| ಗುರಿ | ಎಂ.ಗೋಪಾಲಕೃಷ್ಣ ಅಡಿಗ | ಸಮಗ್ರ ಕಾವ್ಯ |
| ಮೂಡಲ್ ಕುಣಿಗಲ್ ಕೆರೆ | ಜನಪದ ಗೀತೆ | ಕನ್ನಡ ಜನಪದ ಸಾಹಿತ್ಯ ಭಂಡಾರ |
| ವಚನಗಳು | ಬಸವಣ್ಣ,ಸೊನ್ನಲಿಗೆಯ ಸಿದ್ಧರಾಮ,ಅಕ್ಕಮಹಾದೇವಿ | – |
| ನಿಟ್ಟೋಟದಲಿ ಹಾಯ್ದನು ಬಿಟ್ಟಮಂಡೆಯಲಿ | ಕುಮಾರವ್ಯಾಸ | ಗದುಗಿನ ಭಾರತ |

# ಲೇಖಕರ & ಕವಿಗಳ ಪರಿಚಯ

## ಗದ್ಯ ಭಾಗ

**ಗದ್ಯ ಪಾಠ :- 01 ಒಣ ಮರದ ಗಿಳಿ**

ಲೇಖಕರು :- ಅ.ರಾ ಮಿತ್ರ ರವರು ಮಂಡ್ಯ ಜಿಲ್ಲೆ ಅಕ್ಕಿ ಹೆಬ್ಬಾಳು ವಿನಲ್ಲಿ ಕ್ರಿ.ಶ 1935 ರಲ್ಲಿ ಜನಿಸಿದರು. ಇವರು ಒಳನೋಟಗಳು,ಕವಿಗಳ ಬೆನ್ನೇರಿ,ಕೈಲಾಸಂ ಬದುಕು ಬರಹ,ಛಂದೋಮಿತ್ರ ಇತ್ಯಾದಿ ಕೃತಿಗಳನ್ನು ಬರೆದು ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದರು.ಇಂತಹ ಸಾಹಿತ್ಯ ಕೃಷಿಮಾಡಿದ ಇವರಿಗೆ ಅನೇಕ ಗೌರವ ಪುರಸ್ಕಾರಗಳು ದೊರೆತಿವೆ, ಅವುಗಳಲ್ಲಿ ಪ್ರಮುಖವಾದವುಗಳೆಂದರೆ ನವರತ್ನರಾಂ,ವರ್ಧಮಾನ,ಕಾವ್ಯಾನಂದ,ಧರ್ಮಶ್ರೀ ನಗೆರಾಜ ಪ್ರಶಸ್ತಿಗಳು ಇತ್ಯಾದಿಗಳು.

**ಗದ್ಯ ಪಾಠ :- 02 ಅಸಿ-ಮಸಿ-ಕೃಷಿ**

ಲೇಖಕರು :- ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳು ರವರು ಹಾವೇರಿ ಜಿಲ್ಲೆ ರಾಣೆಬೆನ್ನೂರು ತಾಲೂಕಿನ ಹೆಡಿಯಾಲ ದಲ್ಲಿ ಕ್ರಿ.ಶ 1951 ರಲ್ಲಿ ಜನಿಸಿದರು. ಇವರು ಜೀವನ ದರ್ಶನ, ಕೈದೀವಿಗೆ, ಹುಟ್ಟುಸಾವುಗಳ ಮಧ್ಯೆ, ಸಮಾದಿಯ ಮೇಲೆ,ಅರಿವಿನ ಅಂತರಾಳ ಇತ್ಯಾದಿ ಕೃತಿಗಳನ್ನು ಬರೆದು ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದರು.ಇಂತಹ ಸಾಹಿತ್ಯ ಕೃಷಿಮಾಡಿದ ಇವರಿಗೆ ಅನೇಕ ಗೌರವ ಪುರಸ್ಕಾರಗಳು ದೊರೆತಿವೆ, ಅವುಗಳಲ್ಲಿ ಪ್ರಮುಖವಾದವುಗಳೆಂದರೆ ರಾಜ್ಯೋತ್ಸವ ಪ್ರಶಸ್ತಿ, ಪಾಲ್ ಹ್ಯಾರಿಸ್ ಪ್ರಶಸ್ತಿಗಳು ಹಾಗೂ ರಂಗ ಜಂಗಮ ವೆಂದು ಖ್ಯಾತರಾಗಿದ್ದಾರೆ.

**ಗದ್ಯ ಪಾಠ :- 03 ಗಾನಯೋಗಿ ಪಂಡಿತ ಪುಟ್ಟರಾಜ ಗವಾಯಿಗಳು**

ಲೇಖಕರು :- ಶ್ರೀ ರಮೇಶಗೌಡ ಎಂ.ಕೆ ರವರು ಧಾರವಾಡ ಜಿಲ್ಲೆ ನವಲಗುಂದ ತಾಲೂಕಿನ ಕಿತ್ತೂರು ಗ್ರಾಮದಲ್ಲಿ ಕ್ರಿ.ಶ 1975 ರಲ್ಲಿ ಜನಿಸಿದರು. ಇವರು ಅಮೃತಕ್ಕೆ ಹಾರಿದ ಗರುಡ,ರೂಪ ಬಯಲು,ಗಾನಯೋಗಿ ಪುಟ್ಟರಾಜ ಗವಾಯಿಗಳು ಇತ್ಯಾದಿ ಕೃತಿಗಳನ್ನು ಬರೆದು ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದರು.ಇಂತಹ ಸಾಹಿತ್ಯ ಕೃಷಿಮಾಡಿದ ಇವರಿಗೆ ಅನೇಕ ಗೌರವ ಪುರಸ್ಕಾರಗಳು ದೊರೆತಿವೆ, ಅವುಗಳಲ್ಲಿ ಪ್ರಮುಖವಾದವುಗಳೆಂದರೆ ರತ್ನಾಕರವರ್ಣಿ ಮುದ್ದಣ್ಣ ದತ್ತಿ ಪ್ರಶಸ್ತಿ,ಕರ್ನಾಟಕ ಸಾಹಿತ್ಯ ಅಕಾಡೆಮಿಯ ಉತ್ತಮಕೃತಿ ಪ್ರಶಸ್ತಿಗಳು ಇತ್ಯಾದಿಗಳು.

**ಗದ್ಯ ಪಾಠ :- 04 ಹಕ್ಕಿಗೂಡುಗಳ ನಿಗೂಢ ಜಗತ್ತು**

ಲೇಖಕರು :- ಶ್ರೀ ಕೆ.ಪುಟ್ಟಸ್ವಾಮಿ,ಬಿ,ಎಸ್,ಕೃಪಾಕರ ಮತ್ತು ಸೇನಾನಿ

**ಗದ್ಯ ಪಾಠ :- 05 ಕಾಫೀ ಕಪ್ಪು**

ಲೇಖಕರು :- ಶ್ರೀ ಗುರುರಾಜ ಕರ್ಜಗಿ ರವರು ಹಾವೇರಿ ಜಿಲ್ಲೆ ಕರ್ಜಗಿಯಲ್ಲಿ ಕ್ರಿ.ಶ 1952 ರಲ್ಲಿ ಜನಿಸಿದರು. ಇವರು ಬರೆದು ಪ್ರಕಟಿಸಿದ್ದಾರೆ ಹಾಗೂ "ಕರುಣಾಳು ಬಾ ಬೆಳಕೆ" ಎನ್ನುವ ಅಂಕಣ ಬರಹವನ್ನು ಬರೆಯುತ್ತಿದ್ದಾರೆ.ಅದು ಹೆಚ್ಚು ಜನಪ್ರೀಯವಾಗಿದೆ. ಹೀಗೆ ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದ ಇವರಿಗೆ ರಾಜ್ಯೋತ್ಸವ ಪ್ರಶಸ್ತಿ ಹಾಗೂ ಅನೇಕ ಗೌರವ ಪುರಸ್ಕಾರಗಳು ದೊರೆತಿವೆ,

**ಗದ್ಯ ಪಾಠ :- 06 ಗಂಗೆಯಲ್ಲಿ ದೀಪಮಾಲೆ**

ಲೇಖಕರು :- ಶ್ರೀ ಜಿ.ಎಸ್.ಶಿವರುದ್ರಪ್ಪ ರವರು ಶಿವಮೊಗ್ಗ ಜಿಲ್ಲೆ ಶಿಕಾರಿಪೂರ ತಾಲೂಕಿನ ಈಸೂರು ಗ್ರಾಮದಲ್ಲಿ ಕ್ರಿ.ಶ 07-02-1926 ರಲ್ಲಿ ಜನಿಸಿದರು. ಇವರು ಸಾಮಗಾನ,ಚೆಲುವ-ಒಲವು,ಸಂಜೆದಾರಿ,ದೀಪದ ಹೆಜ್ಜೆ,ಅನಾವರಣ ಇತ್ಯಾದಿ ಕೃತಿಗಳನ್ನು ಬರೆದು ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದರು. ಇವರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ,ಸೋವಿಯತ್ ಲ್ಯಾಂಡ್ ಪ್ರಶಸ್ತಿ,ಪಂಪ ಪ್ರಶಸ್ತಿ ಇತ್ಯಾದಿ ಪ್ರಶಸ್ತಿ ಗಳು ದೊರೆತಿವೆ.

**ಗದ್ಯ ಪಾಠ :- 07 ನನ್ನ ಗೋಪಾಲ**

ಲೇಖಕರು :- ಶ್ರೀ ಕುವೆಂಪು ರವರು ಶಿವಮೊಗ್ಗ ಜಿಲ್ಲೆ ತೀರ್ಥಹಳ್ಳಿ ತಾಲೂಕಿನ ಕುಪ್ಪಳ್ಳಿ ಗ್ರಾಮದಲ್ಲಿ ಕ್ರಿ.ಶ 1904 ರಲ್ಲಿ ಜನಿಸಿದರು. ಇವರು ನನ್ನ ಗೋಪಾಲ,ನವಿಲು,ಪಕ್ಷಿಕಾಶಿ, ಜಲಗಾರ,ವಿಭೂತಿ ಪೂಜೆ,ಕಾನೂರು ಹೆಗ್ಗಡತಿ,ಮಲೆಗಳಲ್ಲಿ ಮಧುಮಗಳು,ಶ್ರೀ ರಾಮಾಯಣ ದರ್ಶನಂ ಇತ್ಯಾದಿ ಕೃತಿಗಳನ್ನು ಬರೆದು ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದರು.ಇಂತಹ ಸಾಹಿತ್ಯ ಕೃಷಿಮಾಡಿದ ಇವರಿಗೆ ಅನೇಕ ಗೌರವ ಪುರಸ್ಕಾರಗಳು ದೊರೆತಿವೆ, ಅವುಗಳಲ್ಲಿ ಪ್ರಮುಖವಾದವುಗಳೆಂದರೆ ಜ್ಞಾನಪೀಠ,ಕರ್ನಾಟಕ ರತ್ನ,ರಾಷ್ಟ್ರಕವಿ, ಪಂಪ ಪ್ರಶಸ್ತಿ,ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಇತ್ಯಾದಿಗಳು.

**ಗದ್ಯ ಪಾಠ :- 08 ಸೌಜನ್ಯ**

ಲೇಖಕರು :- ಹಾ.ಮಾ.ನಾಯಕ ರವರು ಶಿವಮೊಗ್ಗ ಜಿಲ್ಲೆ ತೀರ್ಥಹಳ್ಳಿ ತಾಲೂಕಿನ ಹಾರೋಗದ್ದೆ ಗ್ರಾಮದಲ್ಲಿ ಕ್ರಿ.ಶ 12-09-1931 ರಲ್ಲಿ ಜನಿಸಿದರು.ಇವರು ಸಂಪ್ರತಿ,ಸೂಲಂಗಿ,ಸಲ್ಲಾಪ,ಸಂಪಣ,ಸ್ವಗತ,ಸಮೀಕ್ಷೆ ಇತ್ಯಾದಿ ಕೃತಿಗಳನ್ನು ಬರೆದು ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದ ಇವರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ನೀಡಿ ಗೌರವಿಸಲಾಗಿದೆ.

# ಪದ್ಯ ಭಾಗ

**ಪದ್ಯ ಪಾಠ :- 01 ಬೋಧಿ ವೃಕ್ಷದ ಹಾಡು**

ಕವಿ :- ಶ್ರೀ ಬಸವರಾಜ ಸಬರದ ರವರು ಕೊಪ್ಪಳ ಜಿಲ್ಲೆ ಕುಕನೂರು ಗ್ರಾಮದಲ್ಲಿ ಕ್ರಿ.ಶ 1954 ರಲ್ಲಿ ಜನಿಸಿದರು. ಇವರು ನನ್ನವರ ಹಾಡು,ಹೋರಾಟ,ಮೂಡಲಕ ಕೆಂಪು ಮೂಡ್ಯಾವ, ನೂರು ಹನಿಗಳು ದನಿಯೆತ್ತಿ ಹಾಡೇನ,ನರಬಲಿ ಇತ್ಯಾದಿ ಕೃತಿಗಳನ್ನು ಬರೆದು ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದರು.ಇಂತಹ ಸಾಹಿತ್ಯ ಕೃಷಿಮಾಡಿದ ಇವರಿಗೆ ಅನೇಕ ಗೌರವ ಪುರಸ್ಕಾರಗಳು ದೊರೆತಿವೆ, ಅವುಗಳಲ್ಲಿ ಪ್ರಮುಖವಾದವುಗಳೆಂದರೆ ದೇವರಾಜ ಬಹದ್ದೂರ ಪ್ರಶಸ್ತಿ,ಕಾವ್ಯಾನಂದ ಪ್ರಶಸ್ತಿ,ಸಾಹಿತ್ಯಶ್ರೀ ಪ್ರಶಸ್ತಿ ಇತ್ಯಾದಿಗಳು.

**ಪದ್ಯ ಪಾಠ :- 02 ಸವಿಚೈತ್ರ**

ಕವಿ :- ಶ್ರೀ ಬಸವರಾಜ ಸಾದರ ಧಾರವಾಡ ಜಿಲ್ಲೆ ಕುಂದಗೋಳ ದಲ್ಲಿ ಕ್ರಿ.ಶ 1955 ರಲ್ಲಿ ಜನಿಸಿದರು. ಇವರು ಸಿಸಿಫಸರ ಸುತ್ತು,ತಪ್ಪಂಡ,ಹೊಸ ಆಲೋಚನೆ,ಮೃಧುವಾಗಿ ಮುಟ್ಟು ಇತ್ಯಾದಿ ಕೃತಿಗಳನ್ನು ಬರೆದು ಕನ್ನಡ ಸಾಹಿತ್ಯವನ್ನು ಶ್ರೀಮಂತ-ಗೊಳಿಸಿದರು. ಇಂತಹ ಸಾಹಿತ್ಯ ಕೃಷಿಮಾಡಿದ ಇವರಿಗೆ ಅನೇಕ ಗೌರವ ಪುರಸ್ಕಾರಗಳು ದೊರೆತಿವೆ, ಅವುಗಳಲ್ಲಿ ಪ್ರಮುಖವಾದವುಗಳೆಂದರೆ ಜಯತೀರ್ಥ ರಾಜಪುರೋಹಿತ ಸ್ಮಾರಕ ಬಹುಮಾನ ,ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಇತ್ಯಾದಿಗಳು.

**ಪದ್ಯ ಪಾಠ :- 03 ಸದ್ದು ಮಾಡದಿರು**

ಕವಿ :- ಶ್ರೀ ಸಿ.ಪಿ.ಕೆ ಮೈಸೂರು ಜಿಲ್ಲೆ ಕೃಷ್ಣರಾಜನಗರ ತಾಲೂಕಿನ ಚಿಕ್ಕನಾಯಕನಹಳ್ಳಿ ಯಲ್ಲಿ ಕ್ರಿ.ಶ 1939 ರಲ್ಲಿ ಜನಿಸಿದರು. ಇವರು ತಾರಾ ಸುಖ,ಬೊಗಸೆ,ಅನಂತಪೃಥ್ವಿ,ಪರಿಭಾವನೆ,ಕಾವ್ಯಾರಾಧನಾ,ಕನ್ನಡ ರತ್ನಾವಳಿ, ಇತ್ಯಾದಿ ಕೃತಿಗಳನ್ನು ಬರೆದು ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದರು. ಇಂತಹ ಸಾಹಿತ್ಯ ಕೃಷಿಮಾಡಿದ ಇವರಿಗೆ ಅನೇಕ ಗೌರವ ಪುರಸ್ಕಾರಗಳು ದೊರೆತಿವೆ, ಅವುಗಳಲ್ಲಿ ಪ್ರಮುಖವಾದವುಗಳೆಂದರೆ ವಿದ್ವತ್ ಶಿರೋಮಣಿ,ಬಸವ ಸಾಹಿತ್ಯಶ್ರೀ,ರಾಜ್ಯೋತ್ಸವ,ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಇತ್ಯಾದಿಗಳು.

**ಪದ್ಯ ಪಾಠ :- 04 ಗುರಿ**

ಕವಿ :- ಶ್ರೀ ಎಂ ಗೋಪಾಲಕೃಷ್ಣಅಡಿಗ ಉಡುಪಿ ಜಿಲ್ಲೆ ಕುಂದಾಪೂರ ತಾಲೂಕಿನ ಮೋಗೇರಿಯಲ್ಲಿ ಕ್ರಿ.ಶ 1918 ರಲ್ಲಿ ಜನಿಸಿದರು. ಇವರು ಭಾವತರಂಗ,ಚಂಡೆಮದ್ದಳೆ,ಭೂಮಿ ಗೀತ, ನಡೆದುಬಂದ ದಾರಿ,ಅನಾಥೆ,ಆಕಾಶ ದೀಪ ಇತ್ಯಾದಿ ಕೃತಿಗಳನ್ನು ಬರೆದು ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದರು. ಇಂತಹ ಸಾಹಿತ್ಯ ಕೃಷಿಮಾಡಿದ ಇವರಿಗೆ ಅನೇಕ ಗೌರವ ಪುರಸ್ಕಾರಗಳು ದೊರೆತಿವೆ, ಅವುಗಳಲ್ಲಿ ಪ್ರಮುಖವಾದವುಗಳೆಂದರೆ ಪಂಪ ಪ್ರಶಸ್ತಿ,ರಜ್ಯೋತ್ಸವ ಪ್ರಶಸ್ತಿ,ಕೇರಳದ ಕುಮಾರನ್ ಆಶಾನ್ ಪ್ರಶಸ್ತಿ,ಕಬೀರ್ ಸಮ್ಮಾನ, ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಇತ್ಯಾದಿಗಳು.

**ಪದ್ಯ ಪಾಠ :- 05 ಮೂಡಲ್ ಕುಣಿಗಲ್ ಕೆರೆ** (ಜನಪದ ಗೀತೆ )

**ಪದ್ಯ ಪಾಠ :- 06 ವಚನಗಳು**

ವಚನಕಾರರು :- ಶ್ರೀ ಬಸವಣ್ಣನವರು ವಿಜಯಪೂರ ಜಿಲ್ಲೆ ಬಾಗೆವಾಡಿಯಲ್ಲಿ ಹನ್ನೆರಡನೇ ಶತಮಾನದ ಮಧ್ಯಭಾಗದಲ್ಲಿ ಜನಿಸಿದರು. ತಂದೆ ಮಾದರಸ ತಾಯಿ ಮಾದಲಾಂಬಿಕೆ.ಇವರು ಸುಮಾರು 1500 ಕ್ಕೂ ಹೆಚ್ಚು ವಚನಗಳ ರಚನೆಯನ್ನು ಮಾಡಿದ್ದಾರೆ.ಇವರ ವಚನಗಳ ಅಂಕಿತ ಕೂಡಲಸಂಗಮದೇವ.

** ಸೊನ್ನಲಿಗೆ ಸಿದ್ದರಾಮ :- ಇವರು ಬಸವಣ್ಣನವರ ಸಮಕಾಲಿನವರು. ಹನ್ನೆರಡನೇ ಶತಮಾನದ ಮಧ್ಯಭಾಗದಲ್ಲಿಸೊನ್ನಲಿಗೆಯಲ್ಲಿ ಜನಿಸಿದರು.ಇವರ ತಂದೆ ಮುದ್ದುಗೌಡ ತಾಯಿ ಸುಗ್ಗವ್ವೆ.ಇವರು ನೂರಾರು ವಚನಗಳನ್ನು ರಚಿಸಿದ್ದಾರೆ. ಇವರ ವಚನಗಳ ಅಂಕಿತ ಕಪಿಲಸಿದ್ದಮಲ್ಲಿಕಾರ್ಜುನ.

** ಅಕ್ಕಮಹಾದೇವಿ :- ಹನ್ನೆರಡನೇ ಶತಮಾನದ ಮಧ್ಯ ಭಾಗದಲ್ಲಿದ್ದ ಬಹುದೊಡ್ಡ ಶಿವಶರಣೆ ಅಕ್ಕಮಹಾದೇವಿ.ಇವರು ಶಿವಮೊಗ್ಗ ಜಿಲ್ಲೆ ಉಡುತಡಿ ಯಲ್ಲಿ ಜನಿಸಿದರು.ಅಲ್ಲಮ ಪ್ರಭುವಿನಿಂದ 'ವೈರಾಗ್ಯನಿಧಿ'ಎನಿಸಿಕೊಂಡ ಇವರು 'ಯೋಗಾಂಗ ತ್ರಿವಿದಿ' ಎಂಬ ಕೃತಿಯನ್ನು ಹಾಗೂ ಅಸಂಖ್ಯಾತ ವಚನಗಳನ್ನು ರಚಿಸಿದ್ದಾರೆ. ಇವರ ವಚನಗಳ ಅಂಕಿತ ಚೆನ್ನಮಲ್ಲಿಕಾರ್ಜುನ.

**ಪದ್ಯ ಪಾಠ :- 07 ನಿಟ್ಟೋಟದಲಿ ಹಾಯ್ವನು ಬಿಟ್ಟ ಮಂಡೆಯಲಿ**

ಕವಿ :- ಕುಮಾರವ್ಯಾಸ (ಗದುಗಿನ ನಾರಾಣಪ್ಪ) ರವರು ಗದುಗ ಪ್ರಾಂತದ ಕೋಳಿವಾಡದಲ್ಲಿ ಕ್ರಿ.ಶ ಸುಮಾರು 1430 ರಲ್ಲಿ ಜನಿಸಿದರು. ಇವರು ಗದುಗಿನ ಭಾರತ ಎಂಬ ಶ್ರೇಷ್ಠ ಕಾವ್ಯವನ್ನು ರಚಿಸಿದ್ದಾರೆ ಹಾಗೂ ಐರಾವತ ಎಂಬ ಕೃತಿಯನ್ನು ಇವರದೆಂದು ಹೇಳಲಾಗಿದೆ.ಇವರಿನ್ನು ರೂಪಕ ಸಾಮ್ರಾಜ್ಯದ ಚಕ್ರವರ್ತಿ ಎಂಬ ಬಿರುದಿನಿಂದ ಕರೆಯಲಾಗುತ್ತದೆ.

# ಗಾದೆ ಮಾತುಗಳ ವಿವರಣೆ

## 01) ಗುಣ ನೋಡಿ ಗೆಳೆತನ ಮಾಡು

ಗಾದೆಗಳು ಜೀವನದ ಸತ್ಯವನ್ನು ಎತ್ತಿ ಹಿಡಿಯುತ್ತವೆ. ಜ್ಞಾನ ಬಂಢಾರದಲ್ಲಿ ಅವುಗಳ ಪಾತ್ರ ಬಹು ದೊಡ್ಡದು. ಗಾದೆಗಳು ಸಾವಿರ ಪದಗಳಲ್ಲಿ ಹೇಳಬಹುದಾದ ವಿಚಾರಗಳನ್ನು ಒಂದು ವಾಕ್ಯದಲ್ಲಿ ಹೇಳುತ್ತವೆ. ಇವು ಗಾತ್ರದಲ್ಲಿ ವಾಮನನಂತಿದ್ದರೂ ಅರ್ಥದಲ್ಲಿ ತ್ರಿವಿಕ್ರಮನಂತಿವೆ.ನಮ್ಮ ಪೂರ್ವಜರು ತಮ್ಮ ಬದುಕಿನಲ್ಲಿ ಅನುಭವಿಸಿದ ನೋವು ನಲಿವಿನ ಜೀವನಾನುಭವದಂತಿವೆ.ನಮಗೆ ಮಾರ್ಗದರ್ಶಕಗಳಾಗಿವೆ.ಆದ್ದರಿಂದಲೆ ವೇಧ ಸುಳ್ಳಾದರೂ ಗಾದೆ ಸುಳ್ಳಾಗದು ಎಂದಿದ್ದಾರೆ.

ಪ್ರತಿಯೊಬ್ಬ ವ್ಯಕ್ತಿಯ ಬದುಕಿನಲ್ಲಿ ಗೆಳೆತನ ಎನ್ನುವುದು ಅತ್ಯಂತ ಪ್ರಮುಖವಾದ ಪಾತ್ರವನ್ನು ನಿರ್ವಹಿಸುತ್ತದೆ. ಆದ್ದರಿಂದಲೇ ನಾವು ನಮ್ಮ ಜೀವನವನ್ನು ಸಾರ್ಥಕವಾಗಬೇಕಾದರೇ ಉತ್ತಮ ವ್ಯಕ್ತಿಗಳ ಸ್ನೇಹ ಮಾಡಬೇಕಾಗುತ್ತದೆ. ಉತ್ತಮ ವ್ಯಕ್ತಿಗಳೊಂದಿಗೆ ಗೆಳೆತನವನ್ನು ಮಾಡಿದರೆ ಉತ್ತಮವಾದ ನಡೆ,ನುಡಿಗಳ ಮೂಲಕ ನಮ್ಮ ಗುಣವೂ ಉತ್ತಮವಾಗುತ್ತದೆ ಆ ಮೂಲಕ ಉತ್ತಮವಾದ ಕೆಲಸಗಳ ಮೂಲಕ ಒಳ್ಳೆಯ ವ್ಯಕ್ತಿಯಾಗಿ ಸಮಾಜದಲ್ಲಿ ಗುರುತಿಸಿಕೊಳ್ಳಲು ಸಾಧ್ಯವಾಗುತ್ತದೆ. ನಮ್ಮ ಜೀವನವೂ ಸುಖ – ಸಂತೋಷಗಳಿಂದ ಕೂಡಿರುತ್ತದೆ. ಗೆಳೆತನ ಮಾಡುವಾಗ ವ್ಯಕ್ತಿಯ ಗುಣಾವಗುಣಗಳನ್ನು ನೋಡಿ ಅವನ ಸ್ನೇಹವನ್ನು ಮಾಡಬೇಕಾಗುತ್ತದೆ.ಇಲ್ಲದಿದ್ದರೇ ನಮ್ಮ ಜೀವನವೇ ಹಾಳಾಗಿ ಹೋಗುತ್ತದೆ. ಸರ್ವಜ್ಞ ಹೇಳಿದಂತೆ ಸಜ್ಜನರ ಸಂಗ ಹೆಜ್ಜೇನು ಸವಿದಂತೆ,ದುರ್ಜನರ ಸಂಗ ಬಚ್ಚಲು ರೊಜ್ಜಿನಂತೆ ಸರ್ವಜ್ಞ ಎಂದಿರುವುದು ನಮ್ಮ ಬದುಕಿನಲ್ಲಿ ಗೆಳೆತನದ ಮಹತ್ವವನ್ನು ಎತ್ತಿ ತೋರಿಸುತ್ತದೆ. ಆದ್ದರಿಂದ ಗೇಳೆತನ ಮಾಡುವಾಗ ನಮ್ಮ ವ್ಯಕ್ತಿತ್ವ ಹಾಳಾಗದಂತೆ ಜಾಗೃತೆ ವಹಿಸಿ ವ್ಯಕ್ತಿಯ ನಡೆ – ನುಡಿಗಳನ್ನು ಗಮನಿಸಿ ಸ್ನೇಹ ಮಾಡಿ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಬೇಕು.

## 02) ಕೈ ಕೆಸರಾದರೆ ಬಾಯಿ ಮೊಸರು

ಗಾದೆಗಳು ಜೀವನದ ಸತ್ಯವನ್ನು ಎತ್ತಿ ಹಿಡಿಯುತ್ತವೆ. ಜ್ಞಾನ ಬಂಢಾರದಲ್ಲಿ ಅವುಗಳ ಪಾತ್ರ ಬಹು ದೊಡ್ಡದು. ಗಾದೆಗಳು ಸಾವಿರ ಪದಗಳಲ್ಲಿ ಹೇಳಬಹುದಾದ ವಿಚಾರಗಳನ್ನು ಒಂದು ವಾಕ್ಯದಲ್ಲಿ ಹೇಳುತ್ತವೆ. ಇವು ಗಾತ್ರದಲ್ಲಿ ವಾಮನನಂತಿದ್ದರೂ ಅರ್ಥದಲ್ಲಿ ತ್ರಿವಿಕ್ರಮನಂತಿವೆ.ನಮ್ಮ ಪೂರ್ವಜರು ತಮ್ಮ ಬದುಕಿನಲ್ಲಿ ಅನುಭವಿಸಿದ ನೋವು ನಲಿವಿನ ಜೀವನಾನುಭವದಂತಿವೆ.ನಮಗೆ ಮಾರ್ಗದರ್ಶಕಗಳಾಗಿವೆ.ಆದ್ದರಿಂದಲೆ ವೇಧ ಸುಳ್ಳಾದರೂ ಗಾದೆ ಸುಳ್ಳಾಗದು ಎಂದಿದ್ದಾರೆ.

ಕಾಯಕವೇ ಕೈಲಾಸ ಎನ್ನುವ ಹಾಗೆ ಕಷ್ಟಪಟ್ಟು ದುಡಿದಾಗ ಸುಖವಾಗಿ ಬದುಕಲು ಸಾಧ್ಯವಾಗುತ್ತದೆ. ಕಷ್ಟ ಪಟ್ಟು ದುಡಿಯದೇ ಇದ್ದರೆ ಸುಖವಾಗಿ ಬದುಕಲು ಸಾಧ್ಯವಿಲ್ಲ. ಆದ್ದರಿಂದ ಮೈಮುರಿದು ದುಡಿದು ಸಂಪಾದಿಸಿ ಸುಖವಾಗಿ ಬಾಳಬಹುದು ಆಗ ನೆಮ್ಮದಿಯ ಬದುಕು ನಮ್ಮದಾಗುತ್ತದೆ ಇಲ್ಲದಿದ್ದರೆ ಮತ್ತೊಬ್ಬರನ್ನು ಆವಲಂಬಿಸಿ ಹಂಗಿನಲ್ಲಿ ಬದುಕುವ ಹೀನ ಬಾಳು ನಮ್ಮದಾಗಬಾರದು. ಹಾಗಾಗಿಯೇ ನಮ್ಮ ಹಿರಿಯರು ಆಳಾಗಿ ದುಡಿಯಬಲ್ಲವನು ಆಳಬಲ್ಲನು ಅರಸಾಗಿ ಎಂದಿದ್ದಾರೆ. ಜೀವನವನ್ನು ಕಟ್ಟಿಕೊಳ್ಳಲು ಯಾವುದೇ ಕೆಲಸವಾದರೂ ಸರಿಯೇ ಪ್ರಾಮಾಣಿಕವಾಗಿ ದುಡಿದು ಬದುಕನ್ನು ಕಟ್ಟಿಕೊಂಡು ಇನ್ನೊಬ್ಬರಿಗೆ ಮಾದರಿಯಾದ ಜೀವನ ನಮ್ಮದಾಗಬೇಕು ಆಗ ಜೀವನ ಸಾರ್ಥಕವಾಗುತ್ತದೆ. ದುಡಿಯದೆ ಮತ್ತೊಬ್ಬರನ್ನು ಅವಲಂಬಿಸಿದರೆ ಸುಖವಾಗಿರಲು ಸಾಧ್ಯವಿಲ್ಲ.ಆದ್ದರಿಂದ ಕಷ್ಟ ಪಟ್ಟು ದುಡಿದು ಮನೆತನವನ್ನು ಕಟ್ಟಿಕೊಂಡು ಗೌರವದಿಂದ ಬಾಳುತ್ತಾ ಜೀವನವನ್ನು ಸಾರ್ಥಕ ಮಾಡಿಕೊಳ್ಳಬೇಕಾಗುತ್ತದೆ. ಸುಖವಾದ ಜೀವನ ನಮ್ಮದಾಗಬೇಕಾದರೆ ಪ್ರಾಮಾಣಿಕವಾಗಿ ದುಡಿಯಲೇಬೇಕು ಆದ್ದರಿಂದಲೇ ನಮ್ಮ ಹಿರಿಯರು ಕಷ್ಟಪಟ್ಟರೇ ಸ್ವರ್ಗ ಸುಖ ಎಂದಿರುವರು.

## 03) ಊಟ ಬಲ್ಲವನಿಗೆ ರೋಗವಿಲ್ಲ ಮಾತು ಬಲ್ಲವನಿಗೆ ಜಗಳವಿಲ್ಲ.

ಗಾದೆಗಳು ಜೀವನದ ಸತ್ಯವನ್ನು ಎತ್ತಿ ಹಿಡಿಯುತ್ತವೆ. ಜ್ಞಾನ ಬಂಢಾರದಲ್ಲಿ ಅವುಗಳ ಪಾತ್ರ ಬಹು ದೊಡ್ಡದು. ಗಾದೆಗಳು ಸಾವಿರ ಪದಗಳಲ್ಲಿ ಹೇಳಬಹುದಾದ ವಿಚಾರಗಳನ್ನು ಒಂದು ವಾಕ್ಯದಲ್ಲಿ ಹೇಳುತ್ತವೆ. ಇವು ಗಾತ್ರದಲ್ಲಿ ವಾಮನನಂತಿದ್ದರೂ ಅರ್ಥದಲ್ಲಿ ತ್ರಿವಿಕ್ರಮನಂತಿವೆ. ನಮ್ಮ ಪೂರ್ವಜರು ತಮ್ಮ ಬದುಕಿನಲ್ಲಿ ಅನುಭವಿಸಿದ ನೋವು ನಲಿವಿನ ಜೀವನಾನುಭವದಂತಿವೆ.ನಮಗೆ ಮಾರ್ಗದರ್ಶಕಗಳಾಗಿವೆ.ಆದ್ದರಿಂದಲೆ ವೇಧ ಸುಳ್ಳಾದರೂ ಗಾದೆ ಸುಳ್ಳಾಗದು ಎಂದಿದ್ದಾರೆ.

ಮಾತು ಬೆಳ್ಳಿ ಮೌನ ಬಂಗಾರ ಎನ್ನುವ ಹಾಗೆ ನಾವು ಯಾವ ಸಂದರ್ಭದಲ್ಲಿ ,ಯಾರೊಂದಿಗೆ , ಹೇಗೆ ಮಾತನಾಡಬೇಕು ಎಂಬುದನ್ನು ತಿಳಿದುಕೊಳ್ಳದಿದ್ದರೆ ಅನೇಕ ತೊಂದರೆಗಳಿಗೆ ಸಿಕ್ಕಿಕೊಳ್ಳುತ್ತೆವೆ.ಹಾಗೆಯೆ ನಮ್ಮ ದೇಹಕ್ಕೆ ಯಾವ ಆಹಾರ ಯೋಗ್ಯವಾದದ್ದು,ಯಾವುದು ಸರಿಯಾದದ್ದಲ್ಲ ಎಂಬುದನ್ನು ತಿಳಿಯದೇ ಹೋದರೆ ನಮ್ಮ ಆರೋಗ್ಯವನ್ನು ಹಾಳುಮಾಡಿ ಕೊಳ್ಳುತ್ತೇವೆ. ಆದ್ದರಿಂದ ಸಮಯಕ್ಕೆ ಸರಿಯಾಗಿ ಮಾತನಾಡುವುದನ್ನು ಕಲಿಯಬೇಕು ಇಲ್ಲವಾದಲ್ಲಿ ನಗೆಗಿಡಾಗಿ ಅವಮಾನಕ್ಕೆ ಒಳಗಾಗಬೇಕಾಗುತ್ತದೆ. ಕೆಲವೊಂದು ಸಂದರ್ಭದಲ್ಲಿ ಮಾತನಾಡದೇ ಮೌನವಾಗಿ ಇರುವುದು ಎಷ್ಟೋ ಉತ್ತಮವಾದದ್ದು. ಏಕೆಂದರೆ ಅದು ಎಷ್ಟೋ ಪ್ರಶ್ನೆಗಳಿಗೆ ಉತ್ತರವಾಗಿರುತ್ತದೆ. ಹಾಗೆನೆ ಕಾಲಕ್ಕನುಗುಣವಾಗಿ ನಮ್ಮ ಆರೋಗ್ಯವನ್ನು ಕಾಪಾಡುವ ಆಹಾರವನ್ನು ಸೇವಿಸಬೇಕೆ ಹೊರತು ನಾಲಿಗೆಯ ರುಚಿಗನುಗುಣವಾಗಿ ಸಿಕ್ಕಸಿಕ್ಕದನ್ನು ಸೇವಿಸುತ್ತಾ ಹೋದರೇ ನಮ್ಮ ಆರೋಗ್ಯ ಹಾಳಾಗಿ ಹೋಗುತ್ತದೆ. ಆ ಮೂಲಕ ನಮ್ಮ ವ್ಯಕ್ತಿತ್ವಕ್ಕೆ ಧಕ್ಕೆ ಬರುತ್ತದೆ. ಜೀವನ ಕಷ್ಟವಾಗುತ್ತದೆ. ನಮ್ಮ ಆರೋಗ್ಯ ನಮ್ಮ ಕೈಯಲ್ಲಿಯೇ ಇದೆ. ಆದ್ದರಿಂದಲೇ ನಮ್ಮ ಪೂರ್ವಜರು ಮಾತೇ ಮುತ್ತು ಮಾತೇ ಮೃತ್ಯು ಎಂದಿರುವರು.

## 04) ಕುಂಬಾರನಿಗೆ ವರುಷ ದೊಣ್ಣೆಗೆ ನಿಮಿಷ.

ಗಾದೆಗಳು ಜೀವನದ ಸತ್ಯವನ್ನು ಎತ್ತಿ ಹಿಡಿಯುತ್ತವೆ. ಜ್ಞಾನ ಬಂಢಾರದಲ್ಲಿ ಅವುಗಳ ಪಾತ್ರ ಬಹು ದೊಡ್ಡದು. ಗಾದೆಗಳು ಸಾವಿರ ಪದಗಳಲ್ಲಿ ಹೇಳಬಹುದಾದ ವಿಚಾರಗಳನ್ನು ಒಂದು ವಾಕ್ಯದಲ್ಲಿ ಹೇಳುತ್ತವೆ. ಇವು ಗಾತ್ರದಲ್ಲಿ ವಾಮನನಂತಿದ್ದರೂ ಅರ್ಥದಲ್ಲಿ ತ್ರಿವಿಕ್ರಮನಂತಿವೆ.ನಮ್ಮ ಪೂರ್ವಜರು ತಮ್ಮ ಬದುಕಿನಲ್ಲಿ ಅನುಭವಿಸಿದ ನೋವು ನಲಿವಿನ ಜೀವನಾನುಭವದಂತಿವೆ.ನಮಗೆ ಮಾರ್ಗದರ್ಶಕಗಳಾಗಿವೆ.ಆದ್ದರಿಂದಲೆ ವೇಧ ಸುಳ್ಳಾದರೂ ಗಾದೆ ಸುಳ್ಳಾಗದು ಎಂದಿದ್ದಾರೆ.

ಕಟ್ಟುವುದು ಕಠಿಣ ಕೆಡುವುದು ಸುಲಭ ಎನ್ನುವ ಹಾಗೆ ಯಾವುದೇ ಒಂದು ಕೆಲಸವು ಪರಿಪೂರ್ಣ ಆಗಬೇಕಾದರೆ ಬಹಳ ಕಾಲ ಸಮಯವನ್ನು ತೆಗೆದುಕೊಳ್ಳುತ್ತದೆ. ಆದರೆ ಅದನ್ನು ಹಾಳು ಮಾಡಲು ಕೆಲವೇ ಕ್ಷಣಗಳು ಸಾಕಾಗುತ್ತವೆ. ಉದಾಹರಣೆ ಸುಂದರವಾದ ಒಂದು ಕಟ್ಟಡವನ್ನು ಕಟ್ಟಲು ಬಹಳ ಸಮಯ ಬೇಕಾಗುತ್ತದೆ ಆದರೆ ಅದೇ ಕಟ್ಟಡವನ್ನು ಹಾಳುಮಾಡಲು ಕೆಲವೆ ಕ್ಷಣಗಳು ಸಾಕಾಗುತ್ತವೆ. ಹಾಗೆನೆ ಒಬ್ಬ ವ್ಯಕ್ತಿ ಉತ್ತಮನೆನಿಸಿಕೊಳ್ಳಲು ಜೀವನ ಪೂರ್ತಿಯಾಗಿ ಒಳ್ಳೆಯ ಕೆಸಗಳನ್ನು ಮಾಡಬೇಕಾಗುತ್ತದೆ. ಆದರೆ ಅದೆ ವ್ಯಕ್ತಿ ಕೆಟ್ಟವನಾಗಲು ಬಹಳ ಸಮಯ ಬೇಕಾಗುವುದಿಲ್ಲ ಒಂದು ಕ್ಷಣ ತಪ್ಪನ್ನು ಮಾಡಿದರೆ ಅವನು ಕೆಟ್ಟವನೆನಿಸಿಕೊಳ್ಳುತ್ತಾನೆ. ಕುಂಬಾರನು ಒಂದು ಮಡಿಕೆ ಮಾಡಲು ಎಷ್ಟೆಲ್ಲಾ ಕಷ್ಟವನ್ನು ಅನುಭವಿಸಿ ಅದನ್ನು ತಯಾರಿಸಿರುತ್ತಾನೆ ಆದರೆ ಆ ಮಡಿಕೆಯನ್ನು ಹಾಳು ಮಾಡಲು ಕೇವಲ ಒಂದು ಕ್ಷಣ ಮಾತ್ರ ಸಾಕಾಗುತ್ತದೆ . ಆದ್ದರಿಂದ ಕಷ್ಟಪಟ್ಟು ಉತ್ತಮವಾದ ವ್ಯಕ್ತಿತ್ವವನ್ನು ಕಟ್ಟಿಕೊಂಡು ಜೀವನವನ್ನು ಸಾರ್ಥಕ ಮಾಡಿಕೊಳ್ಳಬೇಕು.ಅದನ್ನು ಕ್ಷಣಿಕ ಸುಖದ ಆಸೆಗೆ ಬಿದ್ದು ಹಾಳು ಮಾಡಿಕೊಳ್ಳಬಾರದು.

**05) "ಕೋಟಿ ವಿದ್ಯೆಗಳಲ್ಲಿ ಮೇಟಿ ವಿದ್ಯೆಯೇ ಮೇಲು"**

ಗಾದೆಗಳು ಜೀವನದ ಸತ್ಯವನ್ನು ಎತ್ತಿ ಹಿಡಿಯುತ್ತವೆ. ಜ್ಞಾನ ಬಂಢಾರದಲ್ಲಿ ಅವುಗಳ ಪಾತ್ರ ಬಹು ದೊಡ್ಡದು. ಗಾದೆಗಳು ಸಾವಿರ ಪದಗಳಲ್ಲಿ ಹೇಳಬಹುದಾದ ವಿಚಾರಗಳನ್ನು ಒಂದು ವಾಕ್ಯದಲ್ಲಿ ಹೇಳುತ್ತವೆ. ಇವು ಗಾತ್ರದಲ್ಲಿ ವಾಮನನಂತಿದ್ದರೂ ಅರ್ಥದಲ್ಲಿ ತ್ರಿವಿಕ್ರಮನಂತಿವೆ.ನಮ್ಮ ಪೂರ್ವಜರು ತಮ್ಮ ಬದುಕಿನಲ್ಲಿ ಅನುಭವಿಸಿದ ನೋವು ನಲಿವಿನ ಜೀವನಾನುಭವದಂತಿವೆ.ನಮಗೆ ಮಾರ್ಗದರ್ಶಕಗಳಾಗಿವೆ.ಆದ್ದರಿಂದಲೆ ವೇಧ ಸುಳ್ಳಾದರೂ ಗಾದೆ ಸುಳ್ಳಾಗದು ಎಂದಿದ್ದಾರೆ.

ಒಕ್ಕಲಿಗ ಒಕ್ಕದಿರೆ ಬಿಕ್ಕುವುದು ಜಗವೆಲ್ಲ ಎನ್ನುವಂತೆ ನಾವು ಎಷ್ಟೇ ಪ್ರಗತಿಯನ್ನು ಸಾಧಿಸಿದರೂ ತಾಂತ್ರಿಕವಾಗಿ,ಶೈಕ್ಷಣಿಕವಾಗಿ ಏನೇ ಅಭಿವೃದ್ದಿಯನ್ನು ಮಾಡಿದರೂ ಅನ್ನ,ಆಹಾರವನ್ನು ಯಾವುದೇ ಕೈಗಾರಿಕೆಯಲ್ಲಿ ತಯಾರಿಸಲು ಸಾದ್ಯವಿಲ್ಲ.ಆದ್ದರಿಂದ ಅದಕ್ಕೆ ವ್ಯವಸಾಯವೇ ಆಧಾರ. ಲಕ್ಷಾಂತರ ಜನರಿಗೆ ಉದ್ಯೋಗವನ್ನು ಕೊಟ್ಟಿರುವ ಕೃಷಿಯು ಜಗತ್ತಿಗೆ ಅನ್ನವನ್ನು ನಿಡುತ್ತಿದೆ. ಒಂದು ವೇಳೆ ರೈತನೇನಾದರೂ ಕೋಪದಿಂದ ಬೆಳೆಯನ್ನು ಬೇಳೆಯುವುದಿಲ್ಲವೆಂದು ಒಂದು ವರ್ಷ ಸತ್ಯಾಗ್ರಹ ಮಾಡಿದರೇ ಈಡಿ ಜಗತ್ತೇ ಅನ್ನವಿಲ್ಲದೆ ನರಳಿ ಸಾಯುತ್ತದೆ. ಆದ್ದರಿಂದ ನಾವು ಏನೇ ಅಭಿವೃದ್ದಿಯನ್ನು ಸಾಧಿಸಿದರೂ ಅನ್ನಕ್ಕಾಗಿ ವ್ಯವಸಾಯವನ್ನು ಮಾಡಲೇಬೇಕು. ದೇಶದ ಆರ್ಥಿಕ ಪ್ರಗತಿಯಲ್ಲಿ ರೈತನ ಪಾತ್ರ ಪ್ರಮುಖವಾದುದು ಆದ್ದರಿಂದಲೇ ನಮ್ಮ ಹಿರಿಯರು ಜೈ ಜವಾನ ಜೈ ಕಿಸಾನ ಎಂದಿರುವರು. ಹಾಗಾಗಿ ರೈತನ ಜೀವನವು ಸುಖವಾಗಿರುವ ರೀತಿಯಲ್ಲಿ ನಾವೆಲ್ಲ ಅವನಿಗೆ ಬೆಂಬಲವಾಗಿ ಪ್ರೋತ್ಸಾಹಿಸುವ ಕೆಲಸವನ್ನು ಮಾಡಬೇಕು ಅಂದಾಗ ನಾವೆಲ್ಲ ಸುಖವಾಗಿರಲು ಸಾಧ್ಯ.

# ಪದ್ಯಗಳ ಸಾರಾಂಶ

**ಪದ್ಯ ಪಾಠ :- 01 ಬೋಧಿವೃಕ್ಷದ ಹಾಡು** **ಕವಿ :- ಬಸವರಾಜ ಸಬರದ**

ಸಿದ್ದಾರ್ಥನು ಬುದ್ದನಾದ ಪರಿಯ ನೀವು ತಿಳಿಯಿರೆ
ಯುದ್ದ ಬಿಟ್ಟು ಪ್ರೀತಿ ಕೊಟ್ಟ ಕಥೆಯ ನೀವು ಕೇಳಿರೆ || ಪ||

ಸಾರಾಂಶ :- ಇಲ್ಲಿ ಕವಿಯು ಸಿದ್ದಾರ್ಥನ ಜೀವನ ವೃತ್ತಾಂತವನ್ನು ಹೇಳುತ್ತಿರುವರು.ಸಿದ್ದಾರ್ಥತನ್ನ ಜೀವನದ ಲೌಖಿಕ ಸುಖಭೋಗಗಳನ್ನು ತ್ಯಾಗ ಮಾಡಿ ಸನ್ಯಾಸಿಯಾದ ರೀತಿ ನಾವೆಲ್ಲಾ ತಿಳಿಯಬೇಕು ಎಂದು ಹೇಳುತ್ತಾರೆ.

01) ಏಕಾಂಗಿ ವೀರನಂತೆ ಮಧ್ಯರಾತ್ರಿ ಎದ್ದನು
ಮಡದಿ ಮಗುವ ತೊರೆದನವನು ಅಡವಿ ದಾರಿ ಹಿಡಿದನು
ಅರಮನೆಯ ಮೋಹವನ್ನು ಹರಿದು ಹಾಕಿ ಹೋದನು
ಗೊತ್ತು ಗುರಿಯು ಇಲ್ಲದಂತೆ ಕತ್ತಲಲ್ಲಿ ನಡೆದನು. **(ಕಂಠಪಾಠ)**

ಸಾರಾಂಶ :- ಸಿದ್ದಾರ್ಥನು ಏಕಾಂಗಿ ಶೂರನಂತೆ ನಡುರಾತ್ರಿ ಎದ್ದು ಮಡದಿ ಮಗುವನ್ನು ಬಿಟ್ಟು ಅರಸುತನವನ್ನು ತೊರೆದು, ಅರಮನೆಯ ಪ್ರೀತಿಯನ್ನು ಹರಿದು ಹಾಕಿ, ಏನು,ಯಾವುದು ಗೊತ್ತಿಲ್ಲದೆ, ಗುರಿಯೂ ಇಲ್ಲದೆ ಕತ್ತಲಲ್ಲಿ ಅಡವಿ ದಾರಿ ಹಿಡಿದು ಹೊರಟನು ಎನ್ನುವರು ಕವಿ.

02) ಕಾಡು ಕಾಡು ಅಲೆದ ಅವಗೆ ನಾಡಿನರ್ಥ ಹೊಳೆಯಿತು
ಕೋಗಿಲೆಯ ಹಾಡದೊಂದು ದೂರದಿಂದ ಕೇಳಿತು
ಬೆಳ್ಳಿಚುಕ್ಕಿ ಬಾನಿನಲ್ಲಿ ಆಗತಾನೆ ಬೆಳಗಿತು
ಬೋಧಿವೃಕ್ಷದಲ್ಲಿ ಮಹಾಬೆಳಕೊಂದು ಕಂಡಿತು. **(ಕಂಠಪಾಠ)**

ಸಾರಾಂಶ :- ಕಾಡು ಕಾಡು ತಿರುಗಿದ,ಅಲೆದಾಡಿದ ಅವನಿಗೆ ಏನು ಅರಿಯದೆ ಕೊನೆಗೆ ತಪಸ್ಸಿನ ಮೂಲಕ ಜ್ಞಾನೋದಯ ಪಡೆಯುವ ಆಸೆಯಿಂದ ಅವನು ನಾಡಿನ ಜೀವನದ ಪ್ರೀತಿಯನ್ನು ತಿಳಿಯುತ್ತಾನೆ. ಆಗ ದೂರದಿಂದ ಕೋಗಿಲೆಯ ಹಾಡು ಕೇಳಿದಂತಾಗುತ್ತದೆ. ಆಕಾಶದಲ್ಲಿ ಬೆಳ್ಳಿ ಚುಕ್ಕಿ ಬೆಳಗುವ ಸಮಯದಲ್ಲಿ ಸಿದ್ದಾರ್ಥನಿಗೆ ಜ್ಞಾನೋದಯ ವಾಗುತ್ತದೆ.

03) ಮರವ ಅಪ್ಪಿದಂತ ಬಳ್ಳಿ ಹೂವ ಮುಡಿದು ನಕ್ಕಿತು
ಹಕ್ಕಿಯೊಂದು ತನ್ನ ಮರಿಗೆ ಗುಟುಕು ಕೊಟ್ಟು ಹಾರಿತು|
ಹುತ್ತಿನಿಂದ ಇರುವೆ ಗುಂಪು ಸಾಲುಗಟ್ಟಿ ನಡೆಯಿತು.
ಬೆಳ್ಳಕ್ಕಿ ಹಿಂಡುಗಟ್ಟಿ ಬಾನಿಗೇಣಿ ಹಾಕಿತು.

ಸಾರಾಂಶ :- ಸಿದ್ಧಾರ್ಥನಿಗೆ ಜ್ಞಾನೋದಯವಾದ ಸಂದರ್ಭದಲ್ಲಿ ಪ್ರಕೃತಿಯಲ್ಲಿ ಪ್ರೀತಿ ತುಂಬಿಕೊಳ್ಳುತ್ತದೆ, ಪಕ್ಷಿಯೊಂದು ತನ್ನ ಮಕ್ಕಳಿಗೆ ಆಹಾರ ನೀಡಿ ಹಾರಿಹೋಯಿತು,ಹುತ್ತಿನಿಂದ ಎದ್ದ ಇರುವೆಯ ಗುಂಪು ಸಾಲು ಗಟ್ಟಿ ನಡೆಯಿತು, ಬೆಳ್ಳಕ್ಕಿ ಹಿಂಡು ಗಗನದಲ್ಲಿ ಸಾಲುಗಟ್ಟಿ ಬಾನಿಗೇಣಿ ಹಾಕಿದ ರೀತಿಯಲ್ಲಿ ಹಾರಿದವು.

04) ಕಾಡು ತುಂಬ ಪ್ರೀತಿ ಹೊಳೆಯು ಕೋಡಿಯಂತೆ ಹರಿಯಿತು
ಗೂಡಿನಿಂದ ಹಾಡು ಹುಟ್ಟಿ ಹೊಸರಾಗ ಕೇಳಿತು
ಮಕರಂದ ಸವಿಯಲೆಂದು ದುಂಬಿ ಹೂವ ಸೇರಿತು
ಗಿಡ ಗಡವೂ ಅಪ್ಪಿಕೊಂಡು ಕುಣಿಯುವಂತೆ ಕಂಡಿತು.

ಸಾರಾಂಶ :- ತಪಸ್ಸಿನ ಮೂಲಕ ಜ್ಞಾನ ಸಿಕ್ಕಾಗ ಕಾಡಿನಲ್ಲಿ ಪ್ರೀತಿಯೆಲ್ಲಾ ತುಂಬಿಕೊಂಡು ಹೊಳೆಯಂತೆ ಹರಿಯಿತು, ಪಕ್ಷಿಗಳ ಗೂಡಿನಲ್ಲಿ ಅವುಗಳ ಕಲರವ ಹಾಡಾಗಿ ಹುಟ್ಟಿ ಬಂದಿತು.ಮುಂಜಾನೆಯ ಮಂಜಿನಲ್ಲಿ ಮಕರ ತುಂಬಿದ ಹೂಗಳಲ್ಲಿರುವ ಮಧು ಸವಿಯಲು ಜೇನು ಹುಳುಗಳೆಲ್ಲಾ ಹೂಗಳನ್ನು ಸೇರಿದವು ಗಿಡಗಳೆಲ್ಲಾ ಒಂದಕ್ಕೊಂದು ಅಪ್ಪಿಕೊಂಡು ಕುಣಿಯು ಹಾಗೆ ಕಾಣಿಸಿತು.

05) ಕಾಡಿನಿಂದ ಎದ್ದ ಅವನು ನಾಡಿನತ್ತ ಹೊರಟನು
ಪ್ರೀತಿಯನ್ನು ಹುಡುಕಿಕೊಂಡು ಜನರ ಕಡೆಗೆ ಬಂದನು
ತಪಸಿಗಿಂತ ಜೀವ ಪ್ರಿತಿ ದೊಡ್ಡದೆಂದು ತಿಳಿದನು
ಬದುಕಿನ ಗೂಡಾರ್ಥವರಿತು ಬುದ್ದನಾಗಿ ಬಂದನು.

ಸಾರಾಂಶ :- ತಪಸಿನಿಂದ ಜ್ಞಾನ ಪಡೆದು ಬುದ್ದನಾದ ಸಿದ್ಧಾರ್ಥನಿಗೆ ನಿಜವಾದ ಜೀವನದ ಪ್ರೀತಿಯನ್ನು ಹುಡುಕಿಕೊಂಡು ಜನರ ಕಡೆಗೆ ಬಂದನು. ಎಲ್ಲದಕಿಂತ ಜೀವನವೇ ಶ್ರೇಷ್ಠವೆಂಬುದನ್ನು ಅರಿತ ಅವನು ಬದುಕಿನ ನಿಜವಾದ ಅರ್ಥವನ್ನು ತಿಳಿದು ಬುದ್ದನಾಗಿ ಬಂದನು. ಎಂದು ಕವಿಯು ಹೀಗೆ ಸಿದ್ಧಾರ್ಥನು ಬುದ್ದನಾದ ರೀತಿಯನ್ನು ಸುಂದರವಾಗಿ ವರ್ಣಿಸಿದ್ದಾರೆ.

## ಪದ್ಯ ಪಾಠ :- 02 ಸವಿ ಚೈತ್ರ — ಕವಿ :- ಬಸವರಾಜ ಸಾದರ

01) ಯುಗದ ಆದಿಯು ಬಂತು ಸೊಗದ ಸುಗ್ಗಿಯ ತಂತು
ಜಗಕೆಲ್ಲ ಹೊಸ ಕಳೆಯು ತುಂಬಿತೆಂತು!
ಬಗೆ ಬಗೆಯ ಬಣ್ಣಗಳ ಬರೆದ ಚಿತ್ರದ ಹಾಗೆ
ನೆಲದಮ್ಮ ನವವಧುವೆ ಆದಳಿಂತು!

ಸಾರಾಂಶ :- ಯುಗಾದಿಯು ಭಾರತೀಯರ ಹೊಸ ವರ್ಷದ ಮೊದಲ ದಿನ ಹಳೆಯದನ್ನು ಮರೆಸಿ ಹೊಸತನ್ನು ತರುವ ಶುಭದಿನ ಅದು ಚಾಂದ್ರಮಾನದ್ದೇ ಇರಲಿ ಸೌರಮಾನದ್ದೇ ಇರಲಿ ಚೈತ್ರಮಾಸದಲ್ಲಿ ಬರುತ್ತದೆ.ಯುಗಾದಿಯು ಭೂಮಾತೆಗೆ ಸೊಗದ ಸುಗ್ಗಿಯನ್ನೇ ಹೊತ್ತು ತರುವ ಕಾಲ. ಅದು ವಿವಿಧ ಬಣ್ಣಗಳಿಂದ ಚಿತ್ರ ತೆಗೆದ ಹಾಗೆ ಸುಂದರವಾದ ಪ್ರಕೃತಿಯ ಬದಲಾವಣೆಗೆ ಕಾರಣವಾಗುತ್ತದೆ.ಆ ಸಮಯದಲ್ಲಿ ಭೂ ಮಾತೆಯು ಮದುವಣಗಿತ್ತಿಯಂತೆ ಸುಂದರವಾಗುವಳು.

02) ಕೊರಡ ಕೊನರಿಸಿ ತುದಿಗೆ ಮುಗುಳ ನಗೆ ಮುತ್ತಿಟ್ಟು
ಬರಡು ಜೀವಕೆ ಹೊಸತು ಚೈತನ್ಯವು
ಕುಕಿಲ ಕೋಗಿಲೆ ಕಂಠ ಮುಕ್ತ ತಾರಕಕೇರಿ
ಚಿಲಿಪಿಲಿಯ ಕಲರವಕೆ ಮತ್ತೇರಿದೆ. **(ಕಂಠಪಾಠ)**

ಸಾರಾಂಶ :-ಚೈತ್ರದಲ್ಲಿ ತನ್ನೆಲ್ಲಾ ಹಸಿರನ್ನು ಕಳೆದುಕೊಂಡು ಒಣಗಿದಂತೆ ಕಾಣುವ ಕಾಂಡಗಳೆಲ್ಲಾಚಿಗುರಿ ಹೂಗಳನ್ನುಬಿಟ್ಟು ಬರಡು ಜೀವಕ್ಕೆ ಹೊಸ ಉಲ್ಲಾಸ ಬಂದ ಹಾಗೆ ಸುಂದರವಾಗಿ ಕಂಗೋಳಿಸುತ್ತವೆ. ಆ ವಸಂತ ಮಾಸದಲ್ಲಿ ಕೋಗಿಲೆಯ ಮಧುರ ಕಂಠವು ಇಂಪಾಗಿ ಕೇಳಿ ಬರುವುದು. ಆ ವೇಳೆಯಲ್ಲಿ ಬಗೆಬಗೆಯ ಹಕ್ಕಿಗಳ ಕಲರವವೂ ಮಧುರವಾಗಿ ಮತ್ತೇರಿದಂತಾಗುತ್ತದೆ.

03) ಮೈಕೊಡವಿ ಎದ್ದ ಜಗ ಖಗ ಪಕ್ಷಿ ಪ್ರಾಣಿಗಳು
ಲಗುಬಗೆಯ ದಗದಕ್ಕೆ ಹೊರಟಂತಿದೆ
ಹೊಸತು ಜೀವೋಲ್ಲಾಸ ಚಿಗಿತ ಭಾವವಿಲಾಸ
ನೆಲ ಮುಗಿಲ ವಾಲಗವೇ ನಡೆದಂತಿದೆ.

ಸಾರಾಂಶ :- ಚೈತ್ರದಾಗಮನದಿಂದ ಜಗತ್ತಿನ ಪ್ರಾಣಿ,ಪಕ್ಷಿಗಳೆಲ್ಲಾ ಮೈಕೊಡವಿ ಎದ್ದು ತಮ್ಮ ಹೊಸ ಕೆಲಸಕ್ಕೆ ಅವಸರದಿಂದ ಹೊರಟಂತೆ ಕಾಣುತ್ತದೆ.ಗಿಡ-ಮರಗಳೆಲ್ಲಾ ಚಿಗಿತು ಹೊಸ ಜೀವೋಲ್ಲಾಸವನ್ನು ತುಂಬಿಕೊಂಡು ಭುವಿ ಬಾನು ಒಂದಾಗಿ ನಡೆದಂತೆ ಕಾಣಿಸುತ್ತದೆ. ಎಂದು ಕವಿ ಬಣ್ಣಿಸುತ್ತಾನೆ.

04) ಯುಗದ ಹಿಂದಿನ ಕೊಳೆಯ ತಿಕ್ಕಿ ಮೈ ತೊಳೆದಂತೆ
ನಗುವ ನಲಿವಿನ ಮುಖವೆ ಎಲ್ಲೆಲ್ಲಿಯೂ
ಬೆಲ್ಲ ಬೇವಿಗೆ ಸೇರಿ ಕಹಿ ಕಳೆದು ಸಿಹಿ ಹೆಚ್ಚಿ
ಎಲ್ಲರೆದೆಗಳ ತುಂಬಸವಿ ಚೈತ್ರ ವು. **(ಕಂಠಪಾಠ)**

ಸಾರಾಂಶ :- ಯುಗಾದಿಯ ಸಮಯದಲ್ಲಿ ಜಗದ ಹಿಂದಿನ ಕೊಳೆಯೆಲ್ಲಾ ತಿಕ್ಕಿ ತೊಳೆದ ರೀತಿಯಲ್ಲಿ ಸಕಲ ಜೀವಿಗಳಲ್ಲಿ ನೊವೆಲ್ಲಾ ಮಾಯವಾಗಿ ಆನಂದ ಮನೆಮಾಡಿದಂತೆ ಕಾಣುತ್ತದೆ.ಬೆಲ್ಲ ಬೇವಿಗೆ ಸೇರಿ ಕಹಿಯೆಲ್ಲಾ ಮಾಯವಾಗಿ ಸವಿಯಾದಂತೆ ಎಲ್ಲರ ಮನ ಮನೆಯೆಲ್ಲಿಸವಿ ಚೈತ್ರ ತುಂಬಿದಂತೆ ಎಂದು ಕವಿಯು ಚೈತ್ರ ಮಾಸವನ್ನು ಬಣ್ಣಿಸಿದ್ದಾರೆ.

## ಪದ್ಯ ಪಾಠ :- 03 ಸದ್ದು ಮಾಡದಿರು — ಕವಿ :- ಸಿ.ಪಿ.ಕೃಷ್ಣಕುಮಾರ

ಸದ್ದು ಮಾಡದೆ ಬಾಳು ಬಾಳೆಲವೊ ಜೀವ;
ಗದ್ದಲದ ಬಿರುದಿರದೆ ಸೇರು ರೇವ!

ಸಾರಾಂಶ :- ಈ ಪದ್ಯದಲ್ಲಿ ಕವಿಯು ಮಾನವನ ಜೀವನವೂ ಹೇಗೆ ಸಾರ್ಥಕವಾಗುತ್ತದೆ ಎನ್ನುವುದನ್ನು ಅನೇಕ ನಿದರ್ಶನಗಳ ಮೂಲಕ ತಿಳಿಸಿದ್ದು ಸದ್ದು ಗದ್ದಲ ಮಾಡದೆ ಜೀವಿಸುತ್ತಾ ಶಾಂತಿಯಿಂದ ಕೊನೆಯವರೆಗೂ ಬಾಳಬೇಕೆನ್ನುವರು.

01) ತಟ್ಟೆಯೊಳು ಕರ್ಪೂರ ಮೌನದಲಿ ಕರಗುವೊಲು,
ದೀಪದೆದುರಿಗೆ ತಿಮಿರ ಸರಿಯುವಂತೆ
ಶಾಂತಿಯಲಿ ಬದುಕಿನೀ ಮರ್ತವ್ಯವನು ಮುಗಿಸು;
ಕೂಗಾಡಿ ಹಾರಾಡಿ ಫಲವದೇನು?

ಸಾರಾಂಶ :- ಪ್ರಕೃತಿಯಲ್ಲಿ ನಡೆಯುವ ಅದ್ಭುತಗಳು ಅವು ಯಾವವೂ ತಮ್ಮ ಕಾರ್ಯದ ಬಗ್ಗೆ ಹೇಳಿಕೊಳ್ಳುತ್ತಿಲ್ಲ.ಆಕಾಶದಲ್ಲಿ ಹೊಳೆಯುವ ನಕ್ಷತ್ರಗಳಾಗಲಿ,ಕಾಯಿ ಮಾಗಿ ಹಣ್ಣಾಗುವುದಾಲಿ,ಹೂವು ಅರಳಿ ಪರಿಮಳ ಸೂಸುವುದಾಗಲಿ ಅವು ಎಂದು ತಮ್ಮ ಕೆಲಸದ ಬಗ್ಗೆ ಹೇಳಿಕೊಂಡಿಲ್ಲ.ತಟ್ಟೆಯಲ್ಲಿ ಕರ್ಪೂರ ಮೌನದಿಂದ ಕರಗುವಂತೆ .ದೀಪವನ್ನು ಹಚ್ಚಿದಾಗ ಸರಿಯುವ ಕತ್ತಲೆಯಂತೆ ನಮ್ಮ ಜೀವನದ ಕೆಲಸವನ್ನು ಶಾಂತಿಯಿಂದ ಮುಗಿಸಬೇಕೆ ವಿನಹ ಸದ್ದು ಗದ್ದಲದಿಂದ ಯಾವುದೇ ಪ್ರಯೋಜನವಿಲ್ಲ.

02) ಹಸಿಸೌದೆ ಬುಸುಗುಟ್ಟಿ ದನಿಯನೆತ್ತುವುದಲ್ತೆ,
ಕಿಡಿ ಸೋಕೆ ಮದ್ದು ಸಿಡಿದಬ್ಬರಿಪುದು –
ಅಂತಿರದೆ ರವಿಕರಕೆ ಕರಗುವ ಇಬ್ಬನಿವೊಲಿರು;
ಸಿಡುಕು ಮಿಡುಕನು ತೊರೆದು ಮೌನಿಯಾಗು!

ಸಾರಾಂಶ :- ಹಸಿ ಸೌದೆಯು ಬೆಂಕಿಯನ್ನು ಹಚ್ಚಿದಾಗ ಚಟಪಟ ಸದ್ದನ್ನು ಮಾಡಿ ಹಾಳಾಗುತ್ತದೆ,ಮದ್ದಿಗೆ ಬೆಂಕಿ ಹಚ್ಚಿದಾಗ ಸದ್ದು ಮಾಡಿ ಸಿಡಿದು ಹಾಳಾಗುವಂತೆ ನಮ್ಮ ಜೀವನವು ಹಾಗಿರದೆ.ಸೂರ್ಯನ ಕಿರಣಗಳಿಗೆ ಕರಗುವ ಇಬ್ಬನಿಯ ಹಾಗೆ ಸಿಟ್ಟು,ಕೋಪಗಳನ್ನು ಬಿಟ್ಟು ಮೌನದಿಂದ ಜೀವನದ ಯಶಸ್ಸನ್ನು ಸಾದಿಸಬೇಕು ಎಂದು ಕವಿಯು ಬದುಕಿನ ಸಾರ್ಥಕತೆಯ ಬಗ್ಗೆ ವಿವರಿಸಿದ್ದಾರೆ.

## ಪದ್ಯ ಪಾಠ :- 04 ಗುರಿ — ಕವಿ :- ಎಂ. ಗೋಪಾಲಕೃಷ್ಣ ಅಡಿಗ

01) ಅಳಿಯಾಸೆಗಳ ಸುಳಿಗೆ ಸಿಲುಕಿದೆಲೆ ಮನವೇ
ನೆಲೆಯಿರದೆ ತೊಳಲುವುದು ಮನುಜ ಜೀವನವೇ?
ನನೆಬೇಕು,ಕೊನೆಬೇಕು ನರನ ಬಾಳುವೆಗೆ
ದಿನದ ಗೈಮೆಯ ಹೂವು ಫಲಿಸಿ ಬರುವುದಕೆ.

ಸಾರಾಂಶ :- ಕವಿಯು ಮನುಷ್ಯನು ಜೀವನದಲ್ಲಿ ಗುರಿಯನ್ನು ಹೊಂದಿದಾಗ ಅವನು ಯಶಸ್ಸನ್ನು ಸಾಧಿಸಬಹುದು ಎನ್ನುತ್ತಾರೆ. ಅವನು ಕೆಟ್ಟ ಆಸೆಯ ಸುಳಿಗೆ ಸಿಕ್ಕಿಕೊಂಡರೆ ಜೀವನವು ಹಾಳಾಗಿ ನೆಲೆಯಿಲ್ಲದೆ ಕಷ್ಟಕ್ಕೆ ಸಿಕ್ಕಿಕೊಳ್ಳುತ್ತದೆ ಅಂತಹ ಜೀವನವೂ ಜೀವನವಲ್ಲ.ಅವನ ದಿನದ ದುಡಿಮೆಯ ಫಲವನ್ನು ಪಡೆಯಬೇಕಾದರೆ ತಾಳ್ಮೆಯಿಂದ ಕಾಯಬೇಕು ಅಂದಾಗ ಗುರಿ ಮುಟ್ಟಲು ಸಾಧ್ಯವಾಗುತ್ತದೆ ಎಂದು ಹೇಳುವರು.

02) ಕೆಸರೊಳಿದ್ದರೂ ಮೇಲೆ ಬಾಂದಳವ ನೋಡಿ
ಮಿಸುಪ ರವಿಕಿರಣಗಳ ಸಿರಿಗೆ ಮರೆದಾಡಿ
ಮಸಗುವಂಬುಜದಂತೆ ಧ್ಯೇಯದಾಳ್ವೆಸಕೆ

ಬಸಮಾಗು, ಬಂದ ಮನುಜತೆಯ ಸಾರ್ಥಕತೆಗೆ. **(ಕಂಠಪಾಠ)**

ಸಾರಾಂಶ :- ಕೆಸರಲಿದ್ದರೂ ಕಮಲವೂ ಮೇಲ್ಮುಖವಾಗಿರುತ್ತದೆ. ಆಕಾಶವನ್ನು ನೋಡಿ ಹೊಳೆಯುವ ಸೂರ್ಯನ ಕಿರಣಗಳ ಸಿರಿಗೆ ಮೆರೆದಾಡುತ್ತಾ ವಿಜೃಂಭಿಸುವಂತೆ ಮನುಷ್ಯನು ತನ್ನ ಉದ್ದೇಶದ ಕೆಲಸಕ್ಕೆ ವಶವಾಗಿ ದುಡಿದು ಗುರಿ ಸಾಧಿಸಿದಾಗ ಅವನ ಜಿವನ ಸಾರ್ಥಕವಾಗುತ್ತದೆ.

03) ಗಾಳಿ ಬಂದೆಡೆ ತಿರುಗುವ ಹೇಡಿತನವು

ದಾಳಿ ಬಂದೊಡನೆ ಶರಣೆಂಬ ಹೆಣ್ತನವು
ಬೇಡ. ಹಿಡಿದೊಳ್ದಾರಿಯೊಳು ಕೊನೆಯವರೆಗೆ
ದೂಡು ಬಾಳ್ವೆಯನು ಪೌರುಷದ ಹೊನಲೊಳಗೆ.

ಸಾರಾಂಶ :- ಗಾಳಿ ಬಂದ ಕಡೆ ತಿರುಗುವಂತಹ ಹೇಡಿತನದ ಜೀವನ ಮತ್ತು ದಾಳಿ ಬಂದೊಡನೆ ಹೋರಾಡದೆ ಸೋಲೊಪ್ಪಿಕೊಳ್ಳುವ ಹೆಣ್ತನದ ಬದುಕು ಬದುಕಲ್ಲ. ಜೀವನದಲ್ಲಿ ಗುರಿಯಡೆ ಸಾಗುವಾಗ ಬರುವ ಸಮಸ್ಯೇ ತೊಂದರೆಗಳಿಗೆ ಹೆದರದೆ ಹಿಡಿದ ಆ ಒಳ್ಳೆಯ ದಾರಿಯಲ್ಲಿ ಗುರಿ ತಲುಪುವವರೆಗೂ ಧೈರ್ಯದಿಂದ ಜೀವನವನ್ನು ಸಾಗಿಸಬೇಕೆಂದು ಅಡಿಗರು ಹೇಳುವರು.

04) ಒಂದು ಬಾಣಕೆ ಗುರಿಯು ಹಲವಿರುವುದುಂಟೆ?
ಒಂದು ದೇಹದೊಳಾತ್ಮವೆರಡಿರುವುದುಂಟೆ?
ಒಂದು ಜೀವನಕೇಕೆ ಹಲವು ಸಾಧ್ಯಗಳು?
ಒಂದೆ ಹೆಗ್ಗುರಿಗೆ ಹೋರಾಡು ಹಗಲಿರುಳು. **(ಕಂಠಪಾಠ)**

ಸಾರಾಂಶ :- ಒಂದು ಬಾಣಕ್ಕೆ ಗುರಿ ಒಂದಲ್ಲದೆ ಅನೇಕ ಇರುವುದಿಲ್ಲ.ಒಂದು ದೇಹದೊಳಗೆ ಒಂದೇ ಆತ್ಮವಿರುತ್ತದೆ ಎರಡಿರುವುದಿಲ್ಲ ಹೀಗಿರುವಾಗ ಒಂದು ಜೀವನಕ್ಕೆ ಏಕೆ ಅನೇಕ ಗುರಿಗಳು? ಆದ್ದರಿಂದ ಒಂದೇ ದೊಡ್ಡ ಗುರಿಯನ್ನಿಟ್ಟುಕೊಂಡು ಅದರ ಸಾಧನೆಗಾಗಿ ಹಗಲಿರುಳು ಪ್ರಾಮಾಣಿಕವಾಗಿ ಪ್ರಯತ್ನಿಸಿ ಸಾಧಿಸಬೇಕೆನ್ನುವರು ಕವಿಗಳು.

05) ನರನೊಳಗೆ ನಾರಾಯಣನ ರೂಪು ಕಂಡು
ತಿರೆಯೊಳಗೆ ಸುರಪುರದ ಮೈಸಿರಿಯನುಂಡು
ಪರಹಿತಕೆ ಬಳಲುತಿರಲದುವೆ ಜೀವನವು;
ಪೆರತೇನನೆಸಗದಿರು ನಮಗೆ ಲಾಂಛನವು.

ಸಾರಾಂಶ :- ನಾವು ಮಾನವರಲ್ಲಿಯೇ ದೈವತ್ವವನ್ನು ಕಾಣಬೇಕು.ಈ ಭೂಮಿಯಲ್ಲಿಯೇ ದೇವಲೋಕದ ಸುಖವನ್ನು ಆನುಭವಿಸಬೇಕು.ಸ್ವಾರ್ಥದ ಜೊತೆ ಜೊತೆಯಲ್ಲಿ ಪರರ ಹಿತಕ್ಕಾಗಿ ದುಡಿಯುವುದೇ ಜೀವನ.ಸಮಾಜದಿಂದ ಅನೇಕವನ್ನು ಪಡೆದ ನಾವು ಸಮಾಜಕ್ಕೆ ಏನನ್ನಾದರೂ ಕೊಡಬೇಕು ಅದನ್ನು ಬಿಟ್ಟು ನಾವು ಏನನ್ನಾದರೂ ಮಾಡಿದರೆ ಅದು ನಮಗೆ ಅಪಕೀರ್ತಿಯನ್ನು ತರುತ್ತದೆ. ಎಂದು ಕವಿ ಅಡಿಗರು ಹೇಳುವರು.

## ಪದ್ಯಪಾಠ – 05 ಮೂಡಲ್ ಕುಣಿಗಲ್ ಕೆರೆ ಜನಪದ ಗೀತೆ

01) ಮೂಡಲು ಕುಣಿಗಲು ಕೆರೆ ನೋಡೋರಿಗೊಂದ್ಯೆಭೋಗ
ಮೂಡಿ ಬರ್ತಾನೆ ಚಂದಿರ ಮಾ| ತಾನಂದಾನೋ
ಮೂಡಿ ಬರ್ತಾನೆ ಚೆಂದಿರ ಮಾ||

ಸಾರಾಂಶ :- ಮೂಡಣದಲ್ಲಿರುವ ಕುಣಿಗಲ್ಲು ಕೆರೆ ನೋಡಲು ಅತ್ಯಂತ ಸುಂದರವಾಗಿದ್ದು ನೋಡುವವರಿಗೆ ಒಂದು ಹಬ್ಬವಿದ್ದಂತಾಗಿದೆ. ಅದರ ಸೊಭಗನ್ನು ನೋಡಲು ಕಣ್ಣುಗಳೇ ಸಾಲದು ಆ ಚಂದಿರನೇ ಕೆರೆಯ ಸೊಬಗ ನೋಡಲು ಮೂಡಿ ಬಂದ ಎಂದು ಜನಪದರು ವರ್ಣಿಸುತ್ತಾರೆ.

02) ಅಂತಂತ್ರಿಸಿ ನೋಡೋರ್ಗೆ ಎಂಥಾ ಕುಣಿಗಲ್ ಕೆರೆ
ಸಂತೇ ಹಾದೀಲಿ ಕಲುಕಟ್ಟೆ| ತಾನಂದಾನೋ
ಸಂತೇ ಹಾದೀಲಿ ಕಲುಕಟ್ಟೆ||

ಸಾರಾಂಶ :-ನೇರವಾಗಿ ಈ ಕೆರೆಯ ಕಟ್ಟೆಯನ್ನು ನೋಡುಗರಿಗೆ ಸಂತೆಯ ಹಾದಿಯಲ್ಲಿರುವ ಈ ಕುಣಿಗಲ್ ಕೆರಯು ಕಲ್ಲು ಕಟ್ಟೆಗಳಿಂದ ಕೂಡಿಕೊಂಡಂತೆ ಕಂಡರೂ ಅತ್ಯಂತ ಸುಂದರವಾಗಿದೆ ಎನ್ನುವರು.

03) ಬಾಳೆಯ ಹಣ್ಣಿನಂತೆ ಬಾಗಿದ ಕುಣಿಗಲು ಕೆರೆ
ಭಾವಾ ತಂದಾನೆ ಬಣ್ಣದ ಸೀರೆ| ತಾನಂದಾನೋ
ಭಾವಾ ತಂದಾನೆ ಬಣ್ಣದ ಸೀರೆ||

ಸಾರಾಂಶ :- ಬಾಳೆಯ ಹಣ್ಣಿನಂತೆ ಬಾಗಿದ ಈ ಕುಣಿಗಲ್ಲು ಕೆರೆಯು ನಿಂಬೆಯ ಹಣ್ಣಿನಂತೆ ತುಂಬಿಕೊಂಡಿರುವಾಗ ಅದಕ್ಕೆ ಭಾಗಿನ ಅರ್ಪಿಸಲು ಭಾವ ಬಣ್ಣದ ಸೀರೆಯನ್ನು ತಂದಿದ್ದಾನೆ.ತುಂಬಿ ತುಳುಕುವ ಕೆರೆಯ ಅಂದವನ್ನು ನೋಡುವುದಕ್ಕೆ ಪ್ರಕೃತಿ ಪ್ರೇಮಿಗಳಿಗೆ ಸುಂದರ ಸ್ಥಳವಾಗಿದೆ.

04) ನಿಂಬೆಯ ಹಣ್ಣಿನಂತೆ ತುಂಬಿದ ಕುಣಿಗಲು ಕೆರೆ
ಅಂದಾ ನೋಡಲು ಶಿವ ಬಂದ್ರು | ತಾನಂದಾನೋ
ಅಂದಾ ನೋಡಲು ಶಿವ ಬಂದ್ರು ||

ಸಾರಾಂಶ :- ಕುಣಿಗಲ್ಲು ಕೆರೆಯು ನಿಂಬೆಯ ಹಣ್ಣಿನಂತೆ ತುಂಬಿಕೊಂಡಿರುವಾಗ ಅತ್ಯಂತ ಸುಂದರವಾಗಿ ಕಾಣಿಸುತ್ತದೆ ಅದರ ಸೊಬಗನ್ನು ನೋಡಲು ಒಂದು ರೀತಿಯ ರೋಮಾಂಚನವಾಗುತ್ತದೆ.ಅಂತಹ ಸೌಂಧರ್ಯವನ್ನು ನೋಡಲು ಶಿವನೇ ಬಂದನೆಂದು ಜನಪದರು ವರ್ಣಿಸುತ್ತಾರೆ.

05) ಅಂದಾ(ನೇ) ನೋಡಲು ಶಿವ ಬಂದ್ರು ಶಿವಮಗ್ಗಿ
ಕಬ್ಬಕ್ಕಿ ಬಾಯ ಬಿಡುತಾವೆ | ತಾನಂದಾನೋ
ಕಬ್ಬಕ್ಕಿ ಬಾಯ ಬಿಡುತಾವೆ ||

ಸಾರಾಂಶ :-ವೈಭವಪೂರ್ಣವಾದ ಕೆರೆಯ ಅಂಧವನ್ನು ನೋಡಲು ಆ ಶಿವನೇ ಧರೆಗಿಳಿದು ಬಂದ. ಆಗ ಕೆರೆಯ ತುಂಬಿದ ನೀರಿನಲ್ಲಿ ಜಲಚರಗಳನ್ನು ತಿನ್ನಲೂ ಹಾರಾಡುತ್ತಿರುವ ಕಬ್ಬಕ್ಕಿಗಳು ಕೆರೆಯ ಸೌಂಧರ್ಯವನ್ನು ಮತ್ತಷ್ಟು ಹೆಚ್ಚಿಸಿವೆ.

06) ಕಬ್ಬಕ್ಕಿ (ನೇ) ಬಾಯ ಬಿಡುತಾವೆ ಇಬ್ಬೀಡ
ಗಬ್ಬದ್ ಹೊಂಬಾಳೆ ನಡುಗ್ಯಾವೆ | ತಾನಂದಾನೋ
ಗಬ್ಬದ್ ಹೊಂಬಾಳೆ ನಡುಗ್ಯಾವೆ

ಸಾರಾಂಶ :- ಕೆರೆಯ ಎರಡು ಬದಿಯಲ್ಲಿರುವ ಹೊಂಬಾಳೆಗಳು ಕೆರೆಯ ನೀರನುಂಡು ಫಲಹೊತ್ತು ತೂಗುತ್ತಿರುವುದನ್ನಿಲ್ಲಿ ಜನಪದರು ನಡುಗಿವೆ ಎಂದು ವರ್ಣಿಸಿದ್ದಾರೆ.

07) ಹಾಕೋಕೊಂದಾರುಗೋಲು ನೂಕೋಕೊಂದುರುಗೋಲು
ಬೊಬ್ಬೆ ಹೊಡಿದಾವೆ ಬಾಳೆ ಮೀನು | ತಾನಂದಾನೋ
ಬೊಬ್ಬೆ ಹೊಡಿದಾವೆ ಬಾಳೆ ಮೀನು ||

ಸಾರಾಂಶ :- ಕೃಷಿಕರ ಉಪಕಸುಬಾದ ಮೀನುಗಾರಿಕೆ ಬದುಕಿಗೊಂದು ಊರುಗೊಲಾಗಿದ್ದು.ಕೆರೆಯಲ್ಲಿ ಮೀನುಗಾರರು ಬಲೆ ಬೀಸಿ ಮೀನು ಹಿಡಿದಾಗ ಬಲೆಯಲ್ಲಿ ಮೀನುಗಳು ಒದ್ದಾಡುವುದನ್ನೇ ಜನಪದರಿಲ್ಲಿ ಬೊಬ್ಬೆಹೋಡೆಯುತ್ತಿವೆ ಎಂದು ಹೇಳಿದ್ದಾರೆ.

08) ಬೊಬ್ಬೆ(ನೇ) ಹೊಡಿದಾವೆ ಬಾಳೆ ಮೀನ್ ಕೆರಿಯಾಗೆ
ಗುಬ್ಬಿ ಸಾರಂಗ ನಗುತಾವೆ | ತಾನಂದಾನೋ
ಗುಬ್ಬಿ ಸಾರಂಗ ನಗುತಾವೆ ||

ಸಾರಾಂಶ :- ಕೆರೆ ನೀರಿನಿಂದ ಸಮೃದ್ಧವಾಗಿ ಬೆಳೆದ ಹಸಿರ ಪರಿಸರದಲ್ಲಿ ಜಿಂಕೆ ,ಸಾರಂಗಗಳು ನಲಿಯುತ್ತಾ ಸಂಭ್ರಮದಿಂದ ಬದುಕುತ್ತಿವೆ ಎಂದು ಜನಪದರು ಕುಣಿಗಲ್ಲು ಕೆರೆಯ ಸೊಬಗನ್ನು ವರ್ಣಿಸುತ್ತಾರೆ.

## ಪದ್ಯ ಪಾಠ :- 06 ವಚನಗಳು ಬಸವಣ್ಣ,ಸೊನ್ನಲಿಗೆ ಸಿದ್ದರಾಮ,ಅಕ್ಕಮಹಾದೇವಿ

01) ಉಳ್ಳವರು ಶಿವಾಲಯವ ಮಾಡುವರು!
ನಾನೇನ ಮಾಡುವೆ? ಬಡವನಯ್ಯ!
ಎನ್ನ ಕಾಲೇ ಕಂಬ,ದೇಹವೇ ದೇಗುಲ,
ಶಿರವೇ ಹೊನ್ನ ಕಳಶವಯ್ಯ!
ಕೂಡಲಸಂಗಮದೇವ ಕೇಳಯ್ಯ,
ಸ್ಥಾವರಕ್ಕಳಿವುಂಟು,ಜಂಗಮಕ್ಕಳಿವಿಲ್ಲ! **(ಕಂಠಪಾಠ)**

ಸಾರಾಂಶ :- ಬಸವಣ್ಣನವರು ಜನರ ಆಡಂಬರದ ಭಕ್ತಿಯನ್ನು ಖಂಡಿಸುತ್ತಾ ಶ್ರೀಮಂತರು ದೇವಾಲಯವನ್ನು ಕಟ್ಟುವರು ಬಡವರು ನಿರ್ಮಲವಾದ ಭಕ್ತಿಯನ್ನು ಹೊಂದಿರುವರು ಅವರು ತಮ್ಮ ಭಕ್ತಿಯಿಂದ ಜೀವನವನ್ನೆ ದೇವರಿಗರ್ಪಿಸಿರುವರು.ದೇಹವನ್ನೇ ದೇವಾಲಯವನ್ನು ಮಾಡಿಕೊಂಡು ಶಿರವನ್ನೇ ಚಿನ್ನದ ಕಳಸವಾಗಿಟ್ಟಂತೆ ಈಡೀ ತಮ್ಮ ಬದುಕನ್ನೇ ಭಕ್ತಿಯಿಂದ ದೇವರ ಸೇವೆಗಾಗಿ ಅರ್ಪಿಸಿದ್ದಾರೆ.ಶ್ರೀಮಂತರು ಕಟ್ಟಿದ ದೇವಾಲಯಕ್ಕೆ ಅಳಿವಿದೆ ಆದರೇ ನಿರ್ಮಲವಾದ ನಿಜ ಭಕ್ತಿಗೆ ಅಳಿವಿಲ್ಲವೆಂದು ಬಸವಣ್ಣನವರು ನಿರ್ಮಲವಾದ ಶುದ್ಧ ಭಕ್ತಿಯೇ ಮುಖ್ಯವೆಂದು ಹೇಳಿದ್ದಾರೆ.

02) ವೇಷ ಧರಿಸಿ ಫಲವೇನಯ್ಯ
ವೇಷದಂತಾಚರಣೆ ಇಲ್ಲದನ್ನಕ್ಕ
ವೇದಾಂತವನೋದಿ ಫಲವೇನಯ್ಯಾ
ಬ್ರಹ್ಮ ತಾನಾಗದನ್ನಕ್ಕ
ನಾನಾ ಕೆರೆಯ ತೋಡಿ ಫಲವೇನಯ್ಯ
ಪುಣ್ಯ ತೀರ್ಥಗಳು ಬರದನ್ನಕ್ಕ ಕಪಿಲಸಿದ್ದಮಲ್ಲಿಕಾರ್ಜುನ.

ಸಾರಾಂಶ :- ಸೊನ್ನಲಿಗೆ ಸಿದ್ದರಾಮ ರು ತಮ್ಮ ವಚನದಲ್ಲಿ ನಡೆ – ನುಡಿ ಒಂದೇ ರೀತಿಯಾಗಿರಬೇಕು ಅಂದಾಗ ಜೀವನ ಸಾರ್ಥಕವಾಗುತ್ತದೆ ಎನ್ನುವುದಕ್ಕೆ ಅನೇಕ ಹೋಲಿಕೆಗಳ ಮೂಲಕ ಹೇಳಿದ್ದಾರೆ. ಇಲ್ಲದಿದ್ದಲ್ಲಿ ಜೀವನವೆಲ್ಲಾ ವ್ಯರ್ಥವಾದಂತೆ ಎನ್ನುವುದಕ್ಕೆ ವೇಷ ಧರಿಸಿದ ಮೇಲೆ ವೇಷದಂತಾಚರಣೆ ಇರಬೇಕು,ವೇದವನೋದಿ ಅದನ್ನು ತಿಳಿಯದಿದ್ದಡೆ ಫಲವಿಲ್ಲ. ನೀರು ಬರದಿದ್ದಲ್ಲಿ ನಾನಾ ಕೆರೆ ತೋಡಿ ಫಲವೇನು ಎಂದು ಅರ್ಥವಿಲ್ಲದ ಆಚರಣೆಗಳನ್ನು ಬಿಟ್ಟು ನಿಷ್ಠೆಯಿಂದ ಬದುಕಬೇಕು ಎನ್ನುವರು.

03) ಬೆಟ್ಟದ ಮೇಲೊಂದು ಮನೆಯ ಮಾಡಿ
ಮೃಗಗಳಿಗಂಜಿದಡೆಂತಯ್ಯಾ?ಸಮುದ್ರದ ತಡಿಯಲ್ಲೊಂದು ಮನೆಯ ಮಾಡಿ
ನೊರೆತೆರೆಗಳಿಗಂಜಿದಡೆಂತಯ್ಯಾ?ಸಂತೆಯೊಳಗೊಂದು ಮನೆಯ ಮಾಡಿ
ಶಬ್ದಕ್ಕೆ ನಾಚಿದಡೆಂತಯ್ಯಾ? ಚೆನ್ನಮಲ್ಲಿಕಾರ್ಜುನದೇವ ಕೇಳಯ್ಯಾ
ಲೋಕದೊಳಗೆ ಹುಟ್ಟಿದ ಬಳಿಕ ಸ್ತುತಿನಿಂದೆಗಳು ಬಂದಡೆ
ಮನದಲ್ಲಿ ಕೋಪವ ತಾಳದೆ ಸಮಾಧಾನಿಯಾಗಿರಬೇಕು. **(ಕಂಠಪಾಠ)**

ಸಾರಾಂಶ :-ಅಕ್ಕಮಹಾದೇವಿಯು ಜೀವನವು ಸಾರ್ಥಕವಾಗಬೇಕಾದರೆ ಸಹನೆ ಮತ್ತು ತಾಳ್ಮೆ ಮುಖ್ಯವಾಗಿರಬೇಕು ಎಂದು ಅನೇಕ ನಿದರ್ಶನಗಳ ಮೂಲಕ ತಿಳಿಸಿರುವರು ಬೆಟ್ಟದ ಮೇಲೆ ಮನೆಡಿದ ಮೇಲೆ ಅಲ್ಲಿರುವ ಪ್ರಾಣಿ ಪಕ್ಷಿಗಳಿಗೆ ಹೆದರಿದರೆ ಜೀವನವಿಲ್ಲ ಅಂತೆಯೇ ಸಮುದ್ರದ ತೀರದಲ್ಲಿ ಮನೆ ಮಾಡಿದ ಮೇಲೆ ಅಲ್ಲಿನ ಅಲೆಗಳಿಗೆ ಅಂಜಿ ಬದುಕದೆ ಅವುಗಳಿಗೆ ಹೊಂದಿ ಬದುಕಿದಾಗ ಜೀವನ ಎನ್ನುತ್ತಾ ಸಂತೆಯಲ್ಲಿ ಮನೆಯ ಮಾಡಿದಾಗ ಅಲ್ಲಿನ ಜನರಾಡುವ ಮಾತುಗಳಿಗೆ ನಾಚಿಕೊಂಡರೆ ಬದುಕಲು ಸಾಧ್ಯವಿಲ್ಲಾ ಅಂತೆಯೇ ಈ ಜಗದೊಳಗೆ ಹುಟ್ಟಿದ ಮೇಲೆ ಜನರ ಹೊಗಳಿಕೆ ತೆಗಳಿಕೆಗಳು ಸಹಜವಾಗಿ ಬರುತ್ತವೆ ಅವುಗಳಿಗೆ ಕೋಪ ಮಾಡಿಕೊಳ್ಳದೆ ತಾಳ್ಮೆಯಿಂದ ಸಹಿಸಿಕೊಂಡು ಬದುಕಿದಾಗ ಜೀವನ ಸಾರ್ಥಕವಾಗುತ್ತದೆ ಎಂದು ಅಕ್ಕಮಹಾದೇವಿಯು ತಿಳಿಸುತ್ತಾಳೆ.

## ಪದ್ಯ ಪಾಠ :- 07 ನಿಟ್ಟೋಟದಲಿ ಹಾಯ್ದನು ಬಿಟ್ಟ ಮಂಡೆಯಲಿ ಕುಮಾರವ್ಯಾಸ

01) ಕಡೆಗೆ ಹಾಯವು ಕಂಗಳೀ ಬಲ
ಗಡಲ ಮನವೀಸಾಡಲಾರದು
ವೊಡಲುವಿಡಿದಿರಲೇನ ಕಾಣಲು ಬಾರದದ್ಭುತವ
ಪೊಡವಿಯೀದುದೊ ಮೋಹರವನಿದ
ರೊಡನೆ ಕಾದುವನಾವನಾತನೆ
ಮೃಡನು ಶಿವ ಶಿವ ಕಾದಿಗೆಲಿದೆವು ಬಲಕೆ ನಮೊಯೆಂದ. **(ಕಂಠಪಾಠ)**

ಸಾರಾಂಶ:- ಅಜ್ಞಾತವಾಸದಲ್ಲಿರುವ ಪಾಂಡವರನ್ನು ಹುಡುಕುವ ಸಂದರ್ಭದಲ್ಲಿ ಕೌರವರ ಸೈನ್ಯವು ವಿರಾಟನ ಗೋವುಗಳನ್ನು ಅಪಹರಿಸಿದಾಗ ಉತ್ತರನು ಅರ್ಜುನನ ಸಾರಥ್ಯದಲ್ಲಿ ಯುದ್ಧ ಭೂಮಿಗೆ ಹೋಗುತ್ತಾನೆ ಆದರೆ ಅಲ್ಲಿ ಅಪಾರವಾದ ಕುರು ಸೈನ್ಯವನ್ನು ನೋಡಿ ಭಯಗೊಂಡು ಇಂತಹ ವಿಶಾಲವಾದ ಸಮುದ್ರದಂತಿರುವ ಸೈನ್ಯದ ಕೊನೆಯವರೆಗೆ ನೋಡಲು ನನ್ನಿಂದ ಸಾಧ್ಯವಿಲ್ಲ.ಇವರೊಂದಿಗೆ ಹೋರಾಡಿ ಜೀವ ಕಳೆದುಕೊಳ್ಳುವುದಕ್ಕಿಂತ ಜೀವವಿದ್ದರೇ ಏನನ್ನಾದರೂ ಸಾಧಿಸಬಹುದು ಭೂಮಿಯೇ ಜನ್ಮ ನೀಡಿದಂತಿರುವ ಇಂತಹ ಸೈನ್ಯದೊಂದಿಗೆ ಹೋರಾಡಲು ಆ ಶಿವನೊಬ್ಬನೇ ಸಮರ್ಥನು ನನ್ನಿಂದ ಸಾಧ್ಯವಿಲ್ಲ ಆ ಸೈನ್ಯಕ್ಕೆ ಶರಣು ಎಂದು ಹೇಳಿದನು.

02) ಎಂದೊಡರ್ಜುನ ನಗುತ ರಥವನು
ಮುಂದೆ ನಾಲ್ಕೆಂಟಡಿಯ ನೂಕಲು
ಕೊಂದನೀ ಸಾರಥಿಯೆನುತ ಸಂವರಿಸಿ ಮುಂಜೆರಗ
ಬಂದು ಮೆಲ್ಲನೆ ರಥದ ಹಿಂದಕೆ
ನಿಂದು ಧುಮ್ಮಿಕ್ಕಿದನು ಬದುಕಿದೆ
ನೆಂದು ನಿಟ್ಟೋಟದಲಿ ಹಾಯ್ದನು ಬಿಟ್ಟ ಮಂಡೆಯಲಿ. **(ಕಂಠಪಾಠ)**

ಸಾರಾಂಶ:- ಅವನ ಮಾತನ್ನು ಕೇಳಿದ ಅರ್ಜುನನು ಮನದಲಿ ನಗುತ ರಥವನ್ನು ಮುನ್ನಡೆಸಲು ಭಯಗೊಂಡ ಉತ್ತರನು ಈ ಸಾರಥಿ ನನ್ನನ್ನು ಕೊಲ್ಲುತ್ತಾನೆ ಎಂದು ನಿಧಾನವಾಗಿ ರಥದ ಹಿಂದಕ್ಕೆ ಬಂದು ನಿಂತು ರಥದಿಂದ ಜಿಗಿದು ಬದುಕಿದೆನೆಂದು ಒಂದೇ ಸಮನೆ ಓಡಲು ಪ್ರಾರಂಭಿಸುತ್ತಾನೆ.

03) ಮನದಲೊಡಲೊಡೆವಂತೆ ನಗುತಲಿ
ರ್ಜುನನು ಗಜರಿದನೆಲವೋ ಸಭೆಯಲಿ
ವನಜಮುಖಿಯರ ಮುಂದೆ ಸೊರಹಿದೆ ಬಾಯ್ಕೆ ಬಂದಂತೆ
ಅನುವರದೊಳೇನಾಯ್ತು ರಿಪುವಾ
ಹಿನಿಯನಿರಿಯದೆ ನಾಡ ನರಿಯವೊ
ಲೆನಗೆ ನೀ ಹಲುಗಿರಿಯೆ ಬಿಡುವೆನೆ ಕಾದು ನಡೆಯೆಂದ.

ಸಾರಾಂಶ:- ಉತ್ತರನ ಈ ಕೆಲಸವನ್ನು ಕಂಡು ಅರ್ಜುನನು ಮನಸ್ಸಿನಲ್ಲಿ ಹೊಟ್ಟೆ ಹುಣ್ಣಾಗುವವರೆಗೆ ನಗುತ ಅವನನ್ನು ಹಿಡಿದು ಗದರಿಸುತ್ತಾ ಅರಮನೆಯಲಿ ಹೆಣ್ಣು ಮಕ್ಕಳ ಮುಂದೆ ಬಾಯಿಗೆ ಬಂದಂತೆ ಮಾತನಾಡಿದೆಯಲ್ಲ. ಇಗ ಈ ಯುದ್ಧ ಭೂಮಿಯಲ್ಲಿ ನಿನಗೇನಾಯ್ತು ಆ ವೈರಿ ಸೈನಿಕರು ನೀನಗೇನು ಮಾಡದೆ ನನಗೆ ಈ ರೀತಿಯಾಗಿ ನಾಡನರಿಯಂತೆ ( ನಾಯಿ) ಬೇಡಿಕೊಂಡರೇ ಬಿಡುವುದಿಲ್ಲ ನಡೆ ಯುದ್ಧ ಮಾಡು ಎಂದನು ಅರ್ಜುನ.

04) ಧುರದಲೊಡಿದ ಪಾತಕವ ಭೂ
ಸುರರುಕಳೆದಪರಶ್ವಮೇಧವ
ಧರಣಿಯಲಿ ಪ್ರತ್ಯಕ್ಷವಾಗಿಯೆ ಮಾಡಬಹುದೆಮಗೆ
ಸುರರ ಸತಿಯರನೊಲ್ಲೆವೆಮಗೆ
ಮ್ಮರಮನೆಯ ನಾರಿಯರೆ ಸಾಕೆ
ಮ್ಮರಸುತನವೆಮಗಿಂದ್ರ ಪದವಿಯು ಬಿಟ್ಟುಕಳುಹೆಂದ.

ಸಾರಾಂಶ:- ಅರ್ಜುನನ ಮಾತಿಗೆ ಉತ್ತರನು ಯುದ್ಧಭೂಮಿಯಲ್ಲಿ ಓಡಿದ ಪಾಪವನ್ನು ರಾಜರು ಅಶ್ವಮೇಧಯಾಗವನ್ನು ಮಾಡಿ ಕಳೆದು ಕೊಳ್ಳುವಂತೆ ನಾನು ಮಾಡುತ್ತೇನೆ.ಯುದ್ಧ ಭೂಮಿಯಲ್ಲಿ ಮಡಿದು ಸ್ವರ್ಗ ಸೇರಿ ಆ ದೇವಲೋಕದ ಸ್ತ್ರೀಯರ ಸೇವೆಯು ಬೇಡ,ಆ ಇಂದ್ರ ಪದವಿಯೂ ನನಗೆ ಬೇಡ ನನಗೆ ನಮ್ಮ ಅರಸುತನವೇ ಇಂದ್ರ ಪದವಿಯಂತೆ ,ನಮ್ಮ ಅರಮನೆಯ ನಾರಿಯರೇ ಸಾಕೆನಗೆ ಬದುಕಿದ್ದರೇ ಏನನ್ನಾದರೂ ಸಾಧಿಸಲು ಸಾಧ್ಯ ಆದ್ದರಿಂದ ನನ್ನನ್ನು ಬಿಟ್ಟು ಕಳುಹಿಸು ಎಂದು ಅರ್ಜುನನಲ್ಲಿ ಬೇಡಿಕೊಂಡನು. ಹೀಗೆ ಉತ್ತರನು ಯುದ್ಧಕ್ಕೆ ಹೇದರಿ ಓಡಿದ ಸನ್ನಿವೇಷವನ್ನು ಕವಿಯು ಸುಂದರವಾಗಿ ವರ್ಣಿಸಿದ್ದಾರೆ.

## **ಪೋಷಕ ಪದ್ಯ :- ಹೊಂಗೆ ಬೇವುಗಳ ಹಾಡು** — **ಕವಯತ್ರಿ :-ಹೆಚ್.ಎಲ್.ಪುಷ್ಪಾ**

01) ಬದುಕು ಬದುವ ಬೇಲಿಯಲ್ಲಿ
ಹೊಂಗೆ ಮರದ ಜೋಲಿಯಲ್ಲಿ
ಅರಳಿದೆ ಹೂವು,ಮಲಗಿದೆ ಮಲ್ಲಿಗೆಯಂತ ರೂಪು
ತಾಯಿಯಂತ ನೆರಳಲು,ಕರುಳಿನಂತ ಮಡಿಲು.

ಸಾರಾಂಶ:- ಜೀವನವೆಂಬ ಹೊಲದ ಬದುವಿನಲ್ಲಿರುವ ಹೊಂಗೆ ಮರದ ರೆಂಬೆ ಕೊಂಬೆಗಳ ತೊಟ್ಟಿಲಲ್ಲಿ ಮಲಗಿರುವ ಮಗುವಿನಂತೆ ಮಲ್ಲಿಗೆಯ ಬಿಳಿಯ ಬಣ್ಣದಂತಹ ಹೂವು ಅರಳಿದೆ.ತಾಯಿಯ ಪ್ರೀತಿಯು ನೆರಳಿನಂತೆ ಎಲ್ಲೆಡೆ ಹರಡಿದೆ. ತಾಯಿ ಮಗುವಿನ ಕರುಳ ಬಳ್ಳಿಯ ಸಂಬಂಧದಂತೆ ಪ್ರಕೃತಿ ಮನುಷ್ಯನ ಸಂಬಂಧ.

02) ನೆತ್ತಿ ಮೇಲೆ ಸೂರು,ಮೇಲೆ ಮೇಲೆ ರವಿಯ ಕಣ್ಣು
ತೆಂಗು,ಹೊಂಗೆ,ಹಿಪ್ಪೆ,ಬೇವು ಜೀವ ಜಾಲ ನೇದಿವೆ
ಬದುಕ ಬಂಡಿ ಉರುಳಲಿದೆ
ತೈಲವಿದೆ,ಬತ್ತಿಯಿದೆ ಬದುಕು ಬಂಗಾರವಿದೆ
ಅರಳಿದ ಕೈಯ ಕಮಲದಲ್ಲಿ ನಾಳಿನ ಚಿನ್ನದಂಥ ಬೆಳಕಿದೆ.

ಸಾರಾಂಶ:- ಆ ತಾಯಿಯ ನೆರಳು ನೆತ್ತಿಯ ಮೇಲೆ ಸೂರು ಕಟ್ಟಿದಂತೆ ಆಸರೆ ನೀಡಿದೆ. ಮೇಲೆ ಆಕಾಶದಲ್ಲಿ ಬೆಳಗುವ ಸೂರ್ಯನ ಸುಡು ಬಿಸಿಲಿನಿಂದ ಜಗವ ಕಾಪಾಡುತ ತಂಪನು ನೀಡುತ್ತಿದೆ.ತೆಂಗು.ಹೊಗೆ.ಹಿಪ್ಪೆ,ಬೇವು, ಬಗೆಬಗೆಯ ಗಿಡ ಮರಗಳು ವಿವಿಧ ಪಕ್ಷಿ,ಪ್ರಾಣಿಗಳಿಗೆ ಆಶ್ರಯ ನೀಡಿ ಜೀವ ಜಾಲವನ್ನೇ ಹೆಣೆದಿದೆ. ಆ ಮರಗಳಿಂದಲೇ ಜೀವನದ ಗಾಡಿ ಸಾಗುತ್ತಿದೆ ಮತ್ತು ಅವುಗಳಲ್ಲಿ ತೈಲವಿದೆ,ಬತ್ತಿಯಿದೆ ಅಲ್ಲದೆ ಜೀವನವನ್ನು ಬಂಗಾರವಾಗಿಸುವ ಶಕ್ತಿ ಅವುಗಳಿಗಿದೆ.ಕಮಲದಂತೆ ಅರಳಿದ ಕೈಯಲ್ಲಿ ಬಂಗಾರದಂತಹ ಉಜ್ವಲವಾದ ಭವಿಷ್ಯವಿದೆ.

03) ಹೊಳೆಯ ದಂಡೆಯ ಸಾಲಿನಲ್ಲಿ
ರಾಜ್ಯ ಹುಟ್ಟಿ ರಾಜ್ಯವುರುಳಿ,ಸಾಗಿ,ಸಾಗಿ
ಶತಶತಮಾನಗಳ ನೇಗಿಲಯೋಗಿ ಸಾಗಿ ಸಾಗಿ
ಅದೇ ಸಂತೆ, ಅದೇ ಜಾತ್ರೆ,ಗೊಬ್ಬರದ ಹಾಡು ಹೊಮ್ಮಿದೆ.

ಸಾರಾಂಶ :- ನದಿ ತೀರದಲ್ಲಿ ನಮ್ಮ ನಾಗರಿಕತೆಗಳು ಹುಟ್ಟಿ ಬೆಳೆದವು, ಅನೇಕ ರಾಜ ಮನೆತನಗಳು ಹುಟ್ಟಿ ಬೆಳೆದವು,ಅಳಿದು ಹೋದವು ಆದರೆ ನೂರಾರು ವರ್ಷಗಳಿಂದಲೂ ನಮ್ಮ ರೈತರ ಜೀವನ ಮಾತ್ರ ಬದಲಾಗುತ್ತಿಲ್ಲ,ಅದೇ ಹಳೆಯ ಜೀವನ ಸಾಗಿಸುತ್ತಿದ್ದಾನೆ.ಯಾವುದೇ ಬದಲಾದರೂ ಅವರ ಜೀವದಲ್ಲಿ ಅದೇ ನೋವಿನ ಹಾಡು ತುಂಬಿದೆ.

04) ನೋಡಿರಣ್ಣ ನೋಡಿರೋ ಈ ಲೋಕವ
ಬಣ್ಣ ಬಣ್ಣ ಚಿಟ್ಟೆ ಹಾರಿ ಭೃಂಗದ ಸಂಗೀತ ಕೇಳಿ
ಕೆಳಗೆ ಹೊಂಗೆ,ಜೀವ ಹೂವ ಹಾಸಿಗೆ
ಗಮ ಗಮಿಸೋ ಗಮಲಿನಲ್ಲಿ
ಇಲ್ಲೇ ಎಲ್ಲೋ ಅಡಗಿ ನಾಳೆಯೆಂಬ ಕೂಸಿದೆ.

ಸಾರಾಂಶ :- ನೋಡಿರಣ್ಣ ನೋಡಿರೋ ಈ ಜಗವನ್ನು ಸುಂದರವಾದ ಬಣ್ಣದ ಚಿಟ್ಟೆಗಳ ಹಾರಾಟ,ದುಂಬಿಗಳ ಇಂಪಾದ ಸಂಗೀತದ ಜೊತೆಗೆ ತಂಪಾದ ಹೊಂಗೆಯ ನೆರಳು ಕೆಳಗಡೆ ಹರಡಿದೆ ಅಲ್ಲದೆ ಅದರಲ್ಲಿ ಅರಳಿದ ಹೂಗಳ ಪರಿಮಳಗಳಲ್ಲಿ ನಾಳೆಯೆಂಬ ಸುಂದರವಾದ ಮಗು ಎಲ್ಲೋ ಅಡಗಿ ಕೂತಿದೆ.

05) ಅಲ್ಲಿ ಅದು ನಗರವಣ್ಣ ಎಲ್ಲಾ ತಿಂದು ತೇಗಿದೆ.
ಬೆನ್ನ ಹಿಂದೆ ಉಳಿದುದೇನು
ಬಗೆ ಬಗೆಯ ಕಾರೇನು,ಪಟಪಟ ಮೋಟಾರೇನು
ಜೀವನದ ಇಂಧನ ತೀರುತಲಿದೆ
ಬದುಕು ನಾಳೆ ಎಂತೋ ಏನೋ
ಯಾಕೋ ಅಳಲು ಕಾಡಿದೆ
ಹಾರೋ ಹಕ್ಕಿ ಹಸಿರು ತೀರುತಲಿದೆ
ಯಾಕೋ ಏನೋ,ಯಾಕೋ ನಾಳಿನ ತೈಲ ಕಾಡಿದೆ.

ಸಾರಾಂಶ:- ಅಭಿವೃದ್ದಿಯ ನೆಪದಲ್ಲಿ ನಗರಗಳು ಬೆಳೆದಂತೆಲ್ಲಾ ಅವುಗಳೆಲ್ಲಾ ಹಿಂದಿನ ಇತಿಹಾಸ,ಸಂಸ್ಕೃತಿಗಳನ್ನೆಲ್ಲಾ ತಿಂದು ತೇಗಿದೆ, ಹೊಸ-ಹೊಸ ಬಗೆಯ ಕಾರುಗಳು,ಸದ್ದು ಮಾಡುವ ನವ ನವೀನ ಮಾದರಿಯ ಮೊಟಾರುಗಳು,ಮೇಲೆ ಆಕಾಶದಲ್ಲಿ ಹಾರಾಡುವ ವಿಮಾನಗಳು ಜೀವನದ ಇಂದನವನ್ನು ಬರಿದು ಮಾಡುತ್ತಲಿವೆ.ಹಿಗೆಯೇ ಮುಂದುವರಿದರೆ ಭವಿಷ್ಯದ ದಿನಗಳಲ್ಲಿ ಮುಂದೇನು ಎಂಬ ಚಿಂತೆ ಕಾಡುತ್ತಿದೆ.

06) ತೀರಿದರೂ ಜೀವ ತೈಲ,ಬೇಡವಣ್ಣ ಅಳಲು
ಇಲ್ಲೇ ಇಲ್ಲೇ ಇಲ್ಲೇ ಇದೆ
ಹೊಂಗೆ ಸಿಪ್ಪೆ ಒಡಲಲಿ ತೈಲ ಜಿನುಗಿದೆ
ಒಡಲಲ್ಲೇ ಅಡಗಿ ಭ್ರೂಣವಾಗಿದೆ
ನವಮಾಸ ತುಂಬಲಿ
ಎಲ್ಲ ಮರದ ಜೀವ ತೈಲ ತೆವಳಿ ಬರಲಿ
ನಾಳಿನ ಲೋಕದ ತೈಲಧಾರೆ ಹರಿದು ಹರಿದು ಬರಲಿ.

ಸಾರಾಂಶ :- ನಗರಿಕರಣದ ನೆಪದಲ್ಲಿ ಹಸಿರೆಲ್ಲಾ ಮಾಯವಾಗಿ ಜೀವನದ ತೈಲ ತೀರಿ ಮುಗಿದರೂ ಚಿಂತೆ ಬೇಡ. ಏಕೆಂದರೆ ಹೊಂಗೆಯ ಮರದ ಒಡಲಲ್ಲಿ ತೈಲವಿದೆ.ಮುಂದಿನ ದಿನಗಳ ಇಂಧನವಾದ ಹೊಂಗೆಯ ತೈಲವು,ಅದರ ಬೀಜಗಳಲ್ಲಿ ಬ್ರೂಣವಾಗಿ ಅಡಗಿ ಕುಳಿತಿದೆ. ಭವಿಷ್ಯದ ದಿನಗಳಲ್ಲಿ ತೈಲ ಧಾರೆಯಾಗಿ ಹರಿಯಲಿದೆ. ಹರಿದು ಬಂದು ಸೇರಲಿ.

07) ತೆಂಗು ತಾರೆಗಳ ನಾಡಿನಲ್ಲಿ
ಬೆವರ ಹನಿಯ ಸಾಲೆಯಲ್ಲಿ ಜೀವಾಮೃತವಡಗಿದೆ.
ಜೀವ ಹಿಂಡಿ, ಒಡಲ ಹಿಂಡಿ
ತೈಲ ಧಾರೆ ಹೊಮ್ಮಿ ಬರಲಿ
ಹೊಂಗೆ,ಹಿಪ್ಪೆ, ಜೀವ ಮೇಳ ನಡೆಯಲಿ

ನಾಳೆಯೆಂಬ ಚಪ್ಪರದ ಕೆಳಗೆ

ಮನುಕುಲದ ಮೊಳಕೆ ಒಡೆಯಲಿ, ಭವ್ಯ ಬದುಕು ಅರಳಲಿ.

ಸಾರಾಂಶ :- ತೆಂಗು – ಕಂಗು ಬೆಳೆಯುವ ಈ ನಾಡಿನಲ್ಲಿ ಕಷ್ಟಪಟ್ಟು ದುಡಿದ ಬೆವರ ಸುರಿಸಿ ಬೆಳೆಸಿದ ಈ ಹೊಂಗೆಯ ಮರಗಳಲ್ಲಿ ಜೀವಾಮೃತವು ಅಡಗಿದೆ. ಅದನ್ನು ಹಿಂಡಿ ತೆಗೆದಾಗ ಅದರೊಡಲಿಂದ ತೈಲವು ಧಾರೆಯಾಗಿ ಹರಿದು ಬರಲಿದೆ.ಹೊಂಗೆ, ಹಿಪ್ಪೆ ಮರಗಳು ಹೆಚ್ಚಾಗಿ ಬೆಳೆದು ನಾಳೆಯೆಂಬ ಹಂದರದ ಕೆಳಗೆ ಭವಿಷ್ಯದ ಮನುಷ್ಯನ ಜೀವನವು ಮೊಳಕೆ ಒಡೆದು,ಸುಂದರವಾದ ಭವ್ಯ ಬದುಕು ಅರಳಿ ಬರುತ್ತದೆ. ಆದ್ದರಿಂದ ಪರಿಸರದ ರಕ್ಷಣೆಯ ಜವಾಬ್ದಾರಿಯನ್ನರಿತು ಇಂದು ಮನುಷ್ಯ ಬದುಕಬೇಕಾಗಿದೆ ಎಂಬುದನ್ನು ಈ ಕಾವ್ಯದ ಮೂಲಕ ಕವಯತ್ರಿ ಸಮಾಜಕ್ಕೆ ಸಂದೇಶ ನಿಡಿದ್ದಾರೆ.

# ಸಂದರ್ಭದೊಡನೆ ವಿವರಿಸಿ.

## ಗದ್ಯ ಪಾಠ :-01 ಒಣಮರದ ಗಿಳಿ

01) " ಇಂಥಾ ಒಣ ಮರದಲ್ಲಿ ಏಕೆ ವಾಸಮಾಡುತ್ತಿದ್ದೀಯಾ"

ಸಂದರ್ಭ :- ಈ ವಾಕ್ಯವನ್ನು ಅ.ರಾ.ಮಿತ್ರ ರವರು ಬರೆದ "ಒಣ ಮರದ ಗಿಳಿ" ಎನ್ನುವ ಪಾಠದಿಂದ ತೆಗೆದುಕೊಳ್ಳಲಾಗಿದೆ. ಇಂದ್ರನು ಸಂಚರಿಸುತ್ತಿದ್ದ ವೇಳೆಯಲ್ಲಿ ಒಣಮರದಲ್ಲಿ ವಾಸವಾಗಿರುವ ಗಿಳಿಯನ್ನು ಕಂಡಾಗ ಈ ಮಾತನ್ನು ಹೇಳಲಾಗುತ್ತದೆ.

ವಿವರಣೆ :- ಗಿಳಿಯು ವಾಸಮಾಡುತ್ತಿದ್ದ ಮರವು ಒಣಗಿ ನಿಂತರೂ ಅದನ್ನು ಬಿಟ್ಟು ಹೋಗದೆ ಅಲ್ಲೆ ವಾಸಮಾಡುತ್ತಿರುತ್ತದೆ. ಆ ವೇಳೆಯಲ್ಲಿ ಇಂದ್ರನು ಲೋಕ ಸಂಚಾರ ಮಾಡುತ್ತಿರುವಾಗ ಗಿಳಿಯನ್ನು ನೋಡುತ್ತಾನೆ ಆಗ ಅವನಿಗೆ ಆಶ್ಚರ್ಯವಾಗಿ ಗಿಳಿಯನ್ನು ಮಾತನಾಡಿಸುತ್ತಾನೆ ಹೀಗೆ ಗಿಳಿಯೊಂದಿಗೆ ಸಂವಾದ ಮಾಡುತ್ತಿರುವಾಗ ಈ ಮಾತು ಬರುತ್ತದೆ.

02) " ಏನಾದರೂ ವರವನ್ನು ಕೇಳು ಕೊಡುತ್ತೇನೆ"

ಸಂದರ್ಭ :- ಈ ವಾಕ್ಯವನ್ನು ಅ.ರಾ.ಮಿತ್ರ ರವರು ಬರೆದ "ಒಣ ಮರದ ಗಿಳಿ" ಎನ್ನುವ ಪಾಠದಿಂದ ತೆಗೆದುಕೊಳ್ಳಲಾಗಿದೆ. ಇಂದ್ರನು ಸಂಚರಿಸುತ್ತಿದ್ದ ವೇಳೆಯಲ್ಲಿ ಒಣಮರದಲ್ಲಿ ವಾಸವಾಗಿರುವ ಗಿಳಿಯನ್ನು ಕಂಡು ಅದರ ತತ್ವನಿಷ್ಠೆಯನ್ನು ಹೇಳುವಾಗ ಈ ಮಾತನ್ನು ಹೇಳಲಾಗುತ್ತದೆ.

ವಿವರಣೆ :- ಗಿಳಿಯು ವಾಸಮಾಡುತ್ತಿದ್ದ ಮರವು ಒಣಗಿ ನಿಂತರೂ ಅದನ್ನು ಬಿಟ್ಟು ಹೋಗದೆ ಅಲ್ಲೆ ವಾಸಮಾಡುತ್ತಿರುತ್ತದೆ. ಆ ವೇಳೆಯಲ್ಲಿ ಇಂದ್ರನು ಲೋಕ ಸಂಚಾರ ಮಾಡುತ್ತಿರುವಾಗ ಗಿಳಿಯನ್ನು ನೋಡುತ್ತಾನೆ ಆಗ ಅವನಿಗೆ ಆಶ್ಚರ್ಯವಾಗಿ ಗಿಳಿಯನ್ನು ಮಾತನಾಡಿಸುತ್ತಾನೆ ಹೀಗೆ ಗಿಳಿಯೊಂದಿಗೆ ಸಂವಾದ ಮಾಡುತ್ತಿರುವಾಗ ಅದರ ತತ್ವನಿಷ್ಠೆಯನ್ನು ಮೆಚ್ಚಿಕೊಂಡ ಇಂದ್ರನು ಈ ಮಾತನ್ನು ಹೇಳುತ್ತಾನೆ.

03) " ಅದರ ಈಗಿನ ಅವಸ್ಥೆಯನ್ನು ನಾನು ನೋಡಲಾರೆನು"

ಸಂದರ್ಭ :- ಈ ವಾಕ್ಯವನ್ನು ಅ.ರಾ.ಮಿತ್ರ ರವರು ಬರೆದ "ಒಣ ಮರದ ಗಿಳಿ" ಎನ್ನುವ ಪಾಠದಿಂದ ತೆಗೆದುಕೊಳ್ಳಲಾಗಿದೆ. ಇಂದ್ರನು ಸಂಚರಿಸುತ್ತಿದ್ದ ವೇಳೆಯಲ್ಲಿ ಒಣಮರದಲ್ಲಿ ವಾಸವಾಗಿರುವ ಗಿಳಿಯನ್ನು ಕಂಡು ಅದರ ತತ್ವನಿಷ್ಠೆಯನ್ನು ಮೆಚ್ಚಿಕೊಂಡು ಹೇಳುವಾಗ ಈ ಮಾತನ್ನು ಹೇಳಲಾಗುತ್ತದೆ.

ವಿವರಣೆ :- ಗಿಳಿಯು ವಾಸಮಾಡುತ್ತಿದ್ದ ಮರವು ಒಣಗಿ ನಿಂತರೂ ಅದನ್ನು ಬಿಟ್ಟು ಹೋಗದೆ ಅಲ್ಲೆ ವಾಸಮಾಡುತ್ತಿರುತ್ತದೆ. ಆ ವೇಳೆಯಲ್ಲಿ ಇಂದ್ರನು ಲೋಕ ಸಂಚಾರ ಮಾಡುತ್ತಿರುವಾಗ ಗಿಳಿಯನ್ನು ನೋಡುತ್ತಾನೆ ಆಗ ಅವನಿಗೆ ಆಶ್ಚರ್ಯವಾಗಿ ಗಿಳಿಯನ್ನು ಮಾತನಾಡಿಸುತ್ತಾನೆ ಹೀಗೆ ಗಿಳಿಯೊಂದಿಗೆ ಸಂವಾದ ಮಾಡುತ್ತಿರುವಾಗ ಅದರ ತತ್ವನಿಷ್ಠೆಯನ್ನು ಮೆಚ್ಚಿಕೊಂಡ ಇಂದ್ರನು ಗಿಳಿಗೆ ಏನಾದರೂ ವರವನ್ನು ಕೇಳಲು ಹೇಳುತ್ತಾನೆ ಮಾತನ್ನು ಹೇಳುತ್ತಾನೆ.

## ಗದ್ಯ ಪಾಠ – 02 ಅಸಿ – ಮಸಿ – ಕೃಷಿ

01) "ವ್ಯವಸಾಯ ಇಲ್ಲದಿದ್ದರೆ ದೇಶದ ಆಟವೇ ನಡೆಯದು"

ಸಂದರ್ಭ :- ಈ ವಾಕ್ಯವನ್ನು ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳು ಬರೆದ ಅಸಿ – ಮಸಿ – ಕೃಷಿ ಎನ್ನುವ ಪಾಠದಿಂದ ತೆಗೆದು ಕೊಳ್ಳಲಾಗಿದೆ. ಕೃಷಿಯ ಮಹತ್ವವನ್ನು ಹೇಳುವಾಗ ಈ ಮಾತು ಬರುತ್ತದೆ.

ವಿವರಣೆ :- ದೇಶದ ಅಭಿವೃದ್ಧಿಯಲ್ಲಿ ಕೃಷಿಯು ಅತ್ಯಂತ ಮಹತ್ವದ ಪಾತ್ರ ನಿರ್ವಹಿಸುತ್ತದೆ. ಕೃಷಿಯ ಅಭಿವೃದ್ಧಿಯಾಗದಿದ್ದರೆ ದೇಶದ ಪ್ರಗತಿ ಸಾಧ್ಯವಿಲ್ಲ.ಆದರೆ ಇಂದು ನಮ್ಮ ಕೃಷಿಕರು ಅನೇಕ ತೊಂದರೆಗಳನ್ನು ಎದುರಿಸುತ್ತಿದ್ದಾರೆ ಅವರ ಸಮಸ್ಯೇಗಳನ್ನು ಕುರಿತು ಹೇಳುವಾಗ ಈ ಮಾತು ಬರುತ್ತದೆ.

02) " ರೈತರು ನಿರಾಶವಾದಿಗಳಾಗದೆ ಆಶಾವಾದಿಗಳಾಗಿ ಬಾಳನ್ನು ಸಾಗಿಸುತ್ತಿದ್ದಾರೆ"

ಸಂದರ್ಭ :- ಈ ವಾಕ್ಯವನ್ನು ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳು ಬರೆದ ಅಸಿ – ಮಸಿ – ಕೃಷಿ ಎನ್ನುವ ಪಾಠದಿಂದ ತೆಗೆದು ಕೊಳ್ಳಲಾಗಿದೆ. ರೈತರ ಜೀವನದ ಮಹತ್ವವನ್ನು ಹೇಳುವಾಗ ಈ ಮಾತು ಬರುತ್ತದೆ.

ವಿವರಣೆ :- ದೇಶದ ಅಭಿವೃದ್ಧಿಯಲ್ಲಿ ಕೃಷಿಯು ಅತ್ಯಂತ ಮಹತ್ವದ ಪಾತ್ರ ನಿರ್ವಹಿಸುತ್ತದೆ. ಕೃಷಿಯ ಅಭಿವೃದ್ಧಿಯಾಗದಿದ್ದರೆ ದೇಶದ ಪ್ರಗತಿ ಸಾಧ್ಯವಿಲ್ಲ. ಆದರೆ ಇಂದು ನಮ್ಮ ಕೃಷಿಕರು ಅನೇಕ ತೊಂದರೆಗಳನ್ನು ಎದುರಿಸುತ್ತಿದ್ದಾರೆ ಆದರೂ ಅವರು ಸ್ವಾವಲಂಬಿಗಳಾಗಿ ಬದುಕನ್ನು ಸಾಗಿಸುತ್ತಿದ್ದಾರೆ ಎಂದು ಅವರ ಕುರಿತು ಹೇಳುವಾಗ ಈ ಮಾತು ಬರುತ್ತದೆ.

03) "ಅವರು ಯಾರಿಗೂ ಮೋಸ ವಂಚನೆ ಮಾಡುವವರಲ್ಲ"

ಸಂದರ್ಭ :- ಈ ವಾಕ್ಯವನ್ನು ಶ್ರೀ ಪಂಡಿತಾರಾಧ್ಯ ಶಿವಾ ರ್ಯ ಸ್ವಾಮಿಗಳು ಬರೆದ ಅಸಿ – ಮಸಿ – ಕೃಷಿ ಎನ್ನುವ ಪಾಠದಿಂದ ತೆಗೆದು ಕೊಳ್ಳಲಾಗಿದೆ. ರೈತರ ಪ್ರಾಮಾಣೀಕತೆಯನ್ನು ಹೇಳುವಾಗ ಈ ಮಾತು ಬರುತ್ತದೆ.

ವಿವರಣೆ :- ದೇಶದ ಅಭಿವೃದ್ಧಿಯಲ್ಲಿ ಕೃಷಿಯು ಅತ್ಯಂತ ಮಹತ್ವದ ಪಾತ್ರ ನಿರ್ವಹಿಸುತ್ತದೆ. ಕೃಷಿಯ ಅಭಿವೃದ್ಧಿಯಾಗದಿದ್ದರೆ ದೇಶದ ಪ್ರಗತಿ ಸಾಧ್ಯವಿಲ್ಲ.ಆದರೆ ಇಂದು ನಮ್ಮ ಕೃಷಿಕರು ಅನೇಕ ತೊಂದರೆಗಳನ್ನುಎದುರಿಸುತ್ತಿದ್ದಾರೆ ಆದರೂ ಅವರ ಸ್ವಾಭಿಮಾನ,ಪ್ರಾಮಾಣಿಕತೆಯ ಬದುಕನ್ನು ಕುರಿತು ಹೇಳುವಾಗ ಈ ಮಾತು ಬರುತ್ತದೆ.

04) " ಸಾಹಿತಿಗಳು ಈ ನಾಡಿನಲ್ಲಿ ಹೆಚ್ಚಿದಷ್ಟು ಸಮಾಜವು ಪ್ರಗತಿಯ ಮೆಟ್ಟಿಲು ತುಳಿಯಲು ಸಾಧ್ಯ"

ಸಂದರ್ಭ :- ಈ ವಾಕ್ಯವನ್ನು ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳು ಬರೆದ ಅಸಿ – ಮಸಿ – ಕೃಷಿ ಎನ್ನುವ ಪಾಠದಿಂದ ತೆಗೆದು ಕೊಳ್ಳಲಾಗಿದೆ. ದೇಶದ ಪ್ರಗತಿಯಲ್ಲಿ ಸಾಹಿತಿಗಳ ಮಹತ್ವವನ್ನು ಹೇಳುವಾಗ ಈ ಮಾತು ಬರುತ್ತದೆ.

ವಿವರಣೆ :- ದೇಶದ ಪ್ರಗತಿ & ಅಭಿವೃದ್ಧಿಯಲ್ಲಿ ಸಾಹಿತಿಗಳು ಅತ್ಯಂತ ಮಹತ್ವದ ಪಾತ್ರ ನಿರ್ವಹಿಸುತ್ತಾರೆ. ಅವರು ತಮ್ಮ ಸಾಹಿತ್ಯದ ಮೂಲಕ ಒಂದು ಒಳ್ಳೆಯ ಸಮಾಜವನ್ನು ನಿರ್ಮಿಸಿ ದೇಶವು ಮುನ್ನಡೆಯಲು ಸಹಾಯವಾಗುತ್ತದೆ.ಆದ್ದರಿಂದ ದೇಶದ ಪ್ರಗತಿಯಲ್ಲಿ ಸಾಹಿತಿಗಳ ಮಹತ್ವ ಕುರಿತು ಹೇಳುವಾಗ ಈ ಮಾತು ಬರುತ್ತದೆ.

## ಗದ್ಯ ಪಾಠ – 03 ಗಾನಯೋಗಿ ಪಂಡಿತ ಪುಟ್ಟರಾಜ ಗವಾಯಿಗಳು

01) " ಅರಿ ಹರಿಯುವುದರ ಬದಲು, ಗುಡ್ಡಿನ ಹರಿದು ಕಣ್ಣು ಹೋಗಿಬಿಟ್ಟವು"

ಸಂದರ್ಭ :- ಈ ವಾಕ್ಯವನ್ನು ಶ್ರೀ ರಮೇಶಗೌಡ ಎಂ.ಕೆ ರವರು ಬರೆದ "ಗಾನಯೋಗಿ ಪಂಡಿತ ಪುಟ್ಟರಾಜ ಗವಾಯಿಗಳು" ಎನ್ನುವ ಪಾಠದಿಂದ ತೆಗೆದು ಕೊಳ್ಳಲಾಗಿದೆ. ಪುಟ್ಟರಾಜರು ತಮ್ಮ ಬಾಲ್ಯದ ನೆನಪನ್ನು ಹೇಳುವಾಗ ಈ ಮಾತು ಬರುತ್ತದೆ.

ವಿವರಣೆ :- ಪುಟ್ಟರಾಜರು ತಮ್ಮ ಬಾಲ್ಯದ ಜೀವನವನ್ನು ಕುರಿತು ಹೇಳುತ್ತಿರುವಾಗ;ಅವರು ತಮ್ಮ ಕಣ್ಣುಗಳನ್ನು ಕಳೆದುಕೊಂಡದ್ದು ಒಂದು ಸಲ ಕಣ್ಣು ಬೇನೆ ಬಂದಾಗ ನಾಟಿ ವೈದ್ಯನ ಔಷದದ ಕಾರಣದಿಂದ ಎಂದು ಹೇಳುವಾಗ ಈ ಮಾತು ಬರುತ್ತದೆ.

02) " ಮಗು ಇಂದಿನಿಂದ ಇದು ನನ್ನ ಹಾರ್ಮೋನಿಯಮ್ ಅಲ್ಲ"

ಪಾಠದಿಂದ ತೆಗೆದು ಕೊಳ್ಳಲಾಗಿದೆ. ಪುಟ್ಟರಾಜರು ತಮ್ಮ ಬಾಲ್ಯದಲ್ಲಿ ನಡೆದ ಘಟನೆಯನ್ನು ಹೇಳುವಾಗ ಈ ಮಾತು ಬರುತ್ತದೆ.

ವಿವರಣೆ :- ಪುಟ್ಟರಾಜರು ತಮ್ಮ ಬಾಲ್ಯದಲ್ಲಿ ಯಾರು ಇಲ್ಲದ ವೇಳೆ ಮಾವನ ಹಾರ್ಮೋನಿಯಂ ನುಡಿಸುತ್ತಾರೆ ಆಗ ಅವರ ಸಂಗೀತಕ್ಕೆ ಮನ ಸೋತ ದಾರಿಯ ಜನವೆಲ್ಲಾ ಒಳಗಡೆ ಕುಳಿತು ಸಂಗೀತ ಕೇಳುತ್ತಿರುವಾಗ ಹೊಲಕ್ಕೆ ಹೋದ ಅವರ ಮಾವನು ಮನೆಗೆ ಬಂದಾಗ ನಡೆದ ಘಟನೆಯನ್ನು ಕುರಿತು ಹೇಳುತ್ತಿರುವಾಗ ಈ ಮಾತು ಬರುತ್ತದೆ.

03) " ಅವನು ಬಂದರೆ ಕರೆದುಕೊಂಡು ಹೋಗು ತಾಯಿ"

ಸಂದರ್ಭ :- ಈ ವಾಕ್ಯವನ್ನು ಶ್ರೀ ರಮೇಶಗೌಡ ಎಂ.ಕೆ ರವರು ಬರೆದ "ಗಾನಯೋಗಿ ಪಂಡಿತ ಪುಟ್ಟರಾಜ ಗವಾಯಿಗಳು" ಎನ್ನುವ ಪಾಠದಿಂದ ತೆಗೆದು ಕೊಳ್ಳಲಾಗಿದೆ. ಪುಟ್ಟರಾಜರ ತಾಯಿ ತಮ್ಮ ಮಗನನ್ನು ಮನೆಗೆ ಕಳುಹಿಸುವಂತೆ ಪಂಚಾಕ್ಷರರಲ್ಲಿ ಕೇಳಿದಾಗ ಈ ಮಾತು ಬರುತ್ತದೆ.

ವಿವರಣೆ :- ಪುಟ್ಟರಾಜರ ತಾಯಿ ಬೆಳೆದು ದೊಡ್ಡವನಾದ ತಮ್ಮ ಮಗನನ್ನು ಕರೆದುಕೊಂಡು ಹೋಗಲು ಬಂದು ಕಳುಹಿಸಿಕೊಡುವಂತೆ ಪಂಚಾಕ್ಷರರಲ್ಲಿ ಬೇಡಿಕೊಳ್ಳುತ್ತಾರೆ. ಆಗ ಪಂಚಾಕ್ಷರರು ವಾತ್ಸಲ್ಯಪೂರ್ಣವಾಗಿ ತಾಐಇ ಸಿದ್ದಮ್ಮನಿಗೆ ಈ ಮೇಲಿನಂತೆ ಹೇಳುತ್ತಾರೆ.

04) " ಸಮಾಜದ ಹಣದಿಂದ ನನಗೆ ವಿದ್ಯೆ ಕೊಟ್ಟಿದ್ದಾರೆ"

ಸಂದರ್ಭ :- ಈ ವಾಕ್ಯವನ್ನು ಶ್ರೀ ರಮೇಶಗೌಡ ಎಂ.ಕೆ ರವರು ಬರೆದ "ಗಾನಯೋಗಿ ಪಂಡಿತ ಪುಟ್ಟರಾಜ ಗವಾಯಿಗಳು" ಎನ್ನುವ ಪಾಠದಿಂದ ತೆಗೆದು ಕೊಳ್ಳಲಾಗಿದೆ. ಪುಟ್ಟರಾಜರ ತಾಯಿ ಕರೆಯಲು ಬಂದಾಗ ಈ ಮಾತು ಬರುತ್ತದೆ.

ವಿವರಣೆ :- ಪುಟ್ಟರಾಜರ ತಾಯಿ ಬೆಳೆದು ದೊಡ್ಡವನಾದ ತಮ್ಮ ಮಗನನ್ನು ಕರೆದುಕೊಂಡು ಹೋಗಲು ಬಂದು ತಮ್ಮ ಮಗನಲ್ಲಿ ಮನೆಗೆ ಬರುವಂತೆ ಕೇಳಿಕೊಳ್ಳುತ್ತಾರೆ. ಆಗ ಪುಟ್ಟರಾಜರು ಅತ್ಯಂತ ಪ್ರೀತಿಯಿಂದ ಪಂಚಾಕ್ಷರರು ನೀಡಿದ ವಿದ್ಯೆಯನ್ನು ನೆನೆಯುತ್ತಾ ಈ ಮೇಲಿನಂತೆ ಹೇಳುತ್ತಾರೆ.

05) " ಅವರ ಬಾಹ್ಯ ಕಣ್ಣು ಅಳಿಸಿದ್ದರೂ ಅಂತರಂಗದ ಕಣ್ಣು ಅರಳಿತ್ತು"

ಸಂದರ್ಭ :- ಈ ವಾಕ್ಯವನ್ನು ಶ್ರೀ ರಮೇಶಗೌಡ ಎಂ.ಕೆ ರವರು ಬರೆದ "ಗಾನಯೋಗಿ ಪಂಡಿತ ಪುಟ್ಟರಾಜ ಗವಾಯಿಗಳು" ಎನ್ನುವ ಪಾಠದಿಂದ ತೆಗೆದು ಕೊಳ್ಳಲಾಗಿದೆ. ಪುಟ್ಟರಾಜರ ಸಮಾಜ ಸೇವೆಯನ್ನು ಹೇಳುವಾಗ ಈ ಮಾತು ಬರುತ್ತದೆ.

ವಿವರಣೆ :- ಪುಟ್ಟರಾಜರು ಅಂಧರಾಗಿದ್ದರೂ ವಿವಿಧ ಕ್ಷೇತ್ರಗಳಲ್ಲಿ ಅವರು ಮಾಡಿದ ಸಾಧನೆ,ಪಡೆದ ಪಾಂಡಿತ್ಯ,ಹಾಗೂ ಸಾವಿರಾರು ಅಂಧ ಮಕ್ಕಳ ಬಾಳಿಗೆ ಬೆಳಕಾಗಿ ಶೀಕ್ಷಣ,ಸಂಗೀತ,ನಾಟಕ ಹೀಗೆ ಅನೇಕ ರೀತಿಯಲ್ಲಿ ಮಾಡಿದ ಸೇವೆ,ಸಾಧನೆಯನ್ನು ಹೇಳುವಾಗ ಈ ಮಾತು ಬರುತ್ತದೆ.

### ಗದ್ಯ ಪಾಠ :- 04 ಹಕ್ಕಿಗೂಡುಗಳ ನಿಗೂಢ ಜಗತ್ತು ಕೃಪಾಕರ,ಸೇನಾನಿ,ಪುಟ್ಟಸ್ವಾಮಿ

01) "ಅವಕಾಶ ಮತ್ತು ಅದೃಷ್ಟಕ್ಕೆ ತಮ್ಮ ಸಂತತಿಯ ಉಳಿವನ್ನು ಒಡ್ಡುತ್ತವೆ"

ಸಂದರ್ಭ :- ಈ ವಾಕ್ಯವನ್ನು ಕೃಪಾಕರ & ಸೇನಾನಿ ಬರೆದ "ಹಕ್ಕಿ ಗೂಡುಗಳ ನಿಗೂಢ ಜಗತ್ತು "ಎನ್ನುವ ಪಾಠದಿಂದ ತೆಗೆದುಕೊಳ್ಳಲಾಗಿದೆ.ಹಕ್ಕಿಗಳ ಜೀವನ ಕ್ರಮವನ್ನು ಹೇಳುವಾಗ ಈ ಮಾತು ಬರುತ್ತದೆ.

ವಿವರಣೆ :- ಹಕ್ಕಿಗಳು ಮತ್ತು ಮೊಟ್ಟೆಯಿಡುವ ಇತರ ಪಕ್ಷಿಗಳು ಪ್ರಕೃತಿಯನ್ನು ಎದುರಿಸಿ ತಮ್ಮ ಜೀವನವನ್ನು ಮಾಡಬೇಕಾಗುತ್ತದೆ. ಹಾಗೂ ತಮ್ಮ ಸಂತತಿಯನ್ನು ಉಳಿಸಿಕೊಳ್ಳಲು ಹೊರಾಡಬೇಕಾಗುತ್ತದೆ ಎಂದು ಹೇಳುವಾಗ ಲೇಖಕರು ಈ ಮಾತನ್ನು ಹೆಳುತ್ತಾರೆ.

02) "ಹುಟ್ಟಿದ ಮಕ್ಕಳಿಗೆ ಬದುಕಿನ ಪಾಠ ಶಾಲೆ ಅದು"

ಸಂದರ್ಭ :- ಈ ವಾಕ್ಯವನ್ನು ಕೃಪಾಕರ & ಸೇನಾನಿ ಬರೆದ "ಹಕ್ಕಿ ಗೂಡುಗಳ ನಿಗೂಢ ಜಗತ್ತು "ಎನ್ನುವ ಪಾಠದಿಂದ ತೆಗೆದುಕೊಳ್ಳಲಾಗಿದೆ. ಹಕ್ಕಿಗಳ ಜೀವನ ಕ್ರಮ ಹೇಳುವಾಗ ಈ ಮಾತು ಬರುತ್ತದೆ.

ವಿವರಣೆ :- ಹಕ್ಕಿಗಳು ತಮ್ಮ ಗೂಡುಗಳಲ್ಲಿ ಮರಿಗಳಿಗೆ ಆಹಾರ ನೀಡಿ ಅವುಗಳಿಗೆ ಜೀವನದ ನೋವು – ನಲಿವುಗಳ ಅನುಭವವನ್ನು ,ಹಾರಾಡುವ,ಆಹಾರ ಹುಡುಕುವ ರೀತಿ ಮುಂತಾದವುಗನ್ನು ಕಲಿಸಿಕೊಡುತ್ತವೆ ಎಂದು ಪಕ್ಷಿಗಳ ಜೀವನದ ಬಗ್ಗೆ ಹೇಳುವಾಗ ಲೇಖಕರು ಈ ಮಾತನ್ನು ಹೆಳುತ್ತಾರೆ.

03) "ಇಲ್ಲಿ ವಾಸ್ತುಶಿಲ್ಪಿಯ ಕಲ್ಪನೆ ಸಾಕಾರಗೊಳ್ಳುತ್ತದೆ"

ಸಂದರ್ಭ :- ಈ ವಾಕ್ಯವನ್ನು ಕೃಪಾಕರ & ಸೇನಾನಿ ಬರೆದ "ಹಕ್ಕಿ ಗೂಡುಗಳ ನಿಗೂಢ ಜಗತ್ತು "ಎನ್ನುವ ಪಾಠದಿಂದ ತೆಗೆದುಕೊಳ್ಳಲಾಗಿದೆ. ಹಕ್ಕಿಗಳು ತಮ್ಮ ಗೂಡನ್ನು ನಿರ್ಮಿಸಿಕೊಳ್ಳುವ ಬಗ್ಗೆ ಹೇಳುವಾಗ ಈ ಮಾತು ಬರುತ್ತದೆ.

ವಿವರಣೆ :- ಹಕ್ಕಿಗಳು ತಮ್ಮ ಗೂಡುಗಳನ್ನು ನಿರ್ಮಿಸಲು ಸ್ಥಳವನ್ನು ಆಯ್ಕೆ ಮಾಡುವಾಗ ಮತ್ತು ಗೂಡನ್ನು ನಿರ್ಮಿಸುವಾಗ ಅವುಗಳ ಬುದ್ಧಿವಂತಿಕೆಯನ್ನು ಹಾಗೂ ಅವು ಗೂಡಿನ ಸ್ವಚ್ಚತೆಗೆ ಕೊಡುವ ಗಮನವನ್ನು ಕುರಿತು ಹೇಳುವಾಗ ಲೇಖಕರು ಈ ಮಾತನ್ನು ಹೆಳುತ್ತಾರೆ.

## ಗದ್ಯಪಾಠ -5 ಕಾಫೀ ಕಪ್ಪು ಡಾ – ಗುರುರಾಜ ಕರ್ಜಗಿ

01) " ನಿಜವಾದ ಶೀಕ್ಷಕನಿಗೆ ಸ್ವಂತ ಮಕ್ಕಳಿಗಿಂತ ವಿದ್ಯಾರ್ಥಿಗಳೇ ಹೆಚ್ಚು ಪ್ರೀಯರಾಗುತ್ತಾರೆ"

ಸಂದರ್ಭ :- ಈ ವಾಕ್ಯವನ್ನು ಗುರುರಾಜ ಕರ್ಜಗಿ ಯವರು ಬರೆದ ಕಾಫೀ ಕಪ್ಪು ಎನ್ನುವ ಪಾಠದಿಂದ ತೆಗೆದು ಕೊಳ್ಳಲಾಗಿದೆ. ಶಿಕ್ಷಕ ಮತ್ತು ವಿದ್ಯಾರ್ಥಿಗಳ ಸಂಬಂಧ ಕುರಿತು ಹೇಳುವಾಗ ಈ ಮಾತು ಬರುತ್ತದೆ.

ವಿವರಣೆ :- ಗುರು – ಶಿಷ್ಯರ ನಡುವಿನ ಸಂಬಂಧ ಅತ್ಯಂತ ಶ್ರೇಷ್ಟವಾದುದು. ಶಿಕ್ಷಕರು ತನ್ನ ವಿದ್ಯಾರ್ಥಿಗಳ ಯಶಸ್ಸಿನಲ್ಲಿ ಸಂತೋಷವನ್ನು ಕಾಣುತ್ತಾರೆ.ಎಂದು ಗುರು ಶಿಷ್ಯರ ಸಂಬಂಧದ ಮಹತ್ವ ಕುರಿತು ಹೇಳುವಾಗ ಈ ಮಾತನ್ನು ಲೇಖಕರು ಹೇಳುತ್ತಾರೆ.

02) ಸಂದರ್ಭ :- ಈ ವಾಕ್ಯವನ್ನು ಗುರುರಾಜ ಕರ್ಜಗಿ ಯವರು ಬರೆದ ಕಾಫೀ ಕಪ್ಪು ಎನ್ನುವ ಪಾಠದಿಂದ ತೆಗೆದು ಕೊಳ್ಳಲಾಗಿದೆ. ಶಿಕ್ಷಕರು ತಮ್ಮ ಮನೆಗೆ ಬಂದ ಹಳೇಯ ವಿದ್ಯಾರ್ಥಿಗಳೊಂದಿಗೆ ಮಾತನಾಡುತ್ತಿರುವಾಗ ಈ ಮಾತು ಬರುತ್ತದೆ.

ವಿವರಣೆ :- ಗುರು – ಶಿಷ್ಯರ ನಡುವಿನ ಸಂಬಂಧ ಅತ್ಯಂತ ಶ್ರೇಷ್ಟವಾದುದು. ಶಿಕ್ಷಕರು ತನ್ನ ಮನೆಗೆ ಬಂದ ಹಳೆಯ ವಿದ್ಯಾರ್ಥಿಗಳ ಯೋಗಕ್ಷೇಮವನ್ನು ವಿಚಾರಿಸುತ್ತಾ ಅವರಿಗೆ ಕುಡಿಯಲು ಕಾಫೀ ಮಾಡಲು ಹೋಗುವಾಗ ಈ ಮಾತನ್ನು ಲೇಖಕರು ಹೇಳುತ್ತಾರೆ.

03) " ನೀವೇ ಕಾಪೀ ಹಾಕಿಕೊಳ್ಳಿ ಆಮೇಲೆ ಕುಳಿತು ಮಾತನಾಡೋಣ"

ಸಂದರ್ಭ :- ಈ ವಾಕ್ಯವನ್ನು ಗುರುರಾಜ ಕರ್ಜಗಿ ಯವರು ಬರೆದ ಕಾಫೀ ಕಪ್ಪು ಎನ್ನುವ ಪಾಠದಿಂದ ತೆಗೆದು ಕೊಳ್ಳಲಾಗಿದೆ. ಶಿಕ್ಷಕರು ತಮ್ಮ ಮನೆಗೆ ಬಂದ ವಿದ್ಯಾರ್ಥಿಗಳಿಗೆ ಮಾಡಿ ತಂದ ಕಾಫೀಯನ್ನು ಹಾಕಿಕೊಳ್ಳಲು ಹೇಳುತ್ತಾ ಈ ಮಾತು ಬರುತ್ತದೆ.

ವಿವರಣೆ :- ಗುರು – ಶಿಷ್ಯರ ನಡುವಿನ ಸಂಬಂಧ ಅತ್ಯಂತ ಶ್ರೇಷ್ಟವಾದುದು. ಶಿಕ್ಷಕರು ತನ್ನ ವಿದ್ಯಾರ್ಥಿಗಳ ಯೋಗಕ್ಷೇಮವನ್ನು ವಿಚಾರಿಸುತ್ತ ಅವರಿಗೆ ಕುಡಿಯಲು ಕಾಫೀಯನ್ನು ತಂದು ಟಿಫಾಯಿಯ ಮೇಲಿಟ್ಟು ತಮಗೆ ಬೇಕಾದ ಕಾಫೀಯನ್ನು ತಾವೇ ಹಾಕಿಕೊಳ್ಳಬೇಕು ಎನ್ನುವಾಗ ಈ ಮಾತನ್ನು ಲೇಖಕರು ಹೇಳುತ್ತಾರೆ.

04) "ನೀವು ಗಮನಿಸಿದ್ದೀರಾ? ನಿವೆಲ್ಲಾ ಎಂಥ ಕಪ್ಪುಗಳನ್ನು ಆರಿಸಿಕೊಂಡಿದ್ದೀರಿ?"

ಸಂದರ್ಭ :- ಈ ವಾಕ್ಯವನ್ನು ಗುರುರಾಜ ಕರ್ಜಗಿ ಯವರು ಬರೆದ ಕಾಫೀ ಕಪ್ಪು ಎನ್ನುವ ಪಾಠದಿಂದ ತೆಗೆದು ಕೊಳ್ಳಲಾಗಿದೆ. ಶಿಕ್ಷಕರು ತಮ್ಮ ಮನೆಗೆ ಬಂದ ವಿದ್ಯಾರ್ಥಿಗಳಿಗೆ ಮಾಡಿ ತಂದ ಕಾಫೀಯನ್ನು ಕುಡಿಯುವಾಗ ಈ ಮಾತು ಬರುತ್ತದೆ.

ವಿವರಣೆ :- ಶಿಕ್ಷಕರು ತನ್ನ ವಿದ್ಯಾರ್ಥಿಗಳ ಯೋಗಕ್ಷೇಮವನ್ನು ವಿಚಾರಿಸುತ್ತ ಅವರಿಗೆ ಕುಡಿಯಲು ಕಾಫೀಯನ್ನು ತಂದು ಟಿಫಾಯಿಯ ಮೇಲಿಟ್ಟು ತಮಗೆ ಬೇಕಾದ ಕಾಫೀಯನ್ನು ತಾವೇ ಹಾಕಿಕೊಳ್ಳಬೇಕು ಎಂದಾಗ ವಿದ್ಯಾರ್ಥಿಗಳು ಆಯ್ಕೆ ಮಾಡಿಕೊಂಡ ಕಪ್ಪುಗಳನ್ನು ಕುರಿತು ಹೇಳುವಾಗ ಈ ಮಾತನ್ನು ಲೇಖಕರು ಹೇಳುತ್ತಾರೆ.

05) "ಭಗವಂತ ನಮಗೆ ಜೀವನ ಎನ್ನುವ ಕಾಫೀ ಕೊಟ್ಟಿದ್ದಾನೆ"

ಸಂದರ್ಭ :- ಈ ವಾಕ್ಯವನ್ನು ಗುರುರಾಜ ಕರ್ಜಗಿ ಯವರು ಬರೆದ ಕಾಫೀ ಕಪ್ಪು ಎನ್ನುವ ಪಾಠದಿಂದ ತೆಗೆದು ಕೊಳ್ಳಲಾಗಿದೆ. ಶಿಕ್ಷಕರು ತಮ್ಮ ಮನೆಗೆ ಬಂದ ವಿದ್ಯಾರ್ಥಿಗಳು ಕಾಫೀಯನ್ನು ಕುಡಿಯುತ್ತಿರುವಾಗ ಜೀವನದ ಬಗ್ಗೆ ಹೇಳುವಾಗ ಈ ಮಾತು ಬರುತ್ತದೆ.

ವಿವರಣೆ :- ಶಿಕ್ಷಕರು ತನ್ನ ವಿದ್ಯಾರ್ಥಿಗಳ ಯೋಗಕ್ಷೇಮವನ್ನು ವಿಚಾರಿಸುತ್ತ ಅವರಿಗೆ ಕುಡಿಯಲು ಕಾಫೀಯನ್ನು ತಂದು ಕೊಡುತ್ತಾರೆ ಆಗ ವಿದ್ಯಾರ್ಥಿಗಳು ಕಾಫೀಯನ್ನು ಕುಡಿಯುತ್ತಿರುವಾಗ ಜೀವನದ ಮಹತ್ವವನ್ನು ಕುರಿತು ಹೇಳುವಾಗ ಈ ಮಾತನ್ನು ಲೇಖಕರು ವಿದ್ಯಾರ್ಥಿಗಳಿಗೆ ಹೇಳುತ್ತಾರೆ.

**ಗದ್ಯಪಾಠ – 06 ಗಂಗೆಯಲ್ಲಿ ದೀಪಮಾಲೆ ಶ್ರೀ ಜಿ.ಎಸ್.ಶಿವರುದ್ರಪ್ಪ**

01) "ಪುರಾಣ,ಚರಿತ್ರೆ ಹಾಗೂ ವಾಸ್ತವಗಳು ಒಂದರ ಜತೆಗೊಂದು ಬಿಡಿಸಲಾಗದಂತೆ ಹೆಣೆದುಕೊಂಡಿವೆ"

ಸಂದರ್ಭ :- ಈ ವಾಕ್ಯವನ್ನು ಶ್ರೀ ಜಿ.ಎಸ್.ಶಿವರುದ್ರಪ್ಪನವರು ಬರೆದ ಗಂಗೆಯಲ್ಲಿ ದೀಪಮಾಲೆ ಎನ್ನುವ ಪಾಠದಿಂದ ತೆಗೆದು ಕೊಳ್ಳಲಾಗಿದೆ. ಹರಿದ್ವಾರದ ಬೀದಿಗಳಲ್ಲಿ ಪೌರಾಣಿಕ ಸ್ಥಳಗಳನ್ನು ನೋಡಿದಾಗ ಆದ ಅನುಭವವನ್ನು ಹೇಳುವಾಗ ಲೇಖಕರು ಈ ಮಾತನ್ನು ಹೇಳುತ್ತಾರೆ.

ವಿವರಣೆ :- ಲೇಖಕರು ಹರಿದ್ವಾರದ ಬೀದಿಗಳಲ್ಲಿ ಹೊರಟಿರುವಾಗ ಅಲ್ಲಿನ ವೈವಿದ್ಯಮಯ ಸೌಂದರ್ಯವನ್ನು ಕಂಡು ನಮ್ಮ ಪೌರಾಣಿಕ ಇತಿಹಾಸವೇ ನೆನಪಿಸಿದಂತಿದೆ ಎಂದು ಅಲ್ಲಿನ ಸನ್ನಿವೇಶವನ್ನು ಕುರಿತಾಗಿ ತಮ್ಮ ಅನುಭವವನ್ನು ವಿವರಿಸುವಾಗ ಈ ಮೇಲಿನಂತೆ ಹೇಳುವರು.

02) " ಉತ್ತರದ ಎತ್ತರಗಳಿಂದ ಇಳಿದ ಗಂಗೆ ಬಯಲನ್ನು ಪ್ರವೇಶಿಸುವ ದ್ವಾರವೂ ಇದೇ"

ಸಂದರ್ಭ :- ಈ ವಾಕ್ಯವನ್ನು ಶ್ರೀ ಜಿ.ಎಸ್.ಶಿವರುದ್ರಪ್ಪನವರು ಬರೆದ ಗಂಗೆಯಲ್ಲಿ ದೀಪಮಾಲೆ ಎನ್ನುವ ಪಾಠದಿಂದ ತೆಗೆದು ಕೊಳ್ಳಲಾಗಿದೆ. ಹರಿದ್ವಾರದ ಬೀದಿಗಳಲ್ಲಿ ಪೌರಾಣಿಕ ಸ್ಥಳಗಳನ್ನು ನೋಡಿದಾಗ ಆದ ಅನುಭವವನ್ನು ಹೇಳುವಾಗ ಲೇಖಕರು ಈ ಮಾತನ್ನು ಹೇಳುತ್ತಾರೆ.

ವಿವರಣೆ :- ಲೇಖಕರು ಹರಿದ್ವಾರ ನಗರಕ್ಕಿರುವ ಪ್ರಾಚೀನ ಹೆಸರುಗಳನ್ನು ತಿಳಿಸುತ್ತಾ ಅದಕ್ಕೂ ಹಿಂದಿನ ಐತಿಹಾಸಿಕ ಘಟನೆಗಳಲ್ಲಿ ಒಂದಾದ ಭಗಿರಥ ಮಹರ್ಷಿಯ ತಪಸ್ಸಿನ ಫಲವಾಗಿ ಗಂಗೆಯು ಹಿಮಾಲಯದಿಂದ ಹರಿದು ಬಂದು ಬಯಲನ್ನು ಪ್ರವೇಶಿಸುವ ಕಾರಣ ಹರಿದ್ವಾರಕ್ಕಿರುವ ಹೆಸರಿನ ಕುರಿತು ವಿವರಿಸುವಾಗ ಈ ಮೇಲಿನಂತೆ ಹೇಳುವರು.

03) " ದೀಪಗಳನ್ನು ತೇಲಿ ಬಿಡುವ ಈ ಆಟ ನಡೆದೇ ಇತ್ತು"

ಸಂದರ್ಭ :- ಈ ವಾಕ್ಯವನ್ನು ಶ್ರೀ ಜಿ.ಎಸ್.ಶಿವರುದ್ರಪ್ಪನವರು ಬರೆದ ಗಂಗೆಯಲ್ಲಿ ದೀಪಮಾಲೆ ಎನ್ನುವ ಪಾಠದಿಂದ ತೆಗೆದು ಕೊಳ್ಳಲಾಗಿದೆ. ಗಂಗಾ ನದಿಯಲ್ಲಿ ತೇಲಿ ಬಿಟ್ಟ ದೀಪಗಳ ಕುರಿತು ಹೇಳುವಾಗ ಲೇಖಕರು ಈ ಮಾತನ್ನು ಹೇಳುತ್ತಾರೆ.

ವಿವರಣೆ :- ಲೇಖಕರು ಗಂಗಾ ನದಿಯಲ್ಲಿ ನಡೆಯುವ ದೀಪಾರತಿಯ ಪೂಜೆಯ ಸಂದರ್ಭದಲ್ಲಿ ಗಂಗಾ ನದಿಯಲ್ಲಿ ತೇಲಿಬಿಟ್ಟ ಅಸಂಖ್ಯಾತ ದೀಪಗಳು ನದಿಯಲ್ಲಿ ತೇಲಿ ಹೋಗುತ್ತಿರುವಾಗ ಅದರ ಸೌಂದರ್ಯವನ್ನು ಕಂಡ ಲೇಖಕರು ಈ ಮೇಲಿನಂತೆ ಹೇಳುವರು.

04) "ಈ ಅಪೂರ್ವ ದೃಶ್ಯ ಅವರ್ಣನೀಯವಾದದ್ದು"

ಸಂದರ್ಭ :- ಈ ವಾಕ್ಯವನ್ನು ಶ್ರೀ ಜಿ.ಎಸ್.ಶಿವರುದ್ರಪ್ಪನವರು ಬರೆದ ಗಂಗೆಯಲ್ಲಿ ದೀಪಮಾಲೆ ಎನ್ನುವ ಪಾಠದಿಂದ ತೆಗೆದು ಕೊಳ್ಳಲಾಗಿದೆ. ಗಂಗಾ ನದಿಯಲ್ಲಿ ನಡೆದ ದೀಪಾರತಿಯ ಕುರಿತು ಹೇಳುವಾಗ ಲೇಖಕರು ಈ ಮಾತನ್ನು ಹೇಳುತ್ತಾರೆ.

ವಿವರಣೆ :- ಲೇಖಕರು ಗಂಗಾ ನದಿಯ ತೀರದಲ್ಲಿ ಪೂಜೆ ನಡೆಯುವ ಬಗೆ ಬಗೆಯ ದೀಪಾರತಿಯ ಪೂಜೆಯ ಸಂದರ್ಭದಲ್ಲಿ ಗಂಗಾ ನದಿಯಲ್ಲಿ ಅವುಗಳ ಪ್ರತಿಫಲನದ ಸೌಂದರ್ಯ ಅಸಂಖ್ಯಾತ ದೀಪಗಳು ನದಿಯಲ್ಲಿ ತೇಲಿ ಹೋಗುತ್ತಿರುವಾಗ ಅದರ ಮನಮೋಹಕ ನೋಟವನ್ನು ಕಂಡ ಲೇಖಕರು ಈ ಮೇಲಿನಂತೆ ಹೇಳುವರು.

## ಗದ್ಯ ಪಾಠ – 07 ನನ್ನಗೋಪಾಲ ಕುವೆಂಪು

01) " ಸಾವಿರಾರು ಮಳೆಬಿಲ್ಲುಗಳು ಸೇರಿ ಕುಣಿದಂತೆ ತೋರುತ್ತಿತ್ತು"

ಸಂದರ್ಭ :- ಈ ವಾಕ್ಯವನ್ನು ಕುವೆಂಪು ರವರು ಬರೆದ ನನ್ನಗೋಪಾಲ ಎನ್ನುವ ಪಾಠದಿಂದ ತೆಗೆದುಕೊಳ್ಳಲಾಗಿದೆ. ಗೋಪಾಲನು ತನ್ನ ತಾಯಿಯ ಬಳಿ ಬನದ ಸೌಂದರ್ಯ ಹೇಳುವಾಗ ಈ ಮಾತು ಬರುತ್ತದೆ.

ವಿವರಣೆ :- ಗೋಪಾಲನು ತನ್ನ ತಾಯಿಯ ದೇವರ ಪೂಜೆಗಾಗಿ ಹೂವುಗಳನ್ನು ತರಲು ಬನಕ್ಕೆ ಹೋದಾಗ ಅಲ್ಲಿ ತಾನು ಕಂಡ ವಿವಿಧ ಜಾತಿಯ ಹೂಗಳ ಸುಂದರವಾದ ನೋಟವನ್ನು ಕಂಡು ಅದನ್ನು ತನ್ನ ತಾಯಿಯ ಮುಂದೆ ವರ್ಣಿಸುವಾಗ ಈ ಮಾತು ಬರುತ್ತದೆ.

02) " ಆ ಗೋಪಾಲ ಕೊಡಬೇಕು ನಾವು ಉಣ್ಣಬೇಕು"

ಸಂದರ್ಭ :- ಈ ವಾಕ್ಯವನ್ನು ಕುವೆಂಪು ರವರು ಬರೆದ ನನ್ನಗೋಪಾಲ ಎನ್ನುವ ಪಾಠದಿಂದ ತೆಗೆದುಕೊಳ್ಳಲಾಗಿದೆ. ಗೋಪಾಲನ ತಾಯಿಯು ತಮ್ಮ ಬಡತನದ ಜೀವನವನ್ನು ಕುರಿತು ಹೇಳುವಾಗ ಈ ಮಾತು ಬರುತ್ತದೆ.

ವಿವರಣೆ :- ಗೋಪಾಲನು ಶಾಲೆಗೆ ಹೋಗುವಾಗ ತನಗೆ ಹೊಸ ಪಂಚೆಯನ್ನು ಕೊಡುವಂತೆ ಕೇಳಿದಾಗ ಗೋಪಾಲನ ತಾಯಿಯು ತನ್ನ ಬಡತನದ ಜೀವನವನ್ನು ಗೋಪಾಲನಿಗೆ ಹೇಳುತ್ತಾ ಕೃಷ್ಣನನ್ನು ಭಕ್ತಿಯಿದ ಬೇಡಿಕೊಂಡು ಈ ಮಾತನ್ನು ಹೇಳುತ್ತಾಳೆ.

03) " ಆ ಮಗುವಿಗೆ ಬಡತನದ ಬವಣೆಯೇಕೆ?"

ಸಂದರ್ಭ :- ಈ ವಾಕ್ಯವನ್ನು ಕುವೆಂಪು ರವರು ಬರೆದ ನನ್ನಗೋಪಾಲ ಎನ್ನುವ ಪಾಠದಿಂದ ತೆಗೆದುಕೊಳ್ಳಲಾಗಿದೆ. ಗೋಪಾಲನ ತಾಯಿಯು ತಮ್ಮ ಬಡತನದ ಜೀವನವನ್ನು ಕುರಿತು ಹೇಳುವಾಗ ಈ ಮಾತು ಬರುತ್ತದೆ.

ವಿವರಣೆ :- ಗೋಪಾಲನು ಶಾಲೆಗೆ ಹೋಗುವಾಗ ತನಗೆ ಹೊಸ ಪಂಚೆಯನ್ನು ಕೊಡುವಂತೆ ಕೇಳಿದಾಗ ಗೋಪಾಲನ ತಾಯಿಯು ತನ್ನ ಬಡತನದ ಜೀವನವನ್ನು ನೆನಪಿಸಿಕೊಂಡು ಗೋಪಾಲನಿಗೆ ಇಲ್ಲಿಯವರೆಗೂ ಬಡತನದ ಕಷ್ಟವನ್ನು ಹೇಳಿಕೊಂಡಿಲ್ಲ ಈಗ ತನ್ನ ಮಗನಿಗೆ ಆ ನೋವು ಬೇಡವೆಂದು ಕೃಷ್ಣನನ್ನು ಭಕ್ತಿಯಿದ ಬೇಡಿಕೊಂಡು ಈ ಮಾತನ್ನು ಹೇಳುತ್ತಾಳೆ.

04) "ಅಮ್ಮನ ಮಾತು ಸುಳ್ಳಾಗಲಾರದು"

ಸಂದರ್ಭ :- ಈ ವಾಕ್ಯವನ್ನು ಕುವೆಂಪು ರವರು ಬರೆದ ನನ್ನಗೋಪಾಲ ಎನ್ನುವ ಪಾಠದಿಂದ ತೆಗೆದುಕೊಳ್ಳಲಾಗಿದೆ. ಗೋಪಾಲನು ಶಾಲೆಯಿಂದ ಸಾಯಂಕಾಲ ಹಿಂದಿರುಗುವಾಗ ಆದ ಘಟನೆಯನ್ನು ಹೇಳುವಾಗ ಈ ಮಾತು ಬರುತ್ತದೆ.

ವಿವರಣೆ :- ಗೋಪಾಲನು ಶಾಲೆಯಿಂದ ಸಾಯಂಕಾಲ ಮನೆಗೆ ಬರುವಾಗ ಕಾಡಿನಲ್ಲಿ ಭಯವಾಗುತ್ತದೆ ಆಗ ತನ್ನ ತಾಯಿ ಹೇಳಿದಂತೆ ತನ್ನ ಅಣ್ಣನನ್ನು ಕೂಗಿ ಕರೆಯುತ್ತಾನೆ ಆಗ ಅವನು ಬಾರದಿದ್ದಾಗ ಭಯಗೊಂಡ ಗೋಪಾಲನು ತನ್ನ ತಾಯಿಯು ಹೇಳಿದ ಮಾತು ನಿಜವೆಂದು ಹೇಳುವಾಗ ಈ ಮಾತು ಬರುತ್ತದೆ.

## ಗದ್ಯ ಪಾಠ :- 08 ಸೌಜನ್ಯ ಹಾ.ಮಾ.ನಾಯಕ

01) "ವ್ಯಕ್ತಿಯ ನಡತೆ ನಡೆವಳಿಕೆಗಳು ಚಿತ್ರ ವಿಚಿತ್ರ"

ಸಂದರ್ಭ :- ಈ ವಾಕ್ಯವನ್ನು ಹಾ.ಮಾ.ನಾಯಕ ರವರು ಬರೆದ ಸೌಜನ್ಯ ಎನ್ನುವ ಪಾಠದಿಂದ ತೆಗೆದುಕೊಳ್ಳಲಾಗಿದೆ. ಇಂದಿನ ಜನರ ಜೀವನದ ಒತ್ತಡಗಳ ನಡುವೆ ವರ್ತನೆಗಳ ಕುರಿತು ಹೇಳುವಾಗ ಈ ಮಾತನ್ನು ಹೇಳುವರು.

ವಿವರಣೆ :- ಮನುಷ್ಯನ ಜೀವನದಲ್ಲಿ ಸಾರ್ಥಕವಾಗಬೇಕಾದರೇ ಸದ್ಗುಣಗಳು ಅವಶ್ಯವಾಗಿರಬೇಕು ಆದರೇ ಇಂದಿನ ಒತ್ತಡದ ಬದುಕಿನಲ್ಲಿ ಸಮಸ್ಯೇಗಳ ನಡುವೆ ಸಿಲುಕಿದ ಮನುಷ್ಯರು ಸಹನೆ ಮತ್ತು ತಾಳ್ಮೆಯಂತಹ ಗುಣಗಳನ್ನು ಕಳೆದುಕೊಂಡಿದ್ದಾರೆ ಅವುಗಳನ್ನು ಕಳೆದು ಕೊಳ್ಳದೆ ಜೀವನವನ್ನು ಸಾರ್ಥಕಪಡಿಸಿಕೊಳ್ಳಬೇಕೆಂದು ಹೇಳುವಾಗ ಈ ಮಾತು ಬರುತ್ತದೆ.

02) "ಹೇಳುವ ಸತ್ಯವನ್ನು ಪ್ರಿಯವಾಗಿ ಹೇಳು"

ಸಂದರ್ಭ :- ಈ ವಾಕ್ಯವನ್ನು ಹಾ.ಮಾ.ನಾಯಕ ರವರು ಬರೆದ ಸೌಜನ್ಯ ಎನ್ನುವ ಪಾಠದಿಂದ ತೆಗೆದುಕೊಳ್ಳಲಾಗಿದೆ. ಇಂದಿನ ಜನರ ಜೀವನದ ನಡೆ ನುಡಿಗಳ ಕುರಿತು ಸೌಜನ್ಯದ ಮಹತ್ವ ಕುರಿತು ಹೇಳುವಾಗ ಈ ಮಾತನ್ನು ಹೇಳುವರು.

ವಿವರಣೆ :- ಮನುಷ್ಯನ ಜೀವನದಲ್ಲಿ ಸಾರ್ಥಕವಾಗಬೇಕಾದರೇ ಸದ್ಗುಣಗಳು ಅವಶ್ಯವಾಗಿರಬೇಕು ಆದರೇ ಇಂದಿನ ಒತ್ತಡದ ಬದುಕಿನಲ್ಲಿ ಸಮಸ್ಯೇಗಳ ನಡುವೆ ಸಿಲುಕಿದ ಮನುಷ್ಯರು ಸಹನೆ ಮತ್ತು ತಾಳ್ಮೆಯಂತಹ ಗುಣಗಳನ್ನು ಕಳೆದುಕೊಂಡಿದ್ದಾರೆ ಅವುಗಳನ್ನು ಕಳೆದು ಕೊಳ್ಳದೆ ಸೌಜನ್ಯಶೀಲ ಗುಣಗಳನ್ನು ಅಳವಡಿಸಿಕೊಂಡು ಜೀವನವನ್ನು ಸಾರ್ಥಕಪಡಿಸಿಕೊಳ್ಳಬೇಕೆಂದು ಹೇಳುವಾಗ ಈ ಮಾತು ಬರುತ್ತದೆ.

03)"ಸೌಜನ್ಯದಿಂದ ನಮಗೆ ನಷ್ಟವಿಲ್ಲದೆ ಬೇರೆಯವರಿಗೆ ಲಾಭವಾಗುತ್ತದೆ"

ಸಂದರ್ಭ :- ಈ ವಾಕ್ಯವನ್ನು ಹಾ.ಮಾ.ನಾಯಕ ರವರು ಬರೆದ ಸೌಜನ್ಯ ಎನ್ನುವ ಪಾಠದಿಂದ ತೆಗೆದುಕೊಳ್ಳಲಾಗಿದೆ. ಇಂದಿನ ಜನರ ಜೀವನದ ನಡೆ ನುಡಿಗಳ ಕುರಿತು ಸೌಜನ್ಯದ ಮಹತ್ವ ಕುರಿತು ಹೇಳುವಾಗ ಈ ಮಾತನ್ನು ಹೇಳುವರು.

ವಿವರಣೆ :- ಮನುಷ್ಯನ ಜೀವನದಲ್ಲಿ ಸಾರ್ಥಕವಾಗಬೇಕಾದರೇ ಸದ್ಗುಣಗಳು ಅವಶ್ಯವಾಗಿರಬೇಕು ಇಂದಿನ ಒತ್ತಡದ ಜೀವನದಲ್ಲಿ ಅವುಗಳನ್ನು ಕಳೆದು ಕೊಳ್ಳದೆ ಸೌಜನ್ಯಶೀಲ ಗುಣಗಳನ್ನು ಅಳವಡಿಸಿಕೊಳ್ಳುವುದರ ಮೂಲಕ ಮತ್ತೊಬ್ಬರ ಬದುಕಿನಲ್ಲಿ ಸಹಾಯವಾಗುವುದರ ಮೂಲಕ ಜೀವನವನ್ನು ಸಾರ್ಥಕಪಡಿಸಿಕೊಳ್ಳಬೇಕೆಂದು ಹೇಳುವಾಗ ಈ ಮಾತು ಬರುತ್ತದೆ.

# ಪದ್ಯ ಬಾಗ

**ಪದ್ಯಪಾಠ – 01** **ಬೋಧಿ ವೃಕ್ಷದ ಹಾಡು** **ಬಸವರಾಜ ಸಬರದ**

01) "ಗೊತ್ತು ಗುರಿ ಇಲ್ಲದೆ ಕತ್ತಲಲ್ಲಿ ನಡೆದನು"

ಸಂದರ್ಭ :- ಈ ವಾಕ್ಯವನ್ನು ಬಸವರಾಜ ಸಬರದ ರವರು ಬರೆದ ಬೋಧಿವೃಕ್ಷದ ಹಾಡು ಎನ್ನುವ ಪಾಠದಿಂದ ತೆಗೆದುಕೊಳ್ಳಲಾಗಿದೆ.ಸಿದ್ಧಾರ್ಥನು ವೈರಾಗಿಯಾದ ಬಗ್ಗೆ ಹೇಳುವಾಗ ಈ ಮಾತು ಬರುತ್ತದೆ.

ವಿವರಣೆ :- ಸಿದ್ಧಾರ್ಥನು ತನ್ನ ಲೌಕಿಕ ಬದುಕಿನ ಎಲ್ಲವನ್ನು ತ್ಯಾಗ ಮಾಡಿ ವೈರಾಗಿಯಾಗಿ ಮಧ್ಯರಾತ್ರಿ ಗೊತ್ತು ಗುರಿ ಇಲ್ಲದಂತೆ ತಪಸ್ಸನ್ನು ಮಾಡಲು ಹೊರಟ ರೀತಿಯನ್ನು ವಿವರಿಸುತ್ತಿರುವಾಗ ಕವಿಯು ಈ ಮಾತನ್ನು ಬಳಸುತ್ತಾರೆ.

02) " ಕಾಡು ತುಂಬ ಪ್ರೀತಿ ಹೊಳೆಯು ಕೋಡಿಯಂತೆ ಹರಿಯಿತು"

ಸಂದರ್ಭ :- ಈ ವಾಕ್ಯವನ್ನು ಬಸವರಾಜ ಸಬರದ ರವರು ಬರೆದ ಬೋಧಿವೃಕ್ಷದ ಹಾಡು ಎನ್ನುವ ಪಾಠದಿಂದ ತೆಗೆದುಕೊಳ್ಳಲಾಗಿದೆ.ಸಿದ್ಧಾರ್ಥನು ಬುದ್ಧನಾದ ಸಂದರ್ಭದ ಬಗ್ಗೆ ಹೇಳುವಾಗ ಈ ಮಾತು ಬರುತ್ತದೆ.

ವಿವರಣೆ :- ಸಿದ್ಧಾರ್ಥನು ತನ್ನ ಲೌಕಿಕ ಬದುಕಿನ ಎಲ್ಲವನ್ನು ತ್ಯಾಗ ಮಾಡಿ ವೈರಾಗಿಯಾಗಿ ಕಾಡಿನಲ್ಲಿ ತಪಸ್ಸನ್ನು ಮಾಡಿ ಅವನಿಗೆ ಜ್ಞಾನೋದಯವಾದಾಗ ಕಾಡಿನಲ್ಲಿ ನಡೆದ ಬದಲಾವಣೆಯನ್ನು ಕುರಿತು ವಿವರಿಸುತ್ತಿರುವಾಗ ಕವಿಯು ಈ ಮಾತನ್ನು ಬಳಸುತ್ತಾರೆ.

03) "ಪ್ರೀತಿಯನ್ನು ಹುಡುಕಿಕೊಂಡು ಜನರ ಕಡೆಗೆ ಬಂದನು"

ಸಂದರ್ಭ :- ಈ ವಾಕ್ಯವನ್ನು ಬಸವರಾಜ ಸಬರದ ರವರು ಬರೆದ ಬೋಧಿವೃಕ್ಷದ ಹಾಡು ಎನ್ನುವ ಪಾಠದಿಂದ ತೆಗೆದುಕೊಳ್ಳಲಾಗಿದೆ. ಸಿದ್ಧಾರ್ಥನು ಬುದ್ಧನಾದ ನಂತರ ನಡೆದ ಘಟನೆಯನ್ನು ಹೇಳುವಾಗ ಈ ಮಾತು ಬರುತ್ತದೆ.

ವಿವರಣೆ :- ಸಿದ್ಧಾರ್ಥನು ತನ್ನ ಲೌಕಿಕ ಬದುಕಿನ ಎಲ್ಲವನ್ನು ತ್ಯಾಗ ಮಾಡಿ ವೈರಾಗಿಯಾಗಿ ತಪಸ್ಸನ್ನು ಆಚರಿಸಿ ಬುದ್ಧನಾದ ಮೇಲೆ ಅವನು ಜೀವನದ ಸತ್ಯವನ್ನು ಅರಿತುಕೊಂಡು ಜನರ ಪ್ರೀತಿಯನ್ನು ಹುಡುಕಿಕೊಂಡು ನಾಡಿನೆಡೆಗೆ ಬಂದ ರೀತಿಯನ್ನು ವಿವರಿಸುತ್ತಿರುವಾಗ ಕವಿಯು ಈ ಮಾತನ್ನು ಬಳಸುತ್ತಾರೆ.

**ಪದ್ಯಪಾಠ – 02** **ಸವಿಚೈತ್ರ** **ಬಸವರಾಜ ಸಾದರ**

01) "ನೆಲದಮ್ಮ ನವವಧುವೆ ಆದಳಿಂತು!"

ಸಂದರ್ಭ :- ಈ ವಾಕ್ಯವನ್ನು ಬಸವರಾಜ ಸಾದರ ರವರು ಬರೆದ ಸವಿ ಚೈತ್ರ ಎನ್ನುವ ಪದ್ಯ ಪಾಠದಿಂದ ತೆಗೆದು ಕೊಳ್ಳಲಾಗಿದೆ .ಚೈತ್ರ ಮಾಸದ ವೇಳೆಯಲ್ಲಿ ಪ್ರಕೃತಿಯಲ್ಲಿ ಆಗುವ ಬದಲಾವಣೆಯನ್ನು ವಿವರಿಸುವಾಗ ಕವಿಯು ಈ ಮಾತನ್ನು ಹೇಳುತ್ತಾರೆ.

ವಿವರಣೆ :- ಯುಗಾದಿಯ ಸಂದರ್ಭದಲ್ಲಿ ಪ್ರಕೃತಿಯು ತನ್ನ ಹಳೆಯದನ್ನು ಕಳೆದು ಹೊಸ ಚಿಗುರು,ಹೂವು, ಹೀಗೆ ಹೊಸ ರೂಪವನ್ನು ತಳೆಯುತ್ತದೆ. ಆ ಸೌಂಧರ್ಯವನ್ನು ಹೊತ್ತ ಭೂಮಾತೆಯು ಮಧು ಮಗಳು ಸಿಂಗಾರಗೊಂಡ ರೀತಿಯಲ್ಲಿ ಕಾಣಿಸುತ್ತಾಳೆ ಎಂದು ವರ್ಣಿಸುವಾಗ ಕವಿಯು ಈ ಮಾತನ್ನು ಹೇಳುತ್ತಾರೆ.

02) " ನೆಲ ಮುಗಿಲ ವಾಲಗವೆ ನಡೆದಂತಿದೆ"

ಸಂದರ್ಭ :- ಈ ವಾಕ್ಯವನ್ನು ಬಸವರಾಜ ಸಾದರ ರವರು ಬರೆದ ಸವಿ ಚೈತ್ರ ಎನ್ನುವ ಪದ್ಯ ಪಾಠದಿಂದ ತೆಗೆದು ಕೊಳ್ಳಲಾಗಿದೆ .ಚೈತ್ರ ಮಾಸದ ವೇಳೆಯಲ್ಲಿ ಪ್ರಕೃತಿಯಲ್ಲಿ ಆಗುವ ಬದಲಾವಣೆಯನ್ನು ವಿವರಿಸುವಾಗ ಕವಿಯು ಈ ಮಾತನ್ನು ಹೇಳುತ್ತಾರೆ.

ವಿವರಣೆ :- ಯುಗಾದಿಯ ಸಂದರ್ಭದಲ್ಲಿ ಪ್ರಕೃತಿಯು ತನ್ನ ಹಳೆಯದನ್ನು ಕಳೆದು ಹೊಸ ಚಿಗುರು,ಹೂವು, ಹೀಗೆ ಹೊಸ ರೂಪವನ್ನು ತಳೆದಾಗ ಪ್ರತಿಯೊಂದು ಜೀವಿಗಳ ಜೀವನದಲ್ಲಿ ಹೊಸ ಉತ್ಸಾಹ ಮೂಡುತ್ತದೆ. ಮುಂಜಾನೆಯ ಇಬ್ಬನಿಯ ಸೌಂಧರ್ಯ ಈ ರೀತಿಯಾದ ಪ್ರಕೃತಿಯ ಸೌಂಧರ್ಯವನ್ನು ವರ್ಣಿಸುವಾಗ ಕವಿಯು ಈ ಮಾತನ್ನು ಹೇಳುತ್ತಾರೆ.

03) "ಎಲ್ಲರೆದೆಗಳ ತುಂಬ ಸವಿಚೈತ್ರವು"

ಸಂದರ್ಭ :- ಈ ವಾಕ್ಯವನ್ನು ಬಸವರಾಜ ಸಾದರ ರವರು ಬರೆದ ಸವಿ ಚೈತ್ರ ಎನ್ನುವ ಪದ್ಯ ಪಾಠದಿಂದ ತೆಗೆದು ಕೊಳ್ಳಲಾಗಿದೆ .ಚೈತ್ರ ಮಾಸದ ಯುಗಾದಿಯ ವೇಳೆಯಲ್ಲಿ ಹಂಚುವ ಪದಾರ್ಥಗಳು ಹಾಗೂ ಸಂತಸವನ್ನು ವಿವರಿಸುವಾಗ ಕವಿಯು ಈ ಮಾತನ್ನು ಹೇಳುತ್ತಾರೆ.

ವಿವರಣೆ :- ಚೈತ್ರ ಮಾಸದ ಯುಗಾದಿಯ ಸಂದರ್ಭದಲ್ಲಿ ಪ್ರಕೃತಿಯು ತನ್ನ ಹಳೆಯದನ್ನು ಕಳೆದು ಹೊಸ ಚಿಗುರು,ಹೂವು, ಹೀಗೆ ಹೊಸ ರೂಪವನ್ನು ತಳೆದಾಗ ಪ್ರತಿಯೊಂದು ಜೀವಿಗಳ ಜೀವನದಲ್ಲಿ ಹೊಸ ಉತ್ಸಾಹ ಮೂಡುತ್ತದೆ ಎಂದು ಹೀಗೆ ಪ್ರಕೃತಿಯ ಸಂತಸವನ್ನು ವರ್ಣಿಸುವಾಗ ಕವಿಯು ಈ ಮಾತನ್ನು ಹೇಳುತ್ತಾರೆ.

**ಪದ್ಯ ಪಾಠ – 03 ಸದ್ದು ಮಾಡದಿರು ಸಿ.ಪಿ.ಕೆ**

01) "ಶಾಂತಿಯಲಿ ಬದುಕಿನೀ ಕರ್ತವ್ಯವನು ಮುಗಿಸು"

ಸಂದರ್ಭ :- ಈ ವಾಕ್ಯವನ್ನು ಸಿ.ಪಿ.ಕೆ ಯವರು ಬರೆದ ಸದ್ದು ಮಾಡದಿರು ಎನ್ನುವ ಪದ್ಯ ಪಾಠದಿಂದ ತೆಗೆದು ಕೊಳ್ಳಲಾಗಿದೆ. ಜೀವನದ ಕರ್ತವ್ಯ ಸಾಧನೆ ಕುರಿತು ಹೇಳುವಾಗ ಕವಿಯು ಈ ಮಾತನ್ನು ಹೇಳುತ್ತಾರೆ.

ವಿವರಣೆ :- ಕವಿಯು ಪ್ರತಿಯೊಬ್ಬ ವ್ಯಕ್ತಿಯು ಜೀವನದಲ್ಲಿ ಸಾಧನೆಯನ್ನು ಮಾಡಬೇಕಾದರೆ ನಾಟಕೀಯವಾಗಿ ಪ್ರಯತ್ನಿಸದೆ ಪ್ರಾಮಾಣಿಕವಾಗಿ ಶಾಂತಿಯಿಂದ ಕಾರ್ಯಸಾಧನೆ ಮಾಡಿ ಜೀವನದ ಸಾರ್ಥಕತೆಯನ್ನು ಕಾಣಬೇಕು. ಎನ್ನುವಾಗ ಕವಿಗಳು ಈ ಮಾತನ್ನು ಹೇಳುತ್ತಾರೆ.

02) "ಸಿಡುಕು ಮಿಡುಕನು ತೊರೆದು ಮೌನಿಯಾಗು"

ಸಂದರ್ಭ :- ಈ ವಾಕ್ಯವನ್ನು ಸಿ.ಪಿ.ಕೆ ಯವರು ಬರೆದ ಸದ್ದು ಮಾಡದಿರು ಎನ್ನುವ ಪದ್ಯ ಪಾಠದಿಂದ ತೆಗೆದು ಕೊಳ್ಳಲಾಗಿದೆ. ಜೀವನದ ಕರ್ತವ್ಯ ಸಾಧನೆ ಕುರಿತು ಹೇಳುವಾಗ ಕವಿಯು ಈ ಮಾತನ್ನು ಹೇಳುತ್ತಾರೆ.

ವಿವರಣೆ :- ಕವಿಯು ಪ್ರತಿಯೊಬ್ಬ ವ್ಯಕ್ತಿಯು ಜೀವನದಲ್ಲಿ ಸಾಧನೆಯನ್ನು ಮಾಡಬೇಕಾದರೆ ಕೋಪ,ಸಿಟ್ಟು,ಮುಂತಾದ ದುರ್ಗುಣಗಳನ್ನು ಬಿಟ್ಟು ಶಾಂತಿಯಿಂದ ಕಾರ್ಯಸಾಧನೆ ಮಾಡಿ ಜೀವನದ ಸಾರ್ಥಕತೆಯನ್ನು ಕಾಣಬೇಕು. ಎನ್ನುವಾಗ ಕವಿಗಳು ಈ ಮಾತನ್ನು ಹೇಳುತ್ತಾರೆ.

**ಪದ್ಯಪಾಠ – 04 ಗುರಿ ಎಂ.ಗೋಪಾಲಕೃಷ್ಣ ಅಡಿಗ.**

01) " ದಾಳಿ ಬಂದೊಡೆ ಶರಣೆಂಬ ಹೆಣ್ತನವು ಬೇಡ"

ಸಂದರ್ಭ :- ಈ ವಾಕ್ಯವನ್ನು ಎಂ ಗೋಪಾಲಕೃಷ್ಣ ಅಡಿಗ ರವರು ಬರೆದ ಗುರಿ ಎನ್ನುವ ಪದ್ಯದಿಂದ ಆಯ್ದು ಕೊಳ್ಳಲಾಗಿದೆ. ಜೀವನದ ಸಾರ್ಥಕತೆಯನ್ನು ಕುರಿತು ಹೇಳುವಾಗ ಕವಿಯು ಈ ಮಾತನ್ನು ಹೇಳುತ್ತಾನೆ.

ವಿವರಣೆ :- ಜೀವನದಲ್ಲಿ ಸಾಧನೆಯನ್ನು ಮಾಡಬೇಕಾದರೆ,ಮಾಡುತ್ತಿರುವ ಕೆಲಸದಲ್ಲಿ ಸಮಸ್ಯೆಗಳು ಬಂದಾಗ ಹಿಂದೆ ಸರಿಯದೆ ಧೈರ್ಯದಿಂದ ಮುಂದೆ ಸಾಗಿ ಯಶಸ್ಸನ್ನು ಸಾಧಿಸಿ ಬದುಕನ್ನು ಸಾರ್ಥಕ ಮಾಡಿಕೊಳ್ಳಬೇಕು ಎಂದು ಹೇಳುವಾಗ ಈ ಮಾತನ್ನು ಕವಿಯು ಹೇಳುತ್ತಾನೆ.

02) "ಒಂದು ಜೀವನಕೇಕೆ ಹಲವು ಸಾಧ್ಯಗಳು "

ಸಂದರ್ಭ :- ಈ ವಾಕ್ಯವನ್ನು ಎಂ ಗೋಪಾಲಕೃಷ್ಣ ಅಡಿಗ ರವರು ಬರೆದ ಗುರಿ ಎನ್ನುವ ಪದ್ಯದಿಂದ ಆಯ್ದು ಕೊಳ್ಳಲಾಗಿದೆ. ಜೀವನದ ಸಾರ್ಥಕತೆಯನ್ನು ಕುರಿತು ಹೇಳುವಾಗ ಕವಿಯು ಈ ಮಾತನ್ನು ಹೇಳುತ್ತಾನೆ.

ವಿವರಣೆ :- ಜೀವನದಲ್ಲಿ ಸಾಧನೆಯನ್ನು ಮಾಡಬೇಕಾದರೆ,ಮಾಡುತ್ತಿರುವ ಕೆಲಸದಲ್ಲಿ ಪ್ರಾಮಾಣಿಕತೆಯಿಂದ ದುಡಿದು ಒಂದೇ ಗುರಿಯನ್ನಿ ಇಟ್ಟುಕೊಂಡು ಅದರ ಯಶಸ್ಸಿಗಾಗಿ ಪ್ರಯತ್ನಿಸಿ ಗೆಲುವನ್ನು ಸಾಧಿಸಿ ಬದುಕನ್ನು ಸಾರ್ಥಕ ಮಾಡಿಕೊಳ್ಳಬೇಕು ಎಂದು ಹೇಳುವಾಗ ಈ ಮಾತನ್ನು ಕವಿಯು ಹೇಳುತ್ತಾನೆ.

03) "ಪರಹಿತಕೆ ಬಳಲುತಿರಲದುವೆ ಜೀವನವು"

ಸಂದರ್ಭ :- ಈ ವಾಕ್ಯವನ್ನು ಎಂ ಗೋಪಾಲಕೃಷ್ಣ ಅಡಿಗ ರವರು ಬರೆದ ಗುರಿ ಎನ್ನುವ ಪದ್ಯದಿಂದ ಆಯ್ದು ಕೊಳ್ಳಲಾಗಿದೆ. ಜೀವನದ ಸಾರ್ಥಕತೆಯನ್ನು ಕುರಿತು ಹೇಳುವಾಗ ಕವಿಯು ಈ ಮಾತನ್ನು ಹೇಳುತ್ತಾನೆ.

ವಿವರಣೆ :- ಜೀವನದಲ್ಲಿ ಸಾಧನೆಯನ್ನು ಮಾಡಬೇಕಾದರೆ, ಮತ್ತೊಬ್ಬರ ಒಳಿತನ್ನು ಬಯಸುತ್ತಾ,ಪರೋಪಕಾರ,ಸಹಾಯ ಮುಂತಾದ ಸದ್ಗುಣಗಳನ್ನು ಬೆಳೆಸಿಕೊಂಡು ಬದುಕಿನ ಯಶಸ್ಸನ್ನು ಪಡೆಯಬೇಕು ಎಂದು ಹೇಳುವಾಗ ಈ ಮಾತನ್ನು ಕವಿಯು ಹೇಳುತ್ತಾರೆ.

**ಪದ್ಯ ಪಾಠ – 05 ಮೂಡಲ್ ಕುಣಿಗಲ್ ಕೆರೆ ಜನಪದ ಗೀತೆ**

01) "ಭಾವಾ ತಂದಾನು ಬಣ್ಣದ ಸೀರೆ"

ಸಂದರ್ಭ :- ಈ ವಾಕ್ಯವನ್ನು ಮತಿಘಟ್ಟ ಕೃಷ್ಣಮೂರ್ತಿ ಯವರು ಸಂಪಾದಿಸಿದ ಮೂಡಲ್ ಕುಣಿಗಲ್ ಕೆರೆ ಎನ್ನುವ ಪದ್ಯದಿಂದ ತೆಗೆದುಕೊಳ್ಳಲಾಗಿದೆ.ಕೆರೆ ತುಂಬಿದಾಗ ಅದರ ಪೂಜೆಗಾಗಿ ಅರ್ಪಿಸುವ ವಸ್ತುಗಳನ್ನು ಕುರಿತು ಹೇಳುವಾಗ ಜನಪದರು ಈ ಮಾತನ್ನು ಹೇಳುತ್ತಾರೆ.

ವಿವರಣೆ :- ಜನಪದರು ಕೆರೆಯು ತುಂಬಿದಾಗ ಕೆರೆಯ ಸೌಂಧರ್ಯವನ್ನು ವರ್ಣಿಸುತ್ತಾ ಆ ಕೆರೆಗೆ ಬಾಗಿನ ಅರ್ಪಿಸಲು ಬೇಕಾದ ವಸ್ತುಗಳನ್ನು ಹೇಳುವಾಗ ಕೆರೆಯಲ್ಲಿನ ಜಲಚರ ಜೀವಿಗಳೆಲ್ಲಾ ಸಂತಸದಿಂದ ಸಂಭ್ರಮಿಸುವುದನ್ನು ವಿವರಿಸುತ್ತಾ ಜನಪದರು ಈ ಮಾತನ್ನು ಹೇಳುತ್ತಾರೆ.

02) "ಕಪ್ಪಕ್ಕಿ ಬಾಯ ಬಿಡುತಾವೆ"

ಸಂದರ್ಭ :- ಈ ವಾಕ್ಯವನ್ನು ಮತಿಘಟ್ಟ ಕೃಷ್ಣಮೂರ್ತಿ ಯವರು ಸಂಪಾದಿಸಿದ ಮೂಡಲ್ ಕುಣಿಗಲ್ ಕೆರೆ ಎನ್ನುವ ಪದ್ಯದಿಂದ ತೆಗೆದುಕೊಳ್ಳಲಾಗಿದೆ. ಕೆರೆ ತುಂಬಿದಾಗ ಅದರ ಸೌಂಧರ್ಯವನ್ನು ಕುರಿತು ಹೇಳುವಾಗ ಜನಪದರು ಈ ಮಾತನ್ನು ಹೇಳುತ್ತಾರೆ.

ವಿವರಣೆ :- ಜನಪದರು ಕೆರೆಯು ತುಂಬಿದಾಗ ಕೆರೆಯ ಸೌಂಧರ್ಯವನ್ನು ವರ್ಣಿಸುತ್ತಾ ಕೆರೆಯಲ್ಲಿನ ಜಲಚರ ಜೀವಿಗಳೆಲ್ಲಾ ಸಂತಸದಿಂದ ಹಾರಾಡುತ್ತಿರುವಾಗ ಅವುಗಳನ್ನು ತಿನ್ನಲು ಪಕ್ಷಿಗಳೆಲ್ಲಾ ಹಾರಾಡುತ್ತಿರುವದನ್ನು ಕಂಡು ಜನಪದರು ಈ ಮಾತನ್ನು ಹೇಳುತ್ತಾರೆ.

03) "ಬೊಬ್ಬೆ ಹೊಡಿದಾವೆ ಬಾಳೆಮೀನು"

ಸಂದರ್ಭ :- ಈ ವಾಕ್ಯವನ್ನು ಮತಿಘಟ್ಟ ಕೃಷ್ಣಮೂರ್ತಿ ಯವರು ಸಂಪಾದಿಸಿದ ಮೂಡಲ್ ಕುಣಿಗಲ್ ಕೆರೆ ಎನ್ನುವ ಪದ್ಯದಿಂದ ತೆಗೆದುಕೊಳ್ಳಲಾಗಿದೆ. ಕೆರೆ ತುಂಬಿದಾಗ ಅದರ ಸೌಂಧರ್ಯವನ್ನು ಕುರಿತು ಹೇಳುವಾಗ ಜನಪದರು ಈ ಮಾತನ್ನು ಹೇಳುತ್ತಾರೆ.

ವಿವರಣೆ :- ಜನಪದರು ಕೆರೆಯು ತುಂಬಿದಾಗ ಕೆರೆಯ ಸೌಂಧರ್ಯವನ್ನು ವರ್ಣಿಸುತ್ತಾ ಆ ಕೆರೆಯ ನೀರಿನಲ್ಲಿನ ಮೀನುಗಳನ್ನು ಮೀನುಗಾರರು ಬಲೆ ಬೀಸಿ ಹಿಡಿದಾಗ ಬಲೆಯಲ್ಲಿ ಒದ್ದಾಡುವ ಮೀನುಗಳನ್ನು ಕಂಡು ಜನಪದರು ಈ ಮಾತನ್ನು ಹೇಳುತ್ತಾರೆ.

## ಪದ್ಯ ಪಾಠ – 06 ವಚನಗಳು ಬಸವಣ್ಣ,ಸಿದ್ದರಾಮ,ಅಕ್ಕಮಹಾದೇವಿ

01) " ಶಿರವೇ ಹೊನ್ನ ಕಳಸವಯ್ಯ"

ಸಂದರ್ಭ :- ಈ ವಾಕ್ಯವನ್ನು ಬಸವಣ್ಣ ನವರು ಬರೆದ ವಚನಗಳು ಎನ್ನುವ ಪದ್ಯದಿಂದ ಆಯ್ದುಕೊಳ್ಳಲಾಗಿದೆ.ಜನರ ಡಾಂಬಿಕ ಭಕ್ತಿಯನ್ನು ಕುರಿತು ಹೇಳುವಾಗ ಈ ಮಾತು ಬರುತ್ತದೆ.

ವಿವರಣೆ :-ಸಮಾಜದಲ್ಲಿನ ಜನರು ಭಕ್ತಿಯನ್ನು ಡಾಂಬಿಕವಾಗಿ,ನಾಟಕೀಯವಾಗಿ ಮಾಡುತ್ತಾರೆ. ಅಂತಹವರು ದೇವರಲ್ಲಿ ಡಾಂಬಿಕವಾದ ಭಕ್ತಿಯನ್ನು ಹೊಂದಿರುತ್ತಾರೆ.ನಿಜವಾದ ಭಕ್ತಿಯೇ ಜೀವನದ ಸಾಧನೆಗೆ ಸಹಕಾರಿಯಾದುದು ಎಂದು ಡಾಂಬಿಕ ಭಕ್ತಿಯನ್ನು ಖಂಡಿಸುತ್ತಾ ಈ ಮಾತನ್ನು ಹೇಳುತ್ತಾರೆ.

02) "ವೇದಾಂತವನೋದಿ ಫಲವೇನಯ್ಯಾ"

ಸಂದರ್ಭ :- ಈ ವಾಕ್ಯವನ್ನು ಸೊನ್ನಲಿಗೆ ಸಿದ್ದರಾಮರು ಬರೆದ ವಚನಗಳು ಎನ್ನುವ ಪದ್ಯದಿಂದ ಆಯ್ದುಕೊಳ್ಳಲಾಗಿದೆ. ಜನರ ಡಾಂಬಿಕ ಭಕ್ತಿಯನ್ನು ಕುರಿತು ಹೇಳುವಾಗ ಈ ಮಾತು ಬರುತ್ತದೆ.

ವಿವರಣೆ :-ಸಮಾಜದಲ್ಲಿನ ಜನರು ಭಕ್ತಿಯನ್ನು ಡಾಂಬಿಕವಾಗಿ,ನಾಟಕೀಯವಾಗದ ಬದುಕನ್ನು ಮಾಡುತ್ತಾರೆ. ಅಂತಹ ಜೀವನದಿಂದ ಏನನ್ನು ಸಾಧಿಸಲು ಸಾಧ್ಯವಿಲ್ಲ ಆದ್ದರಿಂದ ಪ್ರಾಮಾಣಿಕವಾಗಿ,ಸತ್ಯವನ್ನರಿತು ಬದುಕಬೇಕೆನ್ನುತ್ತಾ. ವಚನಕಾರರು ಈ ಮಾತನ್ನು ಹೇಳುತ್ತಾರೆ.

03) "ಬೆಟ್ಟದ ಮೇಲೊಂದು ಮನೆಯ ಮಾಡಿ ಮೃಗಗಳಿಗಂಜಿದಡೆಂತಯ್ಯಾ?"

ಸಂದರ್ಭ :- ಈ ವಾಕ್ಯವನ್ನು ಅಕ್ಕಮಹಾದೇವಿ ಯವರು ಬರೆದ ವಚನಗಳು ಎನ್ನುವ ಪದ್ಯದಿಂದ ಆಯ್ದುಕೊಳ್ಳಲಾಗಿದೆ. ಜನರ ಜೀವನವನ್ನು ಕುರಿತು ಹೇಳುವಾಗ ಈ ಮಾತು ಬರುತ್ತದೆ.

ವಿವರಣೆ :-ಸಮಾಜದಲ್ಲಿ ಹುಟ್ಟಿದ ಮೇಲೆ ಸಮಾಜದ ಯಾವುದೇ ರೀತಿಯ ಹೊಗಳಿಕೆ ತೆಗಳಿಕೆಗಳಿಗೆ ಹೆದರದೆ ಹೊಂದಿಕೊಂಡು ಸಮಾಧಾನದಿಂದ ಜೀವನವನ್ನು ಮಾಡಬೇಕೆಂದು ಆ ಮೂಲಕ ಬದುಕಿನ ಸಾರ್ಥಕತೆಯನ್ನು ಕಾಣಬೇಕೆಂದು ಹೇಳುವಾಗ ವಚನಕಾರರು ಈ ಮಾತನ್ನು ಹೇಳುತ್ತಾರೆ.

## ಪದ್ಯ ಪಾಠ – 07 ನಿಟ್ಟೋಟದಲಿ ಹಾಯ್ದನು ಬಿಟ್ಟ ಮಂಡೆಯಲಿ ಕುಮಾರವ್ಯಾಸ

01) "ಶಿವ ಶಿವ ಕಾದಿಗೆಲಿದೆವು"

ಸಂದರ್ಭ :- ಈ ವಾಕ್ಯವನ್ನು ಕವಿ ಕುಮಾರವ್ಯಾಸ ರವರು ಬರೆದ ನಿಟ್ಟೋಟದಲಿ ಹಾಯ್ದನು ಬಿಟ್ಟ ಮಂಡೆಯಲಿ ಎನ್ನುವ ಪದ್ಯದಿಂದ ತೆಗೆದು ಕೊಳ್ಳಲಾಗಿದೆ.ಯುದ್ಧ ಭೂಮಿಯಲ್ಲಿ ಕುರು ಸೇನೆ ನೋಡಿ ಹೆದರಿದ ಉತ್ತರನ ಪ್ರತಿಕ್ರೀಯೆ ಹೇಳುವಾಗ ಈ ಮಾತು ಬರುತ್ತದೆ.

ವಿವರಣೆ :- ಉತ್ತರನು ಕೌರವರೊಡನೆ ಯುದ್ಧ ಮಾಡಲು ಯುದ್ಧಭೂಮಿಗೆ ಅರ್ಜುನನೊಡಗೂಡಿ ಹೋಗುತ್ತಾನೆ.ಅಲ್ಲಿನ ಅಪಾರವಾದ ಕುರು ಸೇನೆಯನ್ನು ನೋಡಿ ಭಯಗೊಂಡು ಯುದ್ಧ ಮಾಡಲು ನಿರಾಕರಿಸಿ ಭಯದಿಂದ ಆ ಶಿವನೇ ಅವರೊಂದಿಗೆ ಯುದ್ಧಮಾಡಬಹುದೆಂದು ಈ ರೀತಿ ಹೇಳುತ್ತಾನೆ.

02) "ನಿಟ್ಟೋಟದಲಿ ಹಾಯ್ದನು ಬಿಟ್ಟ ಮಂಡೆಯಲಿ"

ಸಂದರ್ಭ :- ಈ ವಾಕ್ಯವನ್ನು ಕವಿ ಕುಮಾರವ್ಯಾಸ ರವರು ಬರೆದ ನಿಟ್ಟೋಟದಲಿ ಹಾಯ್ದನು ಬಿಟ್ಟ ಮಂಡೆಯಲಿ ಎನ್ನುವ ಪದ್ಯದಿಂದ ತೆಗೆದು ಕೊಳ್ಳಲಾಗಿದೆ.ಯುದ್ಧ ಭೂಮಿಯಲ್ಲಿ ಕುರು ಸೇನೆ ನೋಡಿ ಹೆದರಿದ ಉತ್ತರನ ಬಗ್ಗೆ ಹೇಳುವಾಗ ಈ ಮಾತು ಬರುತ್ತದೆ.

ವಿವರಣೆ :- ಉತ್ತರನು ಕೌರವರೊಡನೆ ಯುದ್ದ ಮಾಡಲು ಯುದ್ದಭೂಮಿಗೆ ಅರ್ಜುನನೊಡಗೂಡಿ ಹೋಗುತ್ತಾನೆ.ಅಲ್ಲಿನ ಅಪಾರವಾದ ಕುರು ಸೇನೆಯನ್ನು ನೋಡಿ ಭಯಗೊಂಡು ಯುದ್ದ ಮಾಡಲು ನಿರಾಕರಿಸಿ ಭಯದಿಂದ ರಥದಿಂದ ಇಳಿದು ಒಂದೇ ಸಮನೇ ಓಡುತ್ತಿರುವಾಗ ಈ ರೀತಿ ಹೇಳುತ್ತಾನೆ.

03) " ನಾಡ ನರಿಯವೋಲು ಹಲುಗಿರಿಯೆ ಬಿಡುವೆನೆ"

ಸಂದರ್ಭ :- ಈ ವಾಕ್ಯವನ್ನು ಕವಿ ಕುಮಾರವ್ಯಾಸ ರವರು ಬರೆದ ನಿಟ್ಟೋಟದಲಿ ಹಾಯ್ದನು ಬಿಟ್ಟ ಮಂಡೆಯಲಿ ಎನ್ನುವ ಪದ್ಯದಿಂದ ತೆಗೆದು ಕೊಳ್ಳಲಾಗಿದೆ.ಯುದ್ದ ಭೂಮಿಯಲ್ಲಿ ಕುರು ಸೇನೆ ನೋಡಿ ಹೆದರಿದ ಉತ್ತರನು ಯುದ್ದ ಮಾಡಲು ನಿರಾಕರಿಸಿದಾಗ ಈ ಮಾತು ಬರುತ್ತದೆ.

ವಿವರಣೆ :- ಉತ್ತರನು ಕೌರವರೊಡನೆ ಯುದ್ದ ಮಾಡಲು ಭಯಗೊಂಡು ಹಿಂತಿರುಗಿ ಓಡುತ್ತಿರುವಾಗ ಅರ್ಜುನನು ಉತ್ತರನನ್ನು ಹಿಡಿದು ಯುದ್ದ ಮಾಡುವಂತೆ ಹೇಳಿದಾಗ ಅವನು ನಿರಾಕರಿಸುತ್ತಾನೆ ಆಗ ಅರ್ಜುನನು ಅರಮನೆಯಲಿ ಪೌರುಷವನ್ನು ಹೇಳಿಕೊಂಡೆ ಈಗ ಏನಾಯಿತು ಎಂದು ಈ ರೀತಿ ಹೇಳುತ್ತಾನೆ.

04) " ಎಮ್ಮರಮನೆಯ ನಾರಿಯರೆ ಸಾಕು"

ಸಂದರ್ಭ :- ಈ ವಾಕ್ಯವನ್ನು ಕವಿ ಕುಮಾರವ್ಯಾಸ ರವರು ಬರೆದ ನಿಟ್ಟೋಟದಲಿ ಹಾಯ್ದನು ಬಿಟ್ಟ ಮಂಡೆಯಲಿ ಎನ್ನುವ ಪದ್ಯದಿಂದ ತೆಗೆದು ಕೊಳ್ಳಲಾಗಿದೆ.ಯುದ್ದ ಭೂಮಿಯಲ್ಲಿ ಕುರು ಸೇನೆ ನೋಡಿ ಹೆದರಿದ ಉತ್ತರನ ಪ್ರತಿಕ್ರೀಯೆ ಹೇಳುವಾಗ ಈ ಮಾತು ಬರುತ್ತದೆ.

ವಿವರಣೆ :- ಉತ್ತರನು ಕೌರವರೊಡನೆ ಯುದ್ದ ಮಾಡಲು ಯುದ್ದಭೂಮಿಗೆ ಅರ್ಜುನನೊಡಗೂಡಿ ಹೋಗುತ್ತಾನೆ.ಅಲ್ಲಿನ ಅಪಾರವಾದ ಕುರು ಸೇನೆಯನ್ನು ನೋಡಿ ಭಯಗೊಂಡು ಯುದ್ದ ಭೂಮಿಯಿಂದ ಓಡುತ್ತಿರುವಾಗ ಅರ್ಜುನನು ಯುದ್ದ ಮಾಡುವಂತೆ ಅವನನ್ನು ಹಿಡಿದು ತರುತ್ತಾನೆ ಆಗ ಉತ್ತರನು ಭಯದಿಂದ ಈ ರೀತಿ ಹೇಳುತ್ತಾನೆ.

# ಪ್ರಬಂಧ ಲೇಖನ

ಪ್ರಬಂಧ ರಚನೆಯ ಹಂತಗಳು

01) ಪ್ರಸ್ತಾವನೆ

02) ವಿವರಣೆ

03) ಮುಕ್ತಾಯ (ಉಪಸಂಹಾರ)

## 01) ರಾಷ್ಟ್ರೀಯ ಭಾವೈಕ್ಯತೆ

ನಮ್ಮ ದೇಶವು ಅನೇಕ ಜಾತಿ,ಮತ,ಪಂತಗಳಿಂದ ಕೂಡಿದ ವಿಶಾಲವಾದ ದೇಶವಾಗಿದೆ. ಬಗೆ,ಬಗೆಯ ಸಂಸ್ಕೃತಿ,ಭಾಷೆ,ಜಾತಿಯ ಜನರು ವಿವಿಧತೆಯಲ್ಲಿ ಏಕತೆಯಿಂದ ಬಾಳುತ್ತಾ ನಾವೆಲ್ಲರೂ ಭಾರತಿಯರು ಎಂಬ ರಾಷ್ಟ್ರೀಯ ಭಾವನೆಯನ್ನು ಹೊಂದಿರುವುದೆ ರಾಷ್ಟ್ರೀಯ ಭಾವೈಕ್ಯತೆ. ನಮ್ಮ ದೇಶವು ಪ್ರಜಾಪ್ರಭುತ್ವದಿಂದ ಕೂಡಿದ ಜಾತ್ಯಾತಿತ ರಾಷ್ಟ್ರವಾಗಿದೆ.ಪ್ರತಿಯೊಂದು ಧರ್ಮಿಯರು ತಮ್ಮ ಪದ್ದತಿ,ಸಂಪ್ರದಾಯಗಳನ್ನು ಮುಕ್ತವಾಗಿ ಆಚರಿಸಬಹುದು.

ಭಾರತವು ವಿವಿಧ ಭಾಷೆ, ಬುಡಕಟ್ಟು,ಜನಾಂಗಗಳನ್ನು ಹೊಂದಿದ್ದು ನಾವು ದೇಶದ ಯಾವುದೇ ಮೂಲೆಗೆ ಹೋದರೂ ವೈವಿದ್ಯತೆಯನ್ನು ಕಾಣುತ್ತೇವೆ.ಏಕೆಂದರೆ ಭಾರತೀಯ ನಾಗರಿಕತೆಯು ಬಗೆ,ಬಗೆಯ ಧಾರ್ಮಿಕ ಹಾಗೂ ಸಾಂಸ್ಕೃತಿಕ ನೆಲೆಗಟ್ಟಿನ ಮೇಲೆ ನಡೆಯುತ್ತಿದೆ. ದೇಶದ ಎಲ್ಲಾ ಭಾಗಗಳಲ್ಲಿಯೂ ಸಾಂಸ್ಕೃತಿಕ ಜೀವನ, ಧಾರ್ಮಿಕ ಆಚರಣೆಗಳಲ್ಲಿ ವಿಶಾಲವಾದ ವೈವಿದ್ಯತೆಯನ್ನು ಹೊಂದಿದ್ದರೂ ನಾವೆಲ್ಲಾ ಭಾರತೀಯರೂ ಎಂಬ ಭಾವನೆ ನಮ್ಮಲ್ಲಿ ಬಲವಾಗಿ ಬೇರೂರಿದೆ.

ನಮ್ಮ ದೇಶದ ರಾಷ್ಟ್ರಗೀತೆ,ರಾಷ್ಟ್ರ ಭಾಷೆ,ರಾಷ್ಟ್ರ ಮುದ್ರೆ ಇವು ನಮ್ಮ ಏಕತೆಯ ಪ್ರತೀಕವಾಗಿವೆ. ವಿವಿಧ ದೇಶಭಕ್ತಿ ಗೀತೆಗಳು ನಮ್ಮಲ್ಲಿ ದೇಶಪ್ರೇಮವನ್ನು ,ದೇಶಾಭಿಮಾನವನ್ನು ಹುಟ್ಟಿಸುತ್ತವೆ.ಇಡಿ ದೇಶದಲ್ಲಿ ವಿವಿಧ ಧರ್ಮದವರು ತಮ್ಮದೇಯಾದ ರೀತಿಯಲ್ಲಿ ತಮ್ಮ ಧಾರ್ಮಿಕ ಆಚರಣೆ ಮಾಡುವುದರ ಜೊತೆಗೆ ಅನೇಕ ರಾಷ್ಟ್ರೀಯ ಹಾಗೂ ಸಾಂಸ್ಕೃತಿಕ ಆಚರಣೆಗಳನ್ನು ಮಾಡುವಾಗ ಯಾವುದೇ ಬೇಧ ಭಾವವಿಲ್ಲದೇ ನಾವೆಲ್ಲಾ ಒಂದೆ ಮನೆಯವರಂತೆ ಕೂಡಿ ಬದುಕುತ್ತಿರುವುದು ಜಗತ್ತಿಗೆಲ್ಲಾ ಮಾದರಿಯಾಗಿದೆ.

ಇತ್ತಿಚಿನ ದಿನಗಳಲ್ಲಿ ನಮ್ಮ ದೇಶದ ಪ್ರಗತಿಯು ಅತ್ಯಂತ ವೇಗವಾಗಿ ಬೆಳೆಯುತ್ತಿರುವುದು ಹಾಗೂ ವಿಜ್ಞಾನ , ತಂತ್ರಜ್ಞಾನದಲ್ಲಿ ಸಾದಿಸುತ್ತಿರುವ ಪ್ರಗತಿಯೂ ಜಗತ್ತನ್ನೇ ಬೆರಗಾಗಿಸುತ್ತಿದೆ. ಆದರೆ ನಾವೆಲ್ಲಾ ಮಾತ್ರ ನೆರೆಹೊರೆಯ ದೇಶಗಳೊಂದಿಗೆ ಸ್ನೇಹ,ಸೌಹಾರ್ದತೆಯಿಂದ ನಡೆದುಕೊಳ್ಳುತ್ತಾ ದೇಶದ ಏಕತೆಯನ್ನು ಎತ್ತಿ ಹಿಡಿಯುವುದರ ಮೂಲಕ ದೆಶದ ಪ್ರಗತಿಗೆ ಸಹಕಾರ ನೀಡೋಣ.

ಜೈ ಹಿಂದ್

## 02) ಸ್ವಚ್ಚ ಭಾರತ ಅಭಿಯಾನ

"ಸದೃಡವಾದ ದೇಹದಲ್ಲಿ ಸದೃಡವಾದ ಮನಸ್ಸು ಇರುತ್ತದೆ" ಎಂಬ ನಾಣ್ಣುಡಿಯಂತೆ ನಮ್ಮ ಆರೋಗ್ಯದ ದೃಷ್ಟಿಯಿಂದ ನಾವು ವಾಸಿಸುವ ಪರಿಸರವನ್ನು ಸ್ವಚ್ಛವಾಗಿಟ್ಟುಕೊಳ್ಳುವುದು ನಮ್ಮ ಮುಖ್ಯ ಕೆಲಸವಾಗಿದೆ . ಆ ನಿಟ್ಟಿನಲ್ಲಿ ಪ್ರತಿಯೊಬ್ಬ ನಾಗರಿಕನೂ ಸ್ವಯಂ ಪ್ರೇರಣೆಯಿಂದ ಈ ಸ್ವಚ್ಛತಾ ಕಾರ್ಯದಲ್ಲಿ ತಮ್ಮನ್ನು ತಾವು ತೊಡಗಿಸಿಕೊಳ್ಳುವುದರ ಮೂಲಕ ಈ ಒಂದು ಮಹತ್ವ ಪೂರ್ಣವಾದ ಅಭಿಯಾನವನ್ನು ಯಶಸ್ವಿಯಾಗುವಂತೆ ನೋಡಿಕೊಳ್ಳಬೇಕು.ಇಂತಹ ಮಹತ್ವಪೂರ್ಣವಾದ "ಸ್ವಚ್ಛ ಭಾರತ ಅಭಿಯಾನ" ಯೋಜನೆ ನಮ್ಮಿಂದಲೇ ಪ್ರಾರಂಭವಾಗಬೇಕು.

"ಆರೋಗ್ಯವೇ ಭಾಗ್ಯ"ಎನ್ನುವಂತೆ ಉತ್ತಮ ಆರೋಗ್ಯಕ್ಕೆ ಸ್ವಚ್ಚವಾದ ಹಾಗೂ ಉತ್ತಮವಾದ ಪರಿಸರ ಮುಖ್ಯ. ಈ ಉದ್ದೇಶದಿಂದಾಗಿ ನಮ್ಮ ಇಂದಿನ ಪ್ರಧಾನ ಮಂತ್ರಿಗಳು ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರ ಜನ್ಮದಿನವಾದ 02/10/2014 ರಂದು ಈ "ಸ್ವಚ್ಛ ಭಾರತ ಅಭಿಯಾನ" ಯೋಜನೆಯನ್ನು ಪ್ರಾರಂಭಿಸಿದರು ಗಾಂಧೀಜಿಯವರ 150 ನೇ ಜನ್ಮ ವರ್ಷ ಪೂರ್ಣಗೊಳ್ಳುವ 02/10/2019 ಕ್ಕೆ ಈ ಯೋಜನೆಯ ಗುರಿಯನ್ನು ಇಟ್ಟುಕೊಳ್ಳಲಾಗಿದೆ. ಈ ಸಮಯದಲ್ಲಿ ಭಾರತೀಯರಾದ ನಾವೆಲ್ಲಾ ಈ ಯೋಜನೆಯು ಸಂಪೂರ್ಣವಾಗಿ ಯಶಸ್ವಿಯಾಗಲು ಸಹಕರಿಸಿ ಯಶಸ್ವಿಗೊಳಿಸೋಣ.

ಸ್ವಚ್ಛತೆ ಹಾಗೂ ನೈರ್ಮಲ್ಯದ ಕುರಿತು ಸಾರ್ವಜನಿಕರಲ್ಲಿ ಜಾಗೃತಿಯನ್ನು ಮೂಡಿಸುವಂತಹ ವಿವಿಧ ಯೋಜನೆಗಳನ್ನು ಹಾಕಿಕೊಂಡು ಅವುಗಳ ಪ್ರದರ್ಶನ ಮಾಡುತ್ತಾ ಜನರಲ್ಲಿ ಅರಿವನ್ನು ಮೂಡಿಸಬೇಕು.ಬೀದಿ ನಾಟಕಗಳನ್ನು ಪ್ರದರ್ಶನ ಮಾಡುವುದು, ಬಿತ್ತಿ ಪತ್ರಗಳನ್ನು (ಹಂಚುವುದರ) ಅಂಟಿಸುವುದರ ಮೂಲಕ ಜನತೆಯಲ್ಲಿ ಸ್ವಚ್ಛತೆಯ ಜಾಗೃತಿಯನ್ನು ಮೂಡಿಸುತ್ತಾ ಆ ಮೂಲಕ ಸಮಾಜದ ನೈರ್ಮಲ್ಯಕ್ಕೆ ಸಜ್ಜುಗೊಳಿಸಬೇಕು. ಅನೇಕ ಸಂಘ – ಸಂಸ್ಥೆಗಳ ಮೂಲಕ ಅವರವರ ಗ್ರಾಮಗಳಲ್ಲಿ ಜಾಥಾ ಮಾಡುತ್ತಾ ಜನರಲ್ಲಿ ಸ್ವಚ್ಛ ಭಾರತದ ಮಹತ್ವವನ್ನು ತಿಳಿಸುತ್ತಾ ಅರಿವನ್ನು ಮೂಡಿಸಬೇಕು.ಮಕ್ಕಳ ಮೂಲಕ ಸ್ವಚ್ಛತೆಯ ಅರಿವನ್ನು ಮೂಡಿಸುವ ವರ್ಣಚಿತ್ರಗಳು,ಚಿತ್ರ ಪ್ರದರ್ಶನಗಳು,ಮತ್ತು ಸಂದೇಶಗಳನ್ನು ಸಾರುವ ಬಿತ್ತಿ ಪತ್ರಗಳನ್ನು ಹಂಚುವ ಮುಕಾಂತರ ಸಮುದಾಯದಲ್ಲಿ ಸ್ವಚ್ಛತೆಯ ಅರಿವನ್ನು ಜಾಗೃತಗೊಳಿಸಬೇಕು.

"ಸ್ವಚ್ಛ ಭಾರತ ಅಭಿಯಾನ" ದ ಕನಸನ್ನು ನನಸು ಮಾಡೋಣ ಆ ಒಂದು ನಿಟ್ಟಿನಲ್ಲಿ ನಾವೆಲ್ಲಾ ಪ್ರತಿದಿನ ಸ್ವಲ್ಪ ಸಮಯವನ್ನಾದರೂ ಸ್ವಚ್ಛತೆಗಾಗಿ ಮಿಸಲಿಡೋಣ ಆ ಮೂಲಕ ಸ್ವಚ್ಛ ಪರಿಸರಕ್ಕೆ ಒಂಸು ಚಿಕ್ಕ ಕಾಣಿಕೆಯನ್ನು ನಾವು ನೀಡೋಣ.

**ಜೈ ಹಿಂದ್**

### 03) ಪರಿಸರ ಮಾಲಿನ್ಯ ಮತ್ತು ಪರಿಣಾಮಗಳು

ಪ್ರಕೃತಿಗೂ ಮಾನವನಿಗೂ ಅನ್ಯೋನ್ಯವಾದ ಸಂಬಂಧವಿದೆ. ಮಾನವನು ಪ್ರಕೃತಿಯಲ್ಲಿ ಹುಟ್ಟಿ ಬೆಳೆಯುತ್ತಾನೆ. ತನಗೆ ಬೇಕಾದ ಎಲ್ಲಾ ವಸ್ತುಗಳನ್ನು ಮನುಷ್ಯ ಪರಿಸರದಿಂದ ಪಡೆಯುತ್ತಾನೆ. ಆ ಕಾರಣವಾಗಿ ಮಾನವನು ಪರಿಸರವನ್ನು ತಾಯಿ ಎಂದು ಪೂಜಿಸುತ್ತಾನೆ. ಆದರೆ ಮನುಷ್ಯನು ತನ್ನ ಸ್ವಾರ್ಥ ಸಾಧನೆಗಾಗಿ ಇಂತಹ ಅಮೂಲ್ಯವಾದ ಪರಿಸರವನ್ನು ನಾಶ ಮಾಡುತ್ತಿದ್ದಾನೆ. ಹೀಗೆ ನಾಶವಾದ ಪರಿಸರದಲ್ಲಿಯೇ ತಾನು ಬದುಕುತ್ತಿರುವ - ದರಿಂದ ಅನೇಕ ತೊಂದರೆಗಳಿಗೆ ಸಿಲುಕಿಕೊಳ್ಳುತ್ತಾನೆ.

ಮನುಷ್ಯನ ಸ್ವಾರ್ಥ ಆಸೆಗಾಗಿ ಪರಿಸರವು ಹಲವು ರೀತಿಯಿಂದ ನಾಶವಾಗುತ್ತಿದೆ. ಇಂದು ಆಧುನಿಕತೆಯ ನೆಪದಲ್ಲಿ ಮರಗಳನ್ನು ನಾಸಮಾಡುತ್ತಿದ್ದಾನೆ.ಅನೇಕ ರೀತಿಯ ವಾಹನಗಳನ್ನು ಬಳಸುತ್ತಿದ್ದಾನೆ,ಪಟ್ಟಣ ಮತ್ತು ನಗರಗಳ ಕೊಳಚೆ ನೀರನ್ನು ಕೆರೆ,ನದಿ,ಮುಂತಾದ ನೀರಿನ ಮೂಲಗಳಿಗೆ ಸೇರಿಸುತ್ತಿದ್ದಾನೆ, ಅಲ್ಲದೆ ವಿವಿಧ ಕಾರ್ಖಾನೆಗಳು ಬಿಡುವ ವಿಷ ಜಲ ಮತ್ತು ವಿಷಾನಿಲವನ್ನು ಪರಿಸರಕ್ಕೆ ಸೇರಿಸುವುದರಿಂದ ಪರಿಸರವು ಮಲಿನಗೊಳ್ಳುತ್ತದೆ. ಇಷ್ಟೇ ಅಲ್ಲದೆ ಇನ್ನೂ ಅನೇಕ ರಿತಿಯಲ್ಲಿ ಪರಿಸರವನ್ನು ನಾಶಮಾಡುತ್ತಾನೆ. ಹೀಗೆ ಪರಿಸರವು ಮಲಿನವಾಗುವದರಿಂದ

ಮನುಷ್ಯನಿಗೆ ಮತ್ತು ಪರಿಸರದ ಜೀವಿಗಳಿಗೆ ಬದುಕಲು ತೊಂದರೆಯಾಗುತ್ತದೆ. ಅದರಿಂದ ಅನೇಕ ಮಾರಕ ರೋಗಗಳಿಗೆ ಸಿಲುಕಿಕೊಳ್ಳುತ್ತಾನೆ.ವಿವಿಧ ಚರ್ಮ ರೋಗ,ಅಸ್ತಮಾ,ಎಲುಬು ಕಿಲುಗಳಿಗೆ ಸಂಬಂಧಿಸಿದಂತೆ ರೋಗಗಳು, ಭಯಾನಕ ವಾದ ಕ್ಯಾನ್ಸರ್ ನಂತಹ ರೋಗಗಳು ಮತ್ತು ಅಂಗವೈಕಲ್ಯ ಇತರ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ.

ಈ ರೀತಿಯಾಗಿ ಅನೇಕ ಸಮಸ್ಯೇಗಳಿಗೆ ಕಾರಣವಾದ ಪರಿಸರ ಮಲಿನತೆಯನ್ನು ತಡೆಗಟ್ಟುವುದು ಇಂದು ಅತ್ಯಂತ ಪ್ರಮುಖವಾದ ಕೆಲಸವಾಗಿದೆ. ಪರಿಸರ ನಾಶಮಾಡುವಂತಹ ಪ್ಲಾಸ್ಟಿಕ ಬಳಕೆಯ ಬಗ್ಗೆ , ಮಲೀನ ನೀರನ್ನು ಸರಿಯಾಗಿ ನಿರ್ವಹಿಸುವ ಬಗ್ಗೆ ಜನರಲ್ಲಿ ಜಾಗೃತಿಯನ್ನು ಮೂಡಿಸುವ ಜಾಗೃತಿ ಜಾಥಾ ಹಮ್ಮಿ ಕೊಳ್ಳಬೇಕು.ಮತ್ತು ಪರಿಸರ ರಕ್ಷಣೆ ಮಾಡುವುದಕ್ಕಾಗಿ ಹೆಚ್ಚೆಚ್ಚು ಗಿಡ ಮರಗಳನ್ನು ಬೆಳೆಸುವುದರ ಮೂಲಕ ಪರಿಸರ ರಕ್ಷಣೆಯ ಮಹತ್ವವನ್ನು ಜನರಿಗೆ ತಿಳಿಸಬೇಕು.

ಪರಿಸರವೇ ಪ್ರತಿಯೊಂದು ಜೀವಿಯ ಆಗರ. ಸಕಲ ಜೀವಕೋಟಿಗಳ ಜೀವತಾಣ ಆದ್ದರಿಂದ ಇಂದು ನಾಶವಾಗುತ್ತಿರುವ ಪರಿಸರವನ್ನು ನಾವು ಉಳಿಸಿಕೊಂಡು,ಬೆಳೆಸಿಕೊಂಡು ಹೋಗಬೇಕಾದರೆ ಪರಿಸರ ರಕ್ಷಣೆಯ ಅರಿವು ಪ್ರತಿಯೊಬ್ಬ ವ್ಯಕ್ತಿಗೆ ಇರಬೇಕಾದುದು ಅವಶ್ಯವಾಗಿದೆ. ಆದ್ದರಿಂದ ಪ್ರತಿ ವರ್ಷ ಜೂನ್ 5 ರಂದು ಪರಿಸರ ದಿನಾಚರಣೆಯನ್ನು ಆಚರಿಸುತ್ತೇವೆ.ಅಲ್ಲದೆ ಭೂ ದಿನ , ಭೂಪಾಲ ದಿನ, ಚರ್ನೋಬಿಲ್ ದಿನ ಹೀಗೆ ಭೂಮಿಗೆ ಆಪತ್ತು ಬಂದ ದಿನಗಳನ್ನು ಆಚರಿಸುತ್ತೇವೆ ಆದ್ದರಿಂದ ಅತ್ಯಮೂಲ್ಯವಾದ ಪರಿಸರ ರಕ್ಷಣೆಯ ಕೆಲಸ ನಮ್ಮೆಲ್ಲರ ಹೊಣೆ. ಪರಿಸರ ರಕ್ಷಿಸೋಣ ಜೀವವನ್ನುಳಿಸೋಣ.

**"ಪರಿಸರ ರಕ್ಷಣೆ ನಮ್ಮೆಲ್ಲರ ಹೊಣೆ"**

# ಪತ್ರ ಲೇಖನ

## ವ್ಯವಹಾರಿಕ ಪತ್ರ

ನೀವು ಧಾರವಾಡದ ಸರಕಾರಿ ಪ್ರೌಢಶಾಲೆಯಲ್ಲಿ ಓದುತ್ತಿರುವ ಸುರೇಖಾ ಎಂದು ಭಾವಿಸಿಕೊಂಡು ನಿಮ್ಮ ಶಾಲೆಯಲ್ಲಿ ಹಾಳಾಗಿ ಹೋದ ಶುದ್ದ ಕುಡಿಯುವ ನೀರಿನ ಘಟಕವನ್ನು ಸರಿ ಪಡಿಸುವಂತೆ ಕೋರಿ ನಿಮ್ಮ ತಾಲೂಕಾ ಮುಖ್ಯಾಧಿಕಾರಿಗಳಿಗೊಂದು ಮನವಿ ಪತ್ರ ಬರೆಯಿರಿ.

ಇಂದ,

ಸುರೇಖಾ

ಸರಕಾರಿ ಪ್ರೌಢಶಾಲೆ

ಧಾರವಾಡ

ಗೆ,

ಮಾನ್ಯ ಮುಖ್ಯಾಧಿಕಾರಿಗಳು

ತಾಲೂಕಾ ಪಂಚಾಯತ ಧಾರವಾಡ.

ಮಾನ್ಯರೇ,

ವಿಷಯ :- ನಮ್ಮ ಶಾಲೆಯ ಶುದ್ದ ಕುಡಿಯುವ ನೀರಿನ ಘಟಕವನ್ನು ಸರಿಪಡಿಸುವಂತೆ ಮನವಿ.

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ ನಮ್ಮ ಶಾಲೆಯಲ್ಲಿರು ಶುದ್ದ ಕುಡಿಯುವ ನೀರಿನ ಘಟಕವು ಹಾಳಾಗಿ ಹೋಗಿದೆ.ಆದ್ದರಿಂದ ನಮ್ಮ ಶಾಲೆಯಲ್ಲಿ ಓದುತ್ತಿರುವ ಸುಮಾರು ನೂರೈವತ್ತು ವಿದ್ಯಾರ್ಥಿಗಳಿಗೆ ಕುಡಿಯಲು ನೀರಿನ ತೊಂದರೆಯಾಗುತ್ತಿದೆ.ಹಾಗೂ ಈ ಬಿಸಿಲಿನ ತಾಪವನ್ನು ತಡೆಯಲಾಗುತ್ತಿಲ್ಲ ಅಲ್ಲದೆ ಪ್ರತಿಯೊಬ್ಬ ವಿದ್ಯಾರ್ಥಿಯು ನೀರಿನ ಸಮಸ್ಯೆಯಿಂದ ತುಂಬಾ ತೊಂದರೆಯನ್ನು ಅನುಭವಿಸುತ್ತಿದ್ದಾರೆ ಆದ್ದರಿಂದ ತಾವುಗಳು ದಯವಿಟ್ಟು ಆ ನೀರಿನ ಘಟಕವನ್ನು ಸರಿಪಡಿಸಿ ನಮ್ಮ ತೊಂದರೆಯನ್ನು ದೂರಮಾಡಬೇಕೆಂದು ಈ ಮೂಲಕ ತಮ್ಮಲ್ಲಿ ವಿನಂತ ಮಾಡಿಕೊಳ್ಳುತ್ತೇನೆ.

ಧನ್ಯವಾದಗಳೊಂದಿಗೆ

ಸ್ಥಳ :- ಧಾರವಾಡ — ಇಂತಿ ತಮ್ಮ ವಿಶ್ವಾಸಿ

ದಿನಾಂಕ :- — ಸಹಿ ( ಸುರೇಖಾ)

# ಖಾಸಗಿ ಪತ್ರ

ನಿಮ್ಮನ್ನು ವಿಜಯಪೂರ ದ ಶ್ರೀ ವೀರೇಶ್ವರ ಪೌಢ ಶಾಲೆ ಯಲ್ಲಿ ಓದುತ್ತಿರುವ ಕಾರ್ತಿಕ ಎಂದು ಭಾವಿಸಿಕೊಂಡು ನಿಮ್ಮ ಶಾಲೆಯಲ್ಲಿ ಆಚರಿಸಿದ ಮಕ್ಕಳ ದಿನಾಚರಣೆಯನ್ನು ಕುರಿತು ಬಾಗಲಕೋಟೆಯ ವಿದ್ಯಾಗಿರಿಯಲ್ಲಿ ವಾಸವಾಗಿರುವ ನಿಮ್ಮ ಅಣ್ಣನಾದ ಶಿವಶಂಕರ ನಿಗೊಂದು ಪತ್ರ ಬರೆಯಿರಿ.

ಇಂದ, ದಿನಾಂಕ :-

ಕಾರ್ತಿಕ

ಶ್ರೀ ವೀರೇಶ್ವರ ಪೌಢಶಾಲೆ

ವಿಜಯಪೂರ.

ಪ್ರೀತಿಯ ಅಣ್ಣನಿಗೆ ನಿಮ್ಮ ತಮ್ಮನಾದ ಕಾರ್ತಿಕನು ಮಾಡುವ ನಮಸ್ಕಾರಗಳು.

ನಾನು ಇಲ್ಲಿ ಅಭ್ಯಾಸದೊಂದಿಗೆ ಚೆನ್ನಾಗಿದ್ದೇನೆ.ಅಲ್ಲಿ ತಾವೆಲ್ಲರೂ ಆರೋಗ್ಯದಿಂದ ಇದ್ದೀರೆಂದು ಭಾವಿಸಿಕೊಂಡಿದ್ದೇನೆ. ಮನೆಯಲ್ಲಿ ಅಪ್ಪ,ಅಮ್ಮ ಎಲ್ಲರೂ ಹೇಗಿದ್ದಾರೆಂಬುದನ್ನು ತಿಳಿಸಿ.

ಈ ವರ್ಷ ನಮ್ಮ ಶಾಲೆಯಲ್ಲಿ ಎಲ್ಲಾ ಶಿಕ್ಷಕರು ಮತ್ತು ಶಾಲಾ ಆಡಳಿತ ಮಂಡಳಿಯವರು ಸೇರಿಕೊಂಡು ಜವಾಹರಲಾಲ ನೇಹರೂರವರ ಜನ್ಮ ದಿನಾಚರಣೆ ನಿಮಿತ್ತ ಮಕ್ಕಳ ದಿನಾಚರಣೆಯನ್ನು ಅತ್ಯಂತ ವಿಶಿಷ್ಟವಾದ ರೀತಿಯಲ್ಲಿ ಆಚರಿಸಿದರು. ನಮಗೆಲ್ಲಾ ವಿವಿಧ ವಿನೋದಾತ್ಮಕ ಕ್ರೀಡೆಗಳನ್ನು ಆಡಿಸಿದರೂ ಅದರಿಂದ ನಮಗೆಲ್ಲಾ ಅತ್ಯಂತ ಸಂತೋಷವಾಯಿತು. ಮತ್ತು ಕೊನೆಗೆ ವಿಜೇತರಾದವರಿಗೆ ಪ್ರಶಸ್ತಿಗಳನ್ನು ನೀಡಿದರು.ಅಲ್ಲದೆ ಮಕ್ಕಳಿಗೆ ಅಭ್ಯಾಸದ ಬಗ್ಗೆ ,ಮುಂದಿನ ಶಿಕ್ಷಣದ ಬಗ್ಗೆ ಸುಂದರವಾಗಿ ಮಾತನಾಡಿದರು ಹಾಗೂ ಮಕ್ಕಳಿಗೆ ಆಡಳಿತ ಮಂಡಳಿಯವರು ಸಿಹಿ ಹಂಚಿ ಶುಭವನ್ನು ಕೋರಿದರು.

ನಾನು ಅನೇಕ ಕ್ರೀಡೆಯಲ್ಲಿ ಭಾಗವಹಿಸಿ ಪ್ರಶಸ್ತಿ ಪಡೆದಿದ್ದೇನೆ ಮತ್ತು ಪರಿಕ್ಷೆಗಾಗಿ ಚೆನ್ನಾಗಿ ಸಿದ್ದತೆಯನ್ನು ಮಾಡಿಕೊಳ್ಳುತ್ತಿದ್ದೇನೆ ಉತ್ತಮವಾದ ಫಲಿತಾಂಶವನ್ನು ತೆಗೆಯುವ ಗುರಿ ಹೊಂದಿದ್ದೇನೆ. ನಮ್ಮ ಗುರುಗಳೆಲ್ಲಾ ಚೆನ್ನಾಗಿ ತಿಳಿಸಿಕೊಟ್ಟು ಪರೀಕ್ಷೆಗಾಗಿ ಉತ್ತಮ ರೀತಿಯಲ್ಲಿ ಮಾರ್ಗದರ್ಶನ ಮಾಡುತ್ತಿದ್ದಾರೆ. ಮನೆಯಲ್ಲಿ ಎಲ್ಲರಿಗೂ ನನ್ನ ನಮಸ್ಕಾರಗಳನ್ನು ತಿಳಿಸು.

ನಿಮ್ಮ ಪ್ರೀತಿಯ ತಮ್ಮ

ಕಾರ್ತಿಕ

ಗೆ,

ಶಿವಶಂಕರ

ವಿದ್ಯಾಗಿರಿ ಬಾಗಲಕೋಟೆ.

ತಾ & ಜಿ , ಬಾಗಲಕೋಟೆ.

# ಅಲಂಕಾರಗಳು

ಉಪಮಾ ಅಲಂಕಾರ :- ಉಪಮೆಯ ಮತ್ತು ಉಪಮಾನಗಳನ್ನು ಒಂದಕ್ಕೊಂದು ಹೋಲಿಕೆಮಾಡಿ ಹೇಳುವುದೇ ಉಪಮಾ ಅಲಂಕಾರ.

01) "ಕಾಡು ತುಂಬ ಪ್ರೀತಿ ಹೊಳೆ ಕೋಡಿಯಂತೆ ಹರಿಯಿತು"

ಉಪಮಾನ :- ಕೋಡಿ

ಉಪಮೇಯ :- ಪ್ರೀತಿ ಹೊಳೆ

ಉಪಮಾವಾಚಕ ಪದ :- ಅಂತೆ

ಸಮಾನ ಧರ್ಮ :- ಹರಿಯುವಿಕೆ

ಇಲ್ಲಿ ಉಪಮೇಯವಾದ ಪ್ರೀತಿಯ ಹೊಳೆ ಯನ್ನು ಉಪಮಾನವಾದ ಕೋಡಿಗೆ ಹೋಲಿಸಿ ಹೇಳಲಾಗಿರುವದರಿಂದ ಇದು ಉಪಮಾಲಂಕಾರವಾಗಿದೆ.

02) "ಗಿಡ ಗಿಡವು ಅಪ್ಪಿಕೊಂಡು ಕುಣಿಯುವಂತೆ ಕಂಡಿತು"

ಉಪಮಾನ :- ಅಪ್ಪಿಕೊಂಡು ಕುಣಿಯುವುದು

ಉಪಮೇಯ :- ಪ್ರೀತಿ ತುಂಬಿರುವುದು

ಉಪಮಾವಾಚಕ ಪದ :- ಅಂತೆ

ಸಮಾನ ಧರ್ಮ :- ಪ್ರೀತಿ

ಇಲ್ಲಿ ಉಪಮೇಯವಾದ ಪ್ರೀತಿ ತುಂಬಿರುವುದನ್ನು ಉಪಮಾನವಾದ ಅಪ್ಪಿಕೊಂಡು ಕುಣಿಯುವುದ ಕ್ಕೆ ಹೋಲಿಸಿ ಹೇಳಲಾಗಿರುವದರಿಂದ ಇದು ಉಪಮಾಲಂಕಾರವಾಗಿದೆ.

03) " ತಟ್ಟೆಯೊಳು ಕರ್ಪೂರ ಮೌನದಲಿ ಕರಗುವೊಲು"

ಉಪಮಾನ :- ಕರ್ಪೂರ ಮೌನದಿಂದ ಕರಗುವುದು

ಉಪಮೇಯ :- ಬದುಕಿನ ಕರ್ತವ್ಯ

ಉಪಮಾವಾಚಕ ಪದ :- ವೊಲು

ಸಮಾನ ಧರ್ಮ :- ಮೌನ

ಇಲ್ಲಿ ಉಪಮೇಯವಾದ ಬದುಕಿನ ಕರ್ತವ್ಯವನ್ನು ಉಪಮಾನವಾದ ಕರ್ಪೂರ ಮೌನದಿಂದ ಕರಗುವದ ಕ್ಕೆ ಹೋಲಿಸಿ ಹೇಳಲಾಗಿರುವದರಿಂದ ಇದು ಉಪಮಾಲಂಕಾರವಾಗಿದೆ.

04) “ದೀಪದೆದುರಿಗೆ ತಿಮಿರ ಸರಿಯುವಂತೆ ಶಾಂತಿಯಲಿ ಬದುಕಿನ ಕರ್ತವ್ಯವನು ಮುಗಿಸು”

ಉಪಮಾನ :- ದೀಪದೆದುರಿಗೆ ತಿಮಿರ ಸರಿಯುವುದು

ಉಪಮೇಯ :- ಬದುಕಿನ ಕೆಲಸ

ಉಪಮಾವಾಚಕ ಪದ :- ಅಂತೆ

ಸಮಾನ ಧರ್ಮ :- ಮೌನ

ಇಲ್ಲಿ ಉಪಮೇಯವಾದಬದುಕಿನ ಕೆಲಸವನ್ನು ಉಪಮಾನವಾದ ದೀಪದೆದುರಿಗೆ ತಿಮಿರ ಸರಿಯುವುದಕ್ಕೆ ಹೋಲಿಸಿ ಹೇಳಲಾಗಿರುವದರಿಂದ ಇದು ಉಪಮಾಲಂಕಾರವಾಗಿದೆ.

05) “ರವಿಕರಕೆ ಕರಗುವ ಇಬ್ಬನಿವೊಲಿರು ಸಿಡುಕು ಮಿಡುಕನು ತೊರೆದು ಮೌನಿಯಾಗು”

ಉಪಮಾನ :- ಕರಗುವ ಇಬ್ಬನಿ

ಉಪಮೇಯ :- ಕೋಪ ಬಿಟ್ಟು ಮೌನಿಯಾಗುವುದು

ಉಪಮಾವಾಚಕ ಪದ :- ವೊಲು

ಸಮಾನ ಧರ್ಮ :- ಮೌನ (ಶಾಂತಿ)

ಇಲ್ಲಿ ಉಪಮೇಯವಾದ ಕೋಪ ತೊರೆದು ಮೌನಿಯಾಗಿರುವುದ ನ್ನು ಉಪಮಾನವಾದ ಕರಗುವ ಇಬ್ಬನಿಗೆ ಹೋಲಿಸಿ ಹೇಳಲಾಗಿರುವದರಿಂದ ಇದು ಉಪಮಾಲಂಕಾರವಾಗಿದೆ.

06) “ಬಾಳೆಯ ಹಣ್ಣಿನಂತೆ ಬಾಗಿದ ಕುಣಿಗಲು ಕೆರೆ”

ಉಪಮಾನ :- ಬಾಳೆಯ ಹಣ್ಣು

ಉಪಮೇಯ :- ಕುಣಿಗಲು ಕೆರೆ

ಉಪಮಾವಾಚಕ ಪದ :- ಅಂತೆ

ಸಮಾನ ಧರ್ಮ :- ಸೌಂಧರ್ಯ (ಬಾಗಿರುವಿಕೆ)

ಇಲ್ಲಿ ಉಪಮೇಯವಾದ ಕುಣಿಗಲು ಕೆರೆಯ ನ್ನು ಉಪಮಾನವಾದ ಬಾಳೆಯ ಹಣ್ಣಿಗೆ ಹೋಲಿಸಿ ಹೇಳಲಾಗಿರುವದರಿಂದ ಇದು ಉಪಮಾಲಂಕಾರವಾಗಿದೆ.

07) “ನಿಂಬೆಯ ಹಣ್ಣಿನಂತೆ ತುಂಬಿದ ಕುಣಿಗಲು ಕೆರೆ”

ಉಪಮಾನ :- ನಿಂಬೆಯ ಹಣ್ಣು

ಉಪಮೇಯ :- ಕುಣಿಗಲು ಕೆರೆ

ಉಪಮಾವಾಚಕ ಪದ :- ಅಂತೆ

ಸಮಾನ ಧರ್ಮ :- ಸೌಂಧರ್ಯ (ತುಂಬಿರುವುದು)

ಇಲ್ಲಿ ಉಪಮೇಯವಾದ ಕುಣಿಗಲು ಕೆರೆಯ ನ್ನು ಉಪಮಾನವಾದ ನಿಂಬೆಯ ಹಣ್ಣಿಗೆ ಹೋಲಿಸಿ ಹೇಳಲಾಗಿರುವದರಿಂದ ಇದು ಉಪಮಾಲಂಕಾರವಾಗಿದೆ.

08) "ಸಂಗೀತ ಲೋಕದಲ್ಲಿ ಧೃವತಾರೆಯಂತೆ ಬೆಳಗುತ್ತಿರುವ ಪಂಡಿತ ಪುಟ್ಟರಾಜ ಗವಾಯಿಗಳು"

ಉಪಮಾನ :- ಧೃವತಾರೆ

ಉಪಮೇಯ :- ಪುಟ್ಟರಾಜ ಗವಾಯಿಗಳು

ಉಪಮಾವಾಚಕ ಪದ :- ಅಂತೆ

ಸಮಾನ ಧರ್ಮ :- (ಮಿನುಗುವುದು ) ಬೆಳಗುವುದು.

ಇಲ್ಲಿ ಉಪಮೇಯವಾದ ಪುಟ್ರಾಜ ಗವಾಯಿಗಳ ನ್ನು ಉಪಮಾನವಾದ ಧೃವತಾರೆಗೆ ಹೋಲಿಸಿ ಹೇಳಲಾಗಿರುವದರಿಂದ ಇದು ಉಪಮಾಲಂಕಾರವಾಗಿದೆ.

09) "ನಾಡ ನರಿಯವೊಲ್ ಎನಗೆ ನೀ ಹಲುಗಿರಿಯೆ"

ಉಪಮಾನ :- ನಾಡನರಿ

ಉಪಮೇಯ :- ಉತ್ತರಕುಮಾರ

ಉಪಮಾವಾಚಕ ಪದ :- ವೊಲ್

ಸಮಾನ ಧರ್ಮ :- ಹೇಡಿತನ (ಶೌರ್ಯವಿಲ್ಲದ್ದು)

ಇಲ್ಲಿ ಉಪಮೇಯವಾದ ಉತ್ತರಕುಮಾರನನ್ನು ಉಪಮಾನವಾದ ನಾಡನರಿಗೆ ಹೋಲಿಸಿ ಹೇಳಲಾಗಿರುವದರಿಂದ ಇದು ಉಪಮಾಲಂಕಾರವಾಗಿದೆ.

10) "ಸಾವಿರಾರು ಮಳೆಬಿಲ್ಲುಗಳು ಸೇರಿ ಕುಣಿದಂತೆ ತೋರುತಿತ್ತು"

ಉಪಮಾನ :- ಸಾವಿರಾರು ಮಳೆಬಿಲ್ಲುಗಳು

ಉಪಮೇಯ :- ಬನದ ಬಗೆಬಗೆಯ ಹೂಗಳು

ಉಪಮಾವಾಚಕ ಪದ :- ಅಂತೆ

ಸಮಾನ ಧರ್ಮ :- ಸೌಂಧರ್ಯ

ಇಲ್ಲಿ ಉಪಮೇಯವಾದ ಬನದ ಹೂಗಳನ್ನು ಉಪಮಾನವಾದ ಮಳೆಬಿಲ್ಲಿಗೆ ಹೋಲಿಸಿ ಹೇಳಲಾಗಿರುವದರಿಂದ ಇದು ಉಪಮಾಲಂಕಾರವಾಗಿದೆ.

** **ರೂಪಕ ಅಲಂಕಾರ**

"ಉಪಮಾನ ಮತ್ತು ಉಪಮೇಯಗಳಲ್ಲಿ ಬೇದವನ್ನು ತೋರಿಸದೆ ಎರಡು ಒಂದೇ ಎಂದು ಭಾವಿಸಿ ಹೇಳುವ ಅಲಂಕಾರವೇ ರೂಪಕ ಅಲಂಕಾರ"

01) "ಬಲಗಡಲು"

ಉಪಮಾನ :- ಕಡಲು

ಉಪಮೇಯ :- ಬಲ (ಸೈನ್ಯ)

ಇಲ್ಲಿ ಉಪಮಾನವಾದ ಕಡಲಿಗೂ ಉಪಮೇಯ ವಾದ ಬಲಕ್ಕೂ ಯಾವುದೇ ವ್ಯತ್ಯಾಸವನ್ನೂ ತೋರಿಸದೆ ಎರಡು ಒಂದೇ ಎಂದು ಅಭೇದವನ್ನೂ ಕಲ್ಪಿಸಿ ಹೇಳಿರುವುದರಿಂದ ಇದು ರೂಪಕಲಂಕಾರ.

02) "ವನಜಮುಖಿ"

ಉಪಮಾನ :-ವನಜ

ಉಪಮೇಯ :- ಮುಖಿ (ಅರಮನೆಯ ಸಖಿಯರು)

ಇಲ್ಲಿ ಉಪಮಾನವಾದ ವನಜಕ್ಕೂ ಉಪಮೇಯ ವಾದ ಮುಖಿಯರಿಗೂ ಯಾವುದೇ ವ್ಯತ್ಯಾಸವನ್ನೂ ತೋರಿಸದೆ ಎರಡು ಒಂದೇ ಎಂದು ಅಭೇದವನ್ನೂ ಕಲ್ಪಿಸಿ ಹೇಳಿರುವುದರಿಂದ ಇದು ರೂಪಕಲಂಕಾರ.

03) "ನಾಡನರಿ"

ಉಪಮಾನ :- ನಾಡನರಿ

ಉಪಮೇಯ :- ಉತ್ತರಕಮಾರ

ಇಲ್ಲಿ ಉಪಮಾನವಾದ ನಾಡನರಿಗೂ ಉಪಮೇಯ ವಾದ ಉತ್ತರಕುಮಾರನಿಗೂ ಯಾವುದೇ ವ್ಯತ್ಯಾಸವನ್ನೂ ತೋರಿಸದೆ ಎರಡು ಒಂದೇ ಎಂದು ಅಭೇದವನ್ನೂ ಕಲ್ಪಿಸಿ ಹೇಳಿರುವುದರಿಂದ ಇದು ರೂಪಕಲಂಕಾರ.

04) "ಸೇನಾಸಾಗರ"

ಉಪಮಾನ :- ಸಾಗರ

ಉಪಮೇಯ :- ಸೇನೆ

ಇಲ್ಲಿ ಉಪಮಾನವಾದ ಸಾಗರಕ್ಕೂ ಉಪಮೇಯ ವಾದ ಸೈನ್ಯಕ್ಕೂ ಯಾವುದೇ ವ್ಯತ್ಯಾಸವನ್ನೂ ತೋರಿಸದೆ ಎರಡು ಒಂದೇ ಎಂದು ಅಭೇದವನ್ನೂ ಕಲ್ಪಿಸಿ ಹೇಳಿರುವುದರಿಂದ ಇದು ರೂಪಕಲಂಕಾರ.

05) "ಸೀತೆಯ ಮುಖಕಮಲ ಅರಳಿತು"

ಉಪಮಾನ :- ಕಮಲ

ಉಪಮೇಯ :- ಸೀತೆಯ ಮುಖ

ಇಲ್ಲಿ ಉಪಮಾನವಾದ ಕಮಲಕ್ಕೂ ಉಪಮೇಯ ವಾದ ಸೀತೆಯ ಮುಖಕ್ಕೂ ಯಾವುದೇ ವ್ಯತ್ಯಾಸವನ್ನೂ ತೋರಿಸದೆ ಎರಡು ಒಂದೇ ಎಂದು ಅಭೇದವನ್ನೂ ಕಲ್ಪಿಸಿ ಹೇಳಿರುವುದರಿಂದ ಇದು ರೂಪಕಲಂಕಾರ.

**( ಸೂಚನೆ :- ನಿದಾನ ಕಲಿಕಾ ಮಕ್ಕಳು ಕವಿ ಪರಿಚಯವನ್ನು ವಾಕ್ಯರೂಪದಲ್ಲಿ ಬರೆಯಲು ಅಸಮರ್ಥರಾದರೆ ಈ ಕೆಳಗೆ ನೀಡಲಾದ ಮಾದರಿಯಲ್ಲಿ ಬರೆದರೂ ಅಂಕಗಳು ಸಿಗುತ್ತವೆ.)**

ಉದಾಹರಣೆ :-ಕವಿಯ/ಲೇಖಕರ ಹೆಸರು :-____________________________

ಕಾಲ:- ________________________

ಸ್ಥಳ :- ________________________

ಕೃತಿಗಳು :-______________________ ತಮಗೆ ತಿಳಿದ ಸರಳವಾದ ಒಂದೆರಡು ಕೃತಿಗಳ ಹೆಸರನ್ನು ಬರೆಯಬೇಕು.

ಪ್ರಶಸ್ತಿಗಳು :- ____________________ ತಮಗೆ ಗೊತ್ತಿರುವ ಒಂದೆರಡು ಪ್ರಶಸ್ತಿಗಳ ಹೆಸರನ್ನು ಬರೆಯಬೇಕು.

**( ಸೂಚನೆ :- ನಿದಾನ ಕಲಿಕಾ ಮಕ್ಕಳು ಸಂದರ್ಭದೊಡನೆ ವಿವರಿಸಿ ಪ್ರಶ್ನೆಗೆ ಉತ್ತರವನ್ನು ವಾಕ್ಯರೂಪದಲ್ಲಿ ಬರೆಯಲು ಅಸಮರ್ಥರಾದರೆ ಈ ಕೆಳಗೆ ನೀಡಲಾದ ಮಾದರಿಯಲ್ಲಿ ಬರೆದರೂ ಅಂಕಗಳು ಸಿಗುತ್ತವೆ.)**

ಪಾಠದ ಹೆಸರು :-__________________________________

ಲೇಖಕರ/ಕವಿಯ ಹೆಸರು :- _____________________________

ಆಕರ ಕೃತಿ :- ____________________________________

ವಿವರಣೆ :- ಆ ಹೇಳಿಕೆಯ ಸನ್ನಿವೇಶದ ಕುರಿತು ಎರಡು ಮೂರು ವಾಕ್ಯಗಳಲ್ಲಿ ವಿವರಿಸಿ ಬರೆಯಬೇಕು.